ವಿತ್ತೀಯ ಕಾರ್ಯಕಲಾಪಗಳು.

೧೯೮೭–೮೮ರ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ (ಮುಂದುವರಿದಿದೆ)

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).–ಸನ್ಮಾನ್ಯ ಅಧ್ಯಕ್ಷರೇ ೧೯೮೭–೮೮ನೇ ವರ್ಷದ ಆಯವ್ಯಯ ಪತ್ರದ ಅನುಮೋದನೆಗಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಮುಂದೆ ಮಂಡಿಸಿದ್ದಾರೆ. ಇದರ ಬಗ್ಗೆ ಮುಂದಿನ ಜನಜೀವನದಲ್ಲಿ ಆಡಳಿತದಲ್ಲಿ ದಕ್ಷತೆ, ಸ್ವಚ್ಛತೆಯನ್ನು ಜನಜೀವನದಲ್ಲಿ ಆಮೂಲಾಗ್ರವಾದ ಬದಲಾವಣೆಯನ್ನು ತರುವಂತಹ ಆಯವ್ಯಯ ಪತ್ರವನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಮುಂದೆ ಮಂಡಿಸಬಹುದು ಎಂದು ನಾನು ಭಾವಿಸಿದ್ದೆ. ಆದರೆ ಈ ಆಯವ್ಯಯ ಪತ್ರವನ್ನು ನೋಡಿದ ಮೇಲೆ ನನಗಂತೂ ಸಂಪೂರ್ಣವಾಗಿ ನಿರಾಸೆಯಾಗಿದೆ. ಈ ಆಯವ್ಯಯ ಪತ್ರದಲ್ಲಿ ಸುಮಾರು ೧೪೫.೫೪ ಲಕ್ಷ ರೂಪಾಯಿಗಳ ಹೆಚ್ಚಿನ ತೆರಿಗೆಯನ್ನು ಹಾಕಿದ್ದಾರೆ. ಪ್ರತಿ ವರ್ಷ ಈ ರಾಜ್ಯದಲ್ಲಿ ಆಯವ್ಯಯ ಪತ್ರವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಹಣಕಾಸು ಖರ್ಚು ಮಾಡುವುದಕ್ಕೆ ಸಂಪನ್ಮೂಲಗಳನ್ನು ಜಾಸ್ತಿ ಮಾಡುವುದಕ್ಕೆ ಈಗ ಇರತಕ್ಕಂಥ ತೆರಿಗೆ ಭಾರವನ್ನು ಹೆಚ್ಚಿಸುವುದಕ್ಕೆ ತೆರಿಗೆಯನ್ನು ಪ್ರತಿ ವರ್ಷವೂ ಜಾಸ್ತಿ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಎಲ್ಲಿ ತೆರಿಗೆ ಸೋರಿ ಹೋಗುತ್ತಿದೆಯೋ ಅದನ್ನು ಸೋರಿ ಹೋಗದಂತೆ ಸರಿಪಡಿಸುವ ಕೆಲಸವನ್ನು ಯಾರೂ ಸಹ ಮಾಡಲಿಲ್ಲ. ಜನಜೀವನದಲ್ಲಿ ಜನತೆ ಸರಿಯಾಗಿ ಜೀವನ ಮಾಡುವುದಕ್ಕೆ ಅನುಕೂಲ ಮಾಡಿ ಕೊಡುವಂತಹ ಪ್ರಯತ್ನವನ್ನು ಈ ಆಯವ್ಯಯ ಪತ್ರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳ ಭಾಷಣದ ಪ್ರಥಮದಲ್ಲಿ ಬಹಳ ಸುಂದರವಾದ ಮಾತುಗಳನ್ನು ಹೇಳಿದ್ದಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಒಂದು ಮಹಾಕ್ರಾಂತಿಯ ಚುನಾವಣೆಗಳು, ಇತ್ಯಾದಿ ಇತ್ಯಾದಿಗಳನ್ನು ಹೇಳಿದ್ದಾರೆ. ಆದರೆ ರಾಜ್ಯದ ಜನತೆಯ ಪರಿಸ್ಥಿತಿ ಹೇಗಿದೆ ? ಅವರು ಯಾವ ರೀತಿಯಲ್ಲಿ ಜನಜೀವನ ಮಾಡುತ್ತಿದ್ದಾರೆ ಎನ್ನುವುದನ್ನು ಮೊದಲು ಪ್ರಸ್ತಾಪ ಮಾಡಬಹುದಿತ್ತು. ಆದರೆ ಆ ಮಾತನ್ನು ಅವರು ಹೇಳಲಿಲ್ಲ. ಅವರು ಏನು ಹೇಳಿದ್ದಾರೆಂದರೆ ಕಳೆದ ಜನವರಿ ೩೧ರಂದು ನಮ್ಮ ರಾಜ್ಯದ ಸುಮಾರು ಅರವತ್ತು ಸಾವಿರ ಮಂದಿ ಜನತೆಯ ಚುನಾಯಿತ ಪ್ರತಿನಿಧಿಗಳು ಸೇರಿದ್ದ ಬೃಹತ್ ಸಭೆಯ ಭವ್ಯ ದೃಶ್ಯ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ತಮ್ಮಲ್ಲಿ ಅನೇಕ ಮಂದಿ ಆ ದೃಶ್ಯವನ್ನು ನೋಡಿದ್ದೀರಿ. ಅದೊಂದು ಅಭೂತಪೂರ್ವ ಸಮ್ಮೇಳನ ಇಂಥ ದೊಡ್ಡ ಜನತೆಯ ಅಧಿಕೃತ ಪ್ರತಿನಿಧಿಗಳ ಸಭೆ ಜರುಗಿದ್ದುದು ಬಹುಶಃ ಮಾನವ ಇತಿಹಾಸದಲ್ಲೇ ಮೊತ್ತ ಮೊದಲ ಬಾರಿ ಇರಬೇಕು. ಪ್ರತಿಯೊಂದು ಗ್ರಾಮದಿಂದಲೂ ಆಯ್ಕೆಯಾಗಿ ಬಂದ ಪ್ರತಿನಿಧಿಗಳು ಸೇರಿದ್ದರು. ಗ್ರಾಮೀಣ ಕರ್ನಾಟಕದ ಈ ನವ ಪ್ರಭುಗಳ ಕಣ್ಣಲ್ಲಿ ಉತ್ಸಾಹ ಹಾಗೂ ನಿರೀಕ್ಷೆಗಳನ್ನು ಮಿಂಚುತ್ತಿದ್ದುದನ್ನು ಕಂಡೆ ಎನ್ನುವ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಸ್ವಾಮಿ. ಚುನಾಯಿತ ಪ್ರತಿನಿಧಿಗಳ ಕಣ್ಣಲ್ಲಿ ತಾವು ಬೆಳಕು ಕಂಡಿರಬಹುದು. ಆದರೆ ಯಾರು ಅವರನ್ನು ಚುನಾಯಿಸಿ ಕಳುಹಿಸಿ ಕೊಟ್ಟಿದ್ದಾರೋ ಅವರು ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಚಳುವಳಿಯ ರೂಪದಲ್ಲಿ ಸರ್ಕಾರದ ನೀತಿಯನ್ನು ಖಂಡಿಸಿ ಜೈಲು ತುಂಬುತ್ತಿದ್ದಾರೆ. ರಾಜ್ಯಾದ್ಯಂತ ಇವತ್ತು ಜೈಲಿನಲ್ಲಿ ಜನರು ಭರ್ತಿಯಾಗುತ್ತಿದ್ದಾರೆ. ಈ ಜನರ ಕಣ್ಣಲ್ಲಿ ತಾವು ಹೊಳಪು ಕಾಣಬೇಕು, ಆ ಪ್ರಭುಗಳ ಕಣ್ಣಲ್ಲಿ ತಾವು ಮಿಂಚು ಕಾಣಬೇಕು. ಚುನಾಯಿತ ಪ್ರತಿನಿಧಿಗಳ ಕಣ್ಣಲ್ಲಿ ಮಿಂಚು ಕಂಡರೆ ಯಾವ ಸಾಧನೆಯನ್ನು ಮಾಡಿದಂತಾಗುವುದಿಲ್ಲ. ಆ ಮಾತು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದು ಸರಿಯಾದುದು ಅಲ್ಲ. ನಾನು ಬಹಳ ನೊಂದ ಹೃದಯದಿಂದ ಈ ಮಾತನ್ನು ಹೇಳಬೇಕಾಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸರ್ಕಾರದವರು ಒಪ್ಪಿಕೊಂಡಿರುವ ರೀತಿಯಲ್ಲೇ ಕಳೆದ ನಾಲ್ಕು ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲವಿದೆ. ಸರ್ಕಾರದ ಸಂಪನ್ಮೂಲಗಳಿಗೆ ಧಕ್ಕೆಯಾಗಿದೆ ಸರ್ಕಾರದ ಆದಾಯಕ್ಕೆ ಧಕ್ಕೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದ ಜನಜೀವನ ಹೇಗಿದೆ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಮನಗಂಡಿದ್ದಾರೆ. ಆದರೂ ಸಹ ಸನ್ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರ, ಕೂಲಿಕಾರ್ಮಿಕರ ಹರಿಜನ ಮತ್ತು ಗಿರಿಜನ ಬಂಧುಗಳಿಗೆ ನ್ಯಾಯ ಸಿಕ್ಕಿದೆಯೇ ? ಅವರಿಗೆ ಅನುಕೂಲವಾಗಿದೆಯೇ ? ಎಂದು ನೋಡಿದರೆ ಖಂಡಿತವಾಗಿ ಆಗಿಲ್ಲವೆಂದು ಹೇಳಬಹುದು, ಬಡ

ರೈತರು ಖರ್ಚು ಮಾಡುವಂತಹ ಒಂದೆರಡು ರೂಪಾಯಿಗಳ ಮೇಲೆ ೧೫ ಪೈಸೆ ತೆರಿಗೆಯನ್ನು ಕೊಡಬೇಕಾಗಿದೆ. ಸರ್ಕಾರದ ನೀತಿಯನ್ನು ಖಂಡಿಸಿ ರಾಜ್ಯದ ರೈತರು ಜೈಲು ತುಂಬಲು ಚಳುವಳಿಯನ್ನು ಮಾಡುತ್ತಿದ್ದಾರೆ. ಇತ್ತೀಚಿನ ದಿವಸಗಳಲ್ಲಿ ಸರ್ಕಾರದ ನೀತಿ ಹೇಗಿದೆ ಎಂದರೆ ಚಳುವಳಿ ಮಾಡಿದರೂ ಸಹ ಕೇಳುವವರು ಇಲ್ಲ. ಅದೇ ಹಿಂದಿನ ಸರ್ಕಾರಗಳಲ್ಲಿ ಯಾರಾದರೂ ಚಳುವಳಿಯನ್ನು ಮಾಡಿದರೆ ತಕ್ಷಣ ಅಲ್ಲಿಗೆ ಧಾವಿಸಿ ಅವರ ಸಮಸ್ಯೆಗಳನ್ನು ಕೇಳಿ ಆ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಆದರೆ ಈಗಿನ ಸರ್ಕಾರ ಏನು ತಿಳಿದುಕೊಂಡಿದೆ ಎಂದರೆ ಚಳುವಳಿ ಮಾಡುತ್ತಾರೆ. ಅವರಿಗೆ ಸುಸ್ತಾದಾಗ ಅವರೇ ವಾಪಸ್ಸು ಹೋಗುತ್ತಾರೆ ಎಂದು ಮನಗಂಡು ಅವರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನವನ್ನೇ ಮಾಡುವುದಿಲ್ಲ. ಇಂತಹ ಬರಗಾಲದಲ್ಲಿಯೂ ಸಹ ಸನ್ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ರಾಜ್ಯದ ಸರ್ಕಾರಿ ನೌಕರರ ವೇತನವನ್ನು ಪರಿಷ್ಕರಣ ಮಾಡಿದ್ದಾರೆ. ಇದರಿಂದ ಒಂದು ವರ್ಷಕ್ಕೆ ೧೦೦ ಕೋಟಿ ರೂಪಾಯಿಗಳ ಹೆಚ್ಚಿನ ಹೊರೆ ರಾಜ್ಯ ಸರ್ಕಾರದ ಮೇಲೆ ಬೀಳುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಕೇಳುತ್ತೇನೆ. ರಾಜ್ಯ ಇಂತಹ ವಿಚಿತ್ರ ಸಂದರ್ಭದಲ್ಲಿ ಸರ್ಕಾರಿ ನೌಕರರ ವೇತನವನ್ನು ಇನ್ನೂ ಒಂದು ವರ್ಷ ಕಾಲ ಮುಂದೂಡಿದ್ದರೆ ಅವರೇನು ಮಾಡುತ್ತಿರಲಿಲ್ಲ. ಅವರಿಗೂ ರಾಜ್ಯದ ಸಂಕಷ್ಟ ಪರಿಸ್ಥಿತಿ ಗೊತ್ತಿದೆ.

೧-೦೦ ಪಿ. ಎಂ.

ಇಂಥ ಒಂದು ಪರಿಸ್ಥಿತಿಯಲ್ಲಿ ೧-೨ ವರ್ಷ ನಿಮ್ಮ ವೇತನ ಪರಿಷ್ಕರಣವನ್ನು ಮಾಡಲು ಸಮಯ ಕೊಡಿ. ಮುಂದೆ ಬೇಕಾದ ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂದು ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ನೀವು ಸರ್ಕಾರಿ ನೌಕರರಿಗೆ ಮನವಿ ಮಾಡಿದ್ದರೆ ಅವರು ಒಪ್ಪಿಕೊಳ್ಳುತ್ತಿದ್ದರು ಇವೊತ್ತು ಇಡೀ ನಮ್ಮ ರಾಜ್ಯದಲ್ಲಿ ರೈತರು ತೆಗೆದುಕೊಂಡಂತಹ ಸಾಲ ೧೫೦ ಕೋಟಿ ರೂಪಾಯಿಗಳು ಆಗಬಹುದು. ಅದರಲ್ಲಿ ದೊಡ್ಡ ರೈತರು ತೆಗೆದುಕೊಂಡಂತಹ ಸಾಲ ೧೦೦ ಕೋಟಿ ರೂಪಾಯಿಗಳು ಆಗಬಹುದು. ಕಳೆದ ನಾಲ್ಕು ವರ್ಷಗಳಿಂದ ಈ ನಾಲ್ಕು ವರ್ಷಗಳಿಂದ ಈ ರಾಜ್ಯದಲ್ಲಿ ರೈತರ ಸಂಘಗಳು ಇರಬಹುದು ಅಥವಾ ಬೇರೆ ಮುಖಂಡರುಗಳು ಹಾಗೂ ಶಾಸಕರುಗಳು ರೈತರ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ರೈತರು ಬರಗಾಲಕ್ಕೆ ತುತ್ತು ಆದಾಗ ಅವರು ಕೊಡಬೇಕಾದ ಸಾಲವನ್ನು ಕೊಡದೇ ಇರತಕ್ಕಂಥ ಪರಿಸ್ಥಿತಿ ಬಂದಿದ್ದು ಹಾಗೂ ಈ ಕಾಲದಲ್ಲಿ ಅವರು ಬಿಕ್ಷೆ ಬೇಡತಕ್ಕಂಥ ಪರಿಸ್ಥಿತಿ ಬಂದಿದೆ. ಸಣ್ಣ ರೈತರುಗಳಿಗೆ ಸುಮಾರು ೫೦-೬೦ ಕೋಟಿ ಸಾಲ ಇರಬಹುದು ಅದನ್ನು ಮನ್ನಾ ಮಾಡಿ ಎಂದು ಹೇಳಿದರೆ ಶ್ರೀ ಜಾಲಪ್ಪನವರು ಅದು ಸಾಧ್ಯ ಇಲ್ಲ, ಹಣಕಾಸಿನ ತೊಂದರೆ ಇದೆ, ನಬಾರ್ಡ್‌ನವರು ಒಪ್ಪುದಿಲ್ಲ ಎಂದು ಹೇಳುತ್ತಾರೆ, ಜನತೆಯು ಚುನಾವಣೆಯಲ್ಲ ನಮ್ಮನ್ನು ಆರಿಸಿ, ತಮ್ಮ ಪ್ರತಿನಿಧಿಗಳನ್ನಾಗಿ ಕಳುಹಿಸಿರುವುದು ಈ ರಾಜ್ಯದ ಜನತೆಯ ಸೇವೆಯನ್ನು ಮಾಡುವುದಕ್ಕಾಗಿ. ಯಾವುದೇ ಬರಗಾಲ ಇರಲಿ ಸಂಬಳ ತಪ್ಪದೇ ತೆಗೆದುಕೊಳ್ಳುವಂತಹ ಸರ್ಕಾರಿ ನೌಕರರಿಗೆ ಮಾತ್ರ ಅನುಕೂಲ ಮಾಡಿಕೊಡಲು ನಮ್ಮನ್ನು ಆರಿಸಿ ಕಳುಹಿಸಲಿಲ್ಲ. ಸರ್ಕಾರಿ ನೌಕರರುಗಳಿಗೆ ಸೌಲಭ್ಯಗಳನ್ನು ಮಾಡಿ ಕೊಡಬಾರದೆಂದು ನಾನು ಹೇಳುತ್ತಿಲ್ಲ. ಯಾವ ಪರಿಸ್ಥಿತಿಯಲ್ಲಿ ಮಾಡಿಕೊಡಬೇಕು ಎನ್ನುವುದನ್ನು ಯೋಚನೆಮಾಡಬೇಕು. ಈ ರಾಜ್ಯದ ಜನತೆಯಲ್ಲಿರತಕ್ಕಂಥ ನೋವು ಹಾಗೂ ಭಾವನೆಗಳನ್ನು ಅರ್ಥ ಮಾಡಿ ಕೊಳ್ಳಬೇಕು. ಇದರ ಬಗ್ಗೆ ಸರ್ಕಾರಿ ನೌಕರರ ಮನವಲಿಸುವ ಬದಲಾಗಿ ನೀವು ೧೦೦ ಕೋಟಿ ರೂಪಾಯಿಗಳನ್ನು ಅವರ ಸಂಬಳಕ್ಕೋಸ್ಕರ ಜಾಸ್ತಿ ಮಾಡಿದ್ದೀರಿ. ಇದರ ಪರಿಣಾಮವನ್ನು ರಾಜ್ಯದ ರೈತರು ಅನುಭವಿಸಬೇಕಾಗಿದೆ.

(ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಪೀಠವನ್ನಲಂಕರಿಸಿದರು) ಇಂತಹ ಸಂದರ್ಭದಲ್ಲಿ ನಮ್ಮ ರಾಜ್ಯದ ರೈತರುಗಳ ಬಗ್ಗೆ ತಮಗೆ ಕಳಕಳಿ ಇದ್ದರೆ ಹಾಗೂ ಅವರು ನೆಮ್ಮದಿಯಿಂದ ಜೀವನ ಮಾಡಬೇಕೆಂದು ಅಪೇಕ್ಷೆ ಇದ್ದರೆ ಈಗಲಾದರೂ ದಯಮಾಡಿ ಈ ಸಣ್ಣ ರೈತರು ಕೊಡಬೇಕಾದಂತಹ ಸುಮಾರು ೫೦-೬೦ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿ. ಇದು ಒಂದು ಮಾಡಿದರೆ ಸಾಕು, ಇನ್ನು ಯಾವುದೇ ಸೌಲಭ್ಯವನ್ನು ಅವರು ಕೇಳುವುದಿಲ್ಲ. ಕಳೆದ ಮೂರು ತಿಂಗಳಲ್ಲಿ ಚುನಾವಣೆ ನೆಪದಲ್ಲಿ ಯಾವುದೇ ಒಂದು ಪ್ರಗತಿದಾಯಕವಾದ ಕಾರ್ಯಕ್ರಮಗಳು ಈ

ರಾಜ್ಯದಲ್ಲಿ ನಡೆದಿಲ್ಲ. ಜನತೆಯ ಮನಸ್ಸಿನಂತೆ ಕೆಲಸ ನಡೆದಿಲ್ಲ. ವೃದ್ಧಾಪ್ಯ ವೇತನ ಸಿಗಲಿಲ್ಲ. ಎಲ್ಲಾ ಕೆಲಸಗಳೂ ಸ್ಥಗಿತಗೊಂಡಿದೆ, ಆದ್ದರಿಂದ ತಾವು ಗ್ರಾಮಾಂತರ ಪ್ರದೇಶದ ಜನರಿಗೆ ಅದರಲ್ಲೂ ಸಣ್ಣ ರೈತರಿಗೆ ಈ ಸಾಲವನ್ನು ಮನ್ನಾ ಮಾಡಿದರೆ ಅವರು ನೆಮ್ಮದಿಯಿಂದ ಜೀವನ ಮಾಡಲು ಅನುಕೂಲವಾಗುತ್ತದೆಂದು ಹೇಳುತ್ತೇನೆ. ಅದು ಮಾಡದೇ ಇದ್ದರೆ ಅವರು ಬಹಳ ತೊಂದರೆಯನ್ನು ಅನುಭವಿಸಬೇಕಾಗುತ್ತದೆ, ಸಮಾನ್ಯವಾಗಿ ವಿಧಾನ ಸಭೆಯ ಕಾರ್ಯಕಲಾಪಗಳು ಪ್ರಾರಂಭ ಆದಾಗ ನಮ್ಮ ರಾಜ್ಯದ ರೈತರನ್ನು ಬಿಟ್ಟು ಉಳಿದ ಎಲ್ಲಾ ವರ್ಗದವರೂ ಅವರವರ ಸಮಸ್ಯೆಗಳನ್ನು ತೆಗೆದುಕೊಂಡು ಬಂದು ಇಲ್ಲಿ ಸತ್ಯಾಗ್ರಹ ಮಾಡುತ್ತಾರೆ. ೩-೪ ದಿವಸಗಳಲ್ಲಿ ಅವರ ಸಮಸ್ಯೆಗಳು ಬಗೆಹರಿಯುತ್ತವೆ. ಆದರೆ ಈ ರೈತರುಗಳು ಈ ರೀತಿ ಮಾಡುವುದಿಲ್ಲ. ಅವರುಗಳು ವಿಧಾನಸೌಧಕ್ಕೆ ಬಂದು ಸತ್ಯಾಗ್ರಹ ಮಾಡುವ ಸ್ಥಿತಿಯಲ್ಲಿಲ್ಲ ಚುನಾವಣೆಗಳು ಮುಂಚೆಯೂ ಹೋರಾಟ ಮಾಡುತ್ತಿದ್ದರು. ಆದರೂ ಅವರಿಗೆ ಇದುವರೆಗೆ ಏನೂ ಪ್ರಯೋಜನ ಆಗಿಲ್ಲ ಈಗ ಏನೂದಾರಿ ಕಾಣದೇ ಅನಿವಾರ್ಯವಾಗಿ ಜೈಲು ತುಂಬುವ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದಾರೆ. ಈ ಬಡ ರೈತರ ಸಾಲವನ್ನು ಮನ್ನಾ ಮಾಡದೇ ಇದ್ದರೆ ಬಹುಶಃ ನೀವು ಬಹಳ ದಿವಸ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ. ನಮ್ಮ ರಾಜ್ಯದ ರೈತರುಗಳು ಗ್ರಾಮಾಂತರ ಪ್ರದೇಶದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳ ಸಂದರ್ಭದಲ್ಲಿ ನಿಮ್ಮ ಸರ್ಕಾರದ ಬಗ್ಗೆ ಒಂದು ಸಹಾನುಭೂತಿ ವ್ಯಕ್ತಪಡಿಸಿ ನಿಮ್ಮನ್ನು ಗೆಲ್ಲಿಸಿದ್ದಾರೆ ನಿಮ್ಮ ಸರ್ಕಾರದ ಬಗ್ಗೆ ಸದ್ಭಾವನೆಯನ್ನು ಹೊಂದಿರತಕ್ಕ ಅವರ ಸಮಸ್ಯೆ ಬಗ್ಗೆ ತಾವು ಹೆಚ್ಚಿನ ಗಮನವನ್ನು ಹರಿಸಬೇಕು. ಮತ್ತೊಮ್ಮೆ ತಾವು ಸಣ್ಣ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈಗಾಗಲೇ ರೈತರು ಕೊಳ್ಳತಕ್ಕಂಥಹ ಗೊಬ್ಬರದ ಬೆಲೆ ಹಾಗೂ ಇತರ ಸಾಮಗ್ರಿಗಳ ಬೆಲೆ ಹೆಚ್ಚಾಗಿದೆ. ಆದರೆ ಅವನು ಬೆಳೆಯುತಕ್ಕದ್ದಕ್ಕೆ ಸರಿಯಾದ ಬೆಲೆ ಸಿಗದೆ ಅವನು ತತ್ತರಿಸಿ ಹೋಗಿದ್ದಾನೆ, ತಾವು ಏನು ಮಾಡಿದ್ದೀರಿ ಎಂದರೆ ಗೊಬ್ಬರದ ತೆರಿಗೆಯನ್ನು ಶೇಕಡ ೨ರಿಂದ ೩ ಪರ್ಸೆಂಟ್ ನಷ್ಟು ಏರಿಸಿದ್ದೀರಿ. ಆದರೆ ರೈತರು ಸತ್ಯಾಗ್ರಹ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ತಾವು ಈ ತೆರಿಗೆಯನ್ನು ಅವರ ಮೇಲೆ ಹಾಕಿದ್ದೀರಿ. ಅದೇ ರೀತಿ, ಕಾಫಿ ಟೀ ಮೇಲೆ ಸಹಾ ತೆರಿಗೆಯನ್ನು ಹಾಕಿದ್ದೀರಿ. ಈ ಕಾಫಿ, ಟೀ ಕುಡಿಯುವವರು ಯಾರು ಎಂದರೆ ಈ ಬಡ ರೈತರು ಬೆಳಿಗ್ಗೆ ಎದ್ದು ದುಡಿಯಲು ಹೋಗುವ ಈ ವ್ಯಕ್ತಿಗಳು ಕಾಫಿ, ಟೀ ಕುಡಿಯುತ್ತಾರೆ. ನೀವು ಈಗ ೧೦ ರಿಂದ ೧೩ರಷ್ಟು ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಶ್ರೀಮಂತರ ಮನೆಯಲ್ಲಿ ಟಿ. ವಿ. ಇರುತ್ತದೆ. ಆದರೆ ಅಕಸ್ಮಾತ್ತಾಗಿ ಮನಸ್ಸಿಗೆ ಬೇಜಾರು ಆದಾಗ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಡ ರೈತರು ಸಿನೆಮಾ ನೋಡಲು ಹೋಗುತ್ತಾರೆ. ಯಾರಿಗೆ ಜೀವನದಲ್ಲಿ ಬೇಸರ ಆಗುತ್ತದೆ ಆಗ ಏನೋ ಮನಸ್ಸಿಗೆ ಒಂದು ನೆಮ್ಮದಿಯನ್ನು ಪಡೆಯಲು ಸಿನೆಮಾ ನೋಡಲು ಹೋಗುತ್ತಾರೆ. ಕುಡಿಯುವವರು ಯಾವ ರೀತಿ ಕುಡಿಯುವುದನ್ನು ಬಿಡಲು ಸಾಧ್ಯವಿಲ್ಲವೋ ಅದೇ ರೀತಿ ಸಿನೆಮಾ ನೋಡುವಂತಹ ಹುಚ್ಚು ಅಭ್ಯಾಸ ಆಗಿರತಕ್ಕ ಈ ಬಡ ರೈತ ಜನರು ಅದನ್ನು ಬಿಡಲು ಸಾಧ್ಯವಾಗುವುದಿಲ್ಲ. ಸಿನೆಮಾ ಟಿಕೆಟ್‌ಗೆ ೧.೨೫ ಇದ್ದ ೩೫ರಷ್ಟು ತೆರಿಗೆ ಇದ್ದದ್ದನ್ನು ೭೫ ಪರ್ಸೆಂಟ್ ಮಾಡಿದ್ದೀರಿ. ೧.೨೫ ರಿಂದ ೨.೫೦ ಇರತಕ್ಕ ಟಿಕೆಟ್‌ಗಳನ್ನು ೪೫ ರಿಂದ ೯೦ ಪರ್ಸೆಂಟ್ ಮಾಡಿದ್ದೀರಿ ಹಾಗೂ ೨.೫೦ ಮೇಲಿರುವುದಕ್ಕೆ ೫೬ ಪರ್ಸೆಂಟ್‌ನಿಂದ ಇದ್ದದ್ದನ್ನು ೧೦೦ ಪರ್ಸೆಂಟ್‌ಗೆ ಏರಿಸಿದ್ದೀರಿ. ರೈತರಿಗೆ ಬೇಕಾದಂತಹ ಏನೇನು ಅನುಕೂಲತೆಗಳನ್ನು ಮಾಡಿಕೊಡಬೇಕೋ ಅವನು ಏನೇನು ಬೇಕೆಂದು ಅಪೇಕ್ಷೆ ಮಾಡಿದ್ದನೋ ಅವೆಲ್ಲದರ ಮೇಲೆಯೂ ನೀವು ತೆರಿಗೆಯನ್ನು ಹೆಚ್ಚು ಮಾಡಿದ್ದೀರಿ. ಹಾಗೆಯೇ ಸೈಕಲ್ ಮೇಲೆ ಹಾಗೂ ಸೈಕಲ್ ಬಿಡಿ ಭಾಗದ ಮೇಲೆ ತೆರಿಗೆಯನ್ನು ಏರಿಸಿದ್ದೀರಿ ಈ ಸೈಕಲ್ ಅನ್ನು ಉಪಯೋಗಿಸುವವರು ಯಾರು ನಾವು ನೋಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ೧೦೦ಕ್ಕೆ ೯೦ ಜನ ರೈತರು ಈ ಸೈಕಲ್ಲನ್ನು ಉಪಯೋಗಿಸುತ್ತಾರೆ. ರೈತ ಕೂಲಿಕಾರರು ತಮ್ಮ ದಿನನಿತ್ಯದ ಜೀವನ ನಿರ್ವಹಣೆ ಗೋಸ್ಕರ ಈ ಸೈಕಲ್ಲನ್ನು ಉಪಯೋಗಿಸುತ್ತಾರೆ. ಈಗ ನೀವು ಸೈಕಲ್ ಮತ್ತು ಸೈಕಲ್ ಬಿಡಿ ಭಾಗದ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿರುವುದರಿಂದ ಅವರು ಬಹಳ ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ಇನ್ನು ಸಿ ಅಂಡ್ ಡಿ ಲ್ಯಾಂಡ್ ಬಗ್ಗೆ ಕಳೆದ ೧೬ ವರ್ಷಗಳಿಂದ ಅನೇಕ ಬಡ ರೈತರು ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಅದನ್ನು ಖಾಯಂ ಮಾಡಿ ಎಂದು ಹತ್ತಾರು ಸಲ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ವಿಧಾನಸೌಧದ

ಒಳಗಡೆ ಹಾಗೂ ಹೊರಗಡೆ ಕೂಡ ಚರ್ಚೆ ಮಾಡಿದ್ದಾರೆ. ಕೆಲವು ಪ್ರದೇಶಗಳಲ್ಲಿ ಅಂದರೆ ೧೦೦ಕ್ಕೆ ೭೫ ಭಾಗ ಬಗರ್‌ಹುಕುಂ ಮಾಡಿಕೊಂಡು ೪-೬ ಜಿಲ್ಲೆಯಲ್ಲಿ ರಾಗಿ, ಜೋಳ ಬೆಳೆಯುತ್ತಿದ್ದಾರೆ. ಇನ್ನು ಕೆಲವು ಕಡೆ ಮನೆ ಕಟ್ಟಿಕೊಂಡಿದ್ದಾರೆ. ಈಗ ನೀವು ಸಿ ಅಂಡ್ ಡಿ ಲ್ಯಾಂಡನ್ನು ಅರಣ್ಯ ಬೆಳೆಸಲು ಉಪಯೋಗಿಸುತ್ತೇವೆಂದು ಹೇಳುತ್ತಿದ್ದೀರಿ ಹಾಗೂ ಅದಕ್ಕೋಸ್ಕರ ಸಂಘ ಸಂಸ್ಥೆಗಳಿಗೆ ಇದನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಇದಕ್ಕೆ ಯಾವುದೇ ಸಂಘ ಸಂಸ್ಥೆಗಳು ಮುಂದೆ ಬಂದಿಲ್ಲ ಎಂದು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಲಕ್ಷಾಂತರ ಎಕರೆ ಜಮೀನು ರೈತ ಉಪಯೋಗ ಮಾಡಿಕೊಳ್ಳದೇ ಬೀಳು ಬಿದ್ದಿವೆ, ಅದನ್ನು ಅರಣ್ಯಕ್ಕೆ ಬಳಸಿಕೊಳ್ಳುವ ಬದಲು ಈ ಸಣ್ಣ ಪುಟ್ಟ ಜನರು ಉಪಯೋಗಿಸುವ ಜಮೀನಿನ ಮೇಲೆ ಕಣ್ಣು ಹಾಕಿದ್ದೀರಿ. ೨-೩ ದಿನಗಳಲ್ಲಿ ಈ ಬಗರ್ ಹುಕುಂ ಜಮೀನನ್ನು ಮಾಡುವಂತವರುಗಳ ಮೇಲೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಲು ಹೋಗುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯ ೪-೫ ತಾಲ್ಲೂಕುಗಳಲ್ಲಿ ನಾನೇ ಜಿಲ್ಲಾಧಿಕಾರಿಗಳನ್ನು ಕರೆದುಕೊಂಡು ಅರಣ್ಯ ಅಧಿಕಾರಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಯಾರು ಬೆಳೆ ಬೆಳೆಯುತ್ತಿದ್ದಾರೆ ಅಂತಹ ಕಡೆ ಕಿತ್ತು ಹೋಗುವಂತಹ ಕೆಲಸವನ್ನು ಮಾಡಲು ಕಾರ್ಯ ಹಾಕಿಕೊಂಡಿದ್ದೀರಿ. ಈ ರೀತಿ ಮಾಡಕೂಡದು. ಇದರ ಬಗ್ಗೆ ತಾವು ಯೋಚನೆ ಮಾಡಬೇಕು.

ಇನ್ನು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಪದೇ ಪದೇ ಪ್ರಸ್ತಾಪವಾಗುತ್ತಿದೆ. ಭ್ರಷ್ಟಾಚಾರ ನಿಲ್ಲಬೇಕು ಎಂಬುದು ನಮ್ಮೆಲ್ಲರ ಉದ್ದೇಶ. ಆದರೆ ಇವೊತ್ತಿನ ದಿವಸ ಮುಖಪುಟದ ಪತ್ರಿಕೆಯಲ್ಲಿ ಏನು ಬಂದಿದೆ ಎಂದು ಹೇಳುತ್ತೇನೆ. ಶೀಘ್ರಲಿಪಿಗಾರರ ನೇಮಕಾತಿ ಆಯ್ಕೆ ಸಮಿತಿಯಲ್ಲಿ ಭ್ರಷ್ಟಾಚಾರ ಇದೆ ಎಂದು ಗೊತ್ತಾಗಿ ಅದನ್ನು ಲೋಕಾಯುಕ್ತಕ್ಕೆ ಒಪ್ಪಿಸಲಾಗಿದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಉತ್ತರ ಕೊಟ್ಟಿದ್ದಾರೆ' ಈ ಸದನ ಪ್ರಾರಂಭ ಆಗುವುದಕ್ಕೆ ಮುಂಚೆ ಎಂದರೆ ಒಂದು ತಿಂಗಳ ಹಿಂದಿನಿಂದ ಇಂಟರ್‌ವ್ಯೂಗಳು ನಡೆಯುತ್ತಾ ಇವೆ. ಇಲ್ಲಿ ೧೫-೨೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ಆಯ್ಕೆ ಆಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ ಆಗಿದೆ. ಒಬ್ಬರು ಸಚಿವರ ಹತ್ತಿರ, ಕೆಲವರು ರೆಕಮೆಂಡೇಷನ್ ಬೇಕು ಎಂದು ಹೋದಾಗ ಅವರು ಏನು ಹೇಳಿದರು ಅಂದರೆ ಅಲ್ಲಿ ಭ್ರಷ್ಟಾಚಾರ ಇದೆ, ನನ್ನ ಪತ್ರದ ಅಗತ್ಯ ಇಲ್ಲ ಎಂದಿದ್ದಾರೆ. ಈಗ ಅದನ್ನು ರದ್ದು ಮಾಡಿದ್ದೀರಿ. ಭ್ರಷ್ಟಾಚಾರ ನಡೆಯುತ್ತಿದೆ ಎಂಬುದು ಗೊತ್ತಿದ್ದರೂ ಕೂಡ ಕಳೆದ ಒಂದು ತಿಂಗಳಿಂದ ಇಂಟರ್‌ವ್ಯೂಗಳನ್ನು ಏತಕ್ಕೆ ನಡೆಸುತ್ತಾ ಇದ್ದೀರಿ ? ಪ್ರತಿ ದಿವಸ ೨೫೦-೩೦೦ ಜನರನ್ನು ಇಂಟರ್‌ವ್ಯೂ ಮಾಡುತ್ತಿದ್ದೀರಿ ಅದರಲ್ಲಿ ೧೦೦ಕ್ಕೆ ೨೫-೩೦ ಜನಕ್ಕೆ ಕೆಲಸ ಸಿಗುತ್ತದೆ. ಅವರು ೧೦-೧೫-೨೦ ಸಾವಿರ ಕೊಡಬೇಕಾಗಿದೆ. ನನ್ನ ಹತ್ತಿರ ಕೆಲವು ಬಡವರು ಬಂದರು ಲೆಟರ್ ಕೊಡಿ ಎಂದು ನಂತರ ಮಂತ್ರಿಗಳಿಗೆ ಹೇಳಿ ಎಂದೆಲ್ಲಾ ಹೇಳಿದರು. ಮಂತ್ರಿಗಳಿಗೆ ಹೇಳಿದರೆ ಏನೂ ಉಪಯೋಗ ಆಗುವುದಿಲ್ಲ, ನೋಟು ಕೊಟ್ಟರೆ ಆಗುತ್ತದೆಂದು ಎಂದೆಲ್ಲಾ ಗೊತ್ತಾಯಿತು. ನೋಟನ್ನು ತೆಗೆದುಕೊಂಡು. ರೆಕಮೆಂಡೇಷನ್ ಇಟ್ಟುಕೊಂಡು ರೆಕಮೆಂಡೇಷನ್ ಲೆಟರ್ ಆಧಾರವಾಗಿ ಇಟ್ಟುಕೊಂಡು ಕೆಲಸ ಕೊಟ್ಟರೂ ಕೊಡಬಹುದು ಎಂದು ಹೇಳಿದ್ದೆ. ಈ ರೀತಿ ಆದರೆ ನಿಮ್ಮ ಪಕ್ಷಕ್ಕೆ ಗೌರವ ದೊರೆಯುವುದಿಲ್ಲ, ನಿಮ್ಮ ಪಕ್ಷಕ್ಕೆ ಗೌರವ ತರತಕ್ಕ ಯೋಗ್ಯ ವ್ಯಕ್ತಿಗಳನ್ನು ಇಂತಹ ಆಯ್ಕೆ ಸಮಿತಿಗಳಿಗೆ ಹಾಕಬೇಕು. ಈ ರೀತಿ ಬೆಂಗಳೂರಿನಲ್ಲಿ ಒಂದು ತಿಂಗಳಿಂದ ಇಂಟರ್‌ವ್ಯೂ ನಡೆದರೂ ಏತಕ್ಕೆ ಅದನ್ನು ರದ್ದು ಮಾಡಲಿಲ್ಲ. ನೂರಾರು ಜನ ಬಡವರು ಬಡ ವಿದ್ಯಾರ್ಥಿಗಳು ೧೫ ರಿಂದ ೨೦ ಸಾವಿರ ರೂಪಾಯಿಗಳನ್ನು ಕೊಟ್ಟು ಹಣವನ್ನು ಕಳೆದುಕೊಂಡ ಮೇಲೆ ಈಗ ಕ್ರಮ ತೆಗೆದುಕೊಂಡಿದ್ದೀರಿ. ಅವರು ಕೊಟ್ಟಿರುವ ಹಣಕ್ಕೆ ರಸೀದಿ ಏನಾದರೂ ಕೊಡುವ ವ್ಯವಸ್ಥೆ ಮಾಡಿದ್ದೀರಾ ? ದುಡ್ಡು ಅವನಿಗೆ ಹೇಗೆ ವಾಪಸ್ ಬರುತ್ತದೆ ? ನಾಲ್ಕೈದು ಜನರನ್ನು ಮಾತ್ರ ನೆಪ ಮಾತ್ರಕ್ಕೆ ಸೆಲೆಕ್ಟ್ ಮಾಡಿ ಉಳಿದವರ ಹತ್ತಿರ ಹಣವನ್ನು ತೆಗೆದುಕೊಂಡಿರುತ್ತಾರೆ. ಈಗ ಹಣ ಕೊಟ್ಟು ಸೆಲೆಕ್ಟ್ ಆದ ಬಡ ವಿದ್ಯಾರ್ಥಿಗೆ ಬಹಳ ಅನ್ಯಾಯವಾಗಿದೆ. ಬಡ ರೈತ ಕಷ್ಟಪಟ್ಟು ದುಡಿದು ತಂದು ಕೆಲಸ ಸಿಗಲಿ ಎಂಬ ಉದ್ದೇಶದಿಂದ ದುಡ್ಡು ಕೊಟ್ಟಿರುತ್ತಾನೆ. ಈಗ ಅವನ ಗತಿ ಏನು? ಯಾರಾದರೂ ಮೂಗಿ ಅಥವಾ ಕಿವುಡಿ ಹೆಣ್ಣು ಮಗಳನ್ನು ಮದುವೆ ಮಾಡಿಕೊಳ್ಳಲು ಒಬ್ಬ ತಯಾರು ಇದ್ದಾನೆಂದು, ಅವನಿಗೆ ಕೆಲಸ ಸಿಗಲಿ ಎಂದು ೨೦-೨೫ ಸಾವಿರ ರೂಪಾಯಿಗಳನ್ನು ಕಷ್ಟಪಟ್ಟು ಇವರಿಗೆ ಕೊಟ್ಟಿರುತ್ತಾನೆ. ಈಗ ಅವನ ಗತಿ ಏನು ? ಅವನು ಕೆಲಸ ಸಿಗುತ್ತದೆಂದು ನಂಬಿಕೊಂಡು ಊರಿಗೆ ಹೋಗಿರುತ್ತಾನೆ ಈಗ ಅವನ ಸ್ಥಿತಿ ಏನಾಗುತ್ತದೆ ? ಈಗ ನೀವು ಆಯ್ಕೆ ಸಮಿತಿಯನ್ನು ರದ್ದು ಮಾಡಿರುವುದರಿಂದ ಅವನ ಗತಿ ಏನು ? ಈ ಭ್ರಷ್ಟಾಚಾರವನ್ನು

ತಡೆಹಿಡಿಯಂತಕ್ಕಂಥದ್ದು ಅನಿವಾರ್ಯವಾಗಿದೆ. ಯೋಗ್ಯವಾದ ವ್ಯಕ್ತಿಗಳನ್ನು ಇಂತಹ ಸಮಿತಿಗಳಲ್ಲಿ ಹಾಕಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ನನ್ನ ಭಾವನೆ. ಈಗ ಲಂಚ ಕೊಟ್ಟವರು ಬಡವರು ಆಗಿರುವುದರಿಂದ ಅವರನ್ನು ಬೀದಿಪಾಲು ಮಾಡಿದ್ದೀರಿ. ಅವರು ದುಡ್ಡನ್ನು ಹೇಗೆ ವಾಪಸ್ ತೆಗೆದು ಕೊಳ್ಳಲು ಆಗುತ್ತದೆ. ಇದು ಅನಿವಾರ್ಯ ಆಗಿದೆ ಎಂದರೆ ಮಾಡಿಕೊಳ್ಳಲಿ ಬಿಟ್ಟು ಬಿಡಿ.

ಶ್ರೀ ಜೆ. ಹೆಚ್. ಪಟೇಲ್.—ಅವರು ವಸೂಲಿ ಮಾಡಿಕೊಳ್ಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಹೇಗೆ ಮಾಡಿಕೊಳ್ಳಬಹುದು ಎಂದು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಯಾರಾದರೂ ಲಂಚ ಕೊಟ್ಟಿದ್ದರೆ ಅವರು ತಾವು ಇಂಥವರಿಗೆ ಇಷ್ಟು ಲಂಚ ಕೊಟ್ಟಿದ್ದೇವೆ ಎಂದು ನನಗೆ ಬರೆದುಕೊಡಲಿ, ಅದನ್ನು ನಾನು ಅವರಿಂದ ವಸೂಲಿ ಮಾಡಿಸಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಾವು ಹೇಳಿದ್ದುದು ಸತ್ಯ ಇದೆ. ನಾನೂ ಸಹ ತಾವು ಇಲ್ಲಿದ್ದೀರಿ ಎಂದು ಸ್ವಲ್ಪ ಜೋರಾಗಿ ೪-೬ ಮಾತುಗಳಲ್ಲಿ ಏತಕ್ಕೆ ಹೇಳುತ್ತಿದ್ದೇನೆ ಎಂಬುದನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ ನನಗಿಂತ ನಿಮ್ಮ ಮನಸ್ಸು ಸಹ ನೋವು ಆಗಿದೆ ಆದ್ದರಿಂದ ತಾವು ತೀವ್ರವಾಗಿ ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದೀರಿ. ಅದಕ್ಕಾಗಿ ಪರಿಹಾರ ಹುಡುಕಬೇಕು ಎಂದು ನಾನು ಅಪೇಕ್ಷೆಪಡುತ್ತೇನೆ. ಈ ಇಂಟರ್‌ವ್ಯೂ ನಡೆದ ೩-೪ ದಿವಸಗಳಲ್ಲಿ ನೀವು ಇದರ ಬಗ್ಗೆ ಕ್ರಮ ತೆಗೆದು ಕೊಂಡು ಅವರಿಗೆ ಛೀಮಾರಿ ಹಾಕಿ ರದ್ದು ಮಾಡಿದ್ದರೆ ಇಂತಹ ಪರಿಸ್ಥಿತಿ ಆಗುತ್ತಿರಲಿಲ್ಲ. ಇನ್ನೊಂದು ವಿಷಯ ಅದು ಹೇಳಬೇಕೋ ಇಲ್ಲವೋ ಗೊತ್ತಿಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕದ್ದು ಆಗಿದೆ.ಗರೀಬೀ ಹಠಾವೋ ಪತ್ರಿಕೆಯಲ್ಲಿ ನರ್ಸಸ್ ಸ್ಕೂಲ್ ವಿಷಯ ಬಂದಿದೆ. ಮಂತ್ರಿಗಳು, ಶಾಸಕರು ಹಾಗೂ ಸನ್ಮಾನ್ಯ ಸದಸ್ಯರುಗಳ ವಿಷಯ ಪತ್ರಿಕೆಯಲ್ಲಿ ಬಂದಿದೆ. ಇದು ಸರಿಯೆಂದು ನಾನು ಹೇಳುತ್ತಿಲ್ಲ.ಆದರೆ ಬಹಿರಂಗವಾಗಿ ವಿಷಯವನ್ನು ತಿಳಿಸಿ. ಮಾನ ಮರ್ಯಾದೆಯನ್ನು ಹರಾಜು ಹಾಕುತ್ತಿದ್ದಾರೆ ಎಂಬ ಆರೋಪ ಇದೆ. ರಮಾ ಭಂಡಾರಿ ಈ ರಾಜ್ಯದಲ್ಲಿ ಯಾರೂ ಮಾಡದೇ ಇರತಕ್ಕ ಒಂದು ಕೆಲಸವನ್ನು ಮಾಡಿದ್ದಾರೆ. ಯಾವ ರೀತಿ ಹೆಣ್ಣು ಮಕ್ಕಳನ್ನು ಬಲಾತ್ಕಾರವಾಗಿ ಕೆಡಿಸಲು ಪ್ರಯತ್ನ ಮಾಡಿದ್ದಾರೆ ಎಂದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರಲ್ಲಿ ಬಹಳ ಹಿಂದೆ ಬಿದ್ದಿದ್ದೀರಿ. ಟ್ರೈನಿಂಗ್‌ಗೋಸ್ಕರ ಹೆಣ್ಣುಮಕ್ಕಳು ಬಂದರೆ ಅವರ ಮಾನಭಂಗ ಮಾಡಲು ಉಪಯೋಗಿಸಿಕೊಳ್ಳುತ್ತಿರುವಂಥ ಹೀನ ಕೃತ್ಯಗಳು ನಡೆಯುತ್ತಿವೆ. ಇವೊತ್ತು ಅವರಿಗೆ ಸಸ್ಪೆನ್‌ಷನ್ ಆರ್ಡರ್ ಅನ್ನು ಜಾರಿ ಮಾಡಲು ಆಗಲಿಲ್ಲ. ಅವರು ನಿಮ್ಮ ಕೈಗೆ ಸಿಗುತ್ತಿಲ್ಲ ಅಂದರೆ ಯಾರ ರಕ್ಷಣೆಯಲ್ಲಿ ಇದ್ದಾರೆ ಎಂಬುದನ್ನು ಹೇಳ ಬೇಕಾಗಿದೆ. ಕೆಲವರಿಗೆ ಈ ವ್ಯವಸ್ಥೆಯಲ್ಲಿ ರಕ್ಷಣೆಗೆ ರಾಜಕೀಯ ಇರಬೇಕು ಎಂದು ನನಗನ್ನಿಸುತ್ತದೆ. ಪ್ರತಿಕ್ರಿಯೆ ಬಂದಾಗ ಉತ್ತರವನ್ನು ಕೊಡಬೇಕು. ಸಣ್ಣ ಪುಟ್ಟ ಪ್ರತಿಕ್ರಿಯೇ ಬಂದಾಗ ಉತ್ತರ ಕೊಡಬೇಕೆಂದು ನಾವು ಹೇಳುವುದಿಲ್ಲ. ಯಾವುದಾದರೂ ವಿಷಯ ಬಂದಾಗ ಅದರ ಸತ್ಯ ಏನು ಅಸತ್ಯ ಏನು ಎಂಬುದನ್ನು ನೋಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಉತ್ತರವನ್ನು ಕೊಡುವುದಕ್ಕೆ ಸರ್ಕಾರಕ್ಕೆ ನೈತಿಕ ಜವಾಬ್ದಾರಿ ಇಲ್ಲವೆ ? ಆದರೆ ನೀವು ಉತ್ತರ ಕೊಡುವ ಕೆಲಸವನ್ನು ಮಾಡಲಿಲ್ಲ. ಇನ್ನು ಮುಂದೆ ಈ ರೀತಿ ಆಗಬಾರದು. ಆ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಂಥ ಅನೈತಿಕ ಚಟುವಟಿಕೆಗಳನ್ನು ತಪ್ಪಿಸುವುದಕ್ಕೆ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹೆಣ್ಣು ಮಕ್ಕಳ ಹಿತದೃಷ್ಟಿಯಿಂದ ತಾವು ಯೋಚನೆ ಮಾಡಬೇಕು. ಈ ರೀತಿ ಹೆಣ್ಣು ಮಕ್ಕಳಿಗೆ ತೊಂದರೆಯಾದರೆ ಅವರು ಯಾವ ರೀತಿ ಜೀವನ ಮಾಡಬೇಕು. ಇವರ ಜೀವನವನ್ನು ಉತ್ತಮ ಮಾಡುವುದಕ್ಕೆ ಪ್ರಯತ್ನ ಮಾಡದಿದ್ದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತರು. ಇವರು ಸರಿಯಾದ ಕ್ರಮವನ್ನು ಈ ಬಗ್ಗೆ ತೆಗೆದುಕೊಳ್ಳುತ್ತಾರೆಂದು ತಿಳಿದು ಕೊಂಡಿದ್ದೇನೆ. ಆಮೇಲೆ ಮೊನ್ನೆ ಪಾವಗಡದಲ್ಲಿ ನಡೆದ ಘಟನೆ ಬಗ್ಗೆ ಮುಖ್ಯಮಂತ್ರಿಗಳು ಪೋಲೀಸ್ ಅಧಿಕಾರಿಗಳಿಗೆ ಸರಿಯಾಗಿ ಛೀಮಾರಿ ಹಾಕಿದ್ದಾರೆ. ವಿಧಾನ ಸಭೆಯಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚಿತವಾಗಿಯೇ ಅವರಿಗೆ ಬರೀ ಛೀಮಾರಿ ಹಾಕುವ ಬದಲಾಗಿ, ಸಂಬಂಧಪಟ್ಟ ಮದೆ ಏರಿದ ಪೋಲೀಸ್ ಅಧಿಕಾರಿಗಳನ್ನು ಮನೆಗೆ ಕಳುಹಿಸಿದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಅವರುಗಳಿಗೆ ನೀವು ಹೆದರುವಂಥ ಪ್ರಮೇಯ ಏನೂ ಇಲ್ಲ. ನೀವು ಆ ರೀತಿ ಮೊದಲೇ ಮಾಡಿದ್ದಿದ್ದರೆ, ನಾವು ನಿಮ್ಮ ರಾಜೀನಾಮೆಯನ್ನು ಕೇಳುತ್ತಿರಲಿಲ್ಲ, ಗೃಹ ಸಚಿವರ ರಾಜೀನಾಮೆಯನ್ನೂ ಕೇಳುತ್ತಿರಲಿಲ್ಲ.

ನೀವು ಸರಿಯಾದ ಕ್ರಮವನ್ನು ತೆಗೆದುಕೊಳ್ಳದೇ ಇದ್ದುದರಿಂದ ನಿಮ್ಮ ರಾಜೀನಾಮೆಯನ್ನು ಕೇಳಬೇಕಾಯಿತು. ನೀವು ರಾಜೀನಾಮೆಯನ್ನು ಕೊಡಿ ಎಂದು ನಾವು ಕೇಳಿದರೂ ಕೂಡ ನೀವು ರಾಜೀನಾಮೆಯನ್ನು ಕೊಡುವುದಿಲ್ಲವೆಂದು ನಮಗೆ ಗೊತ್ತಿದೆ. ಹೋದ ಸಾರಿ ಶಿವಮೊಗ್ಗ ಜಿಲ್ಲೆಯಲ್ಲಿ ಜೈಲಿನ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ಮಾನ್ಯ ಕೆ ಎಚ್. ಶ್ರೀನಿವಾಸ್‌ರವರು ಪ್ರಸ್ತಾಪ ಮಾಡಿದ್ದರು. ಅವರು ವಿಷಯವನ್ನು ಪ್ರಸ್ತಾಪ ಮಾಡಿದಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದ್ದೇವೆಂದು ಹೇಳಿದರು ಇವರು ಹೇಳಿ ಎಂಟು ಹತ್ತು ದಿನಗಳಾದರೂ ಆ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡುವ ಆದೇಶ ಅಲ್ಲಿಗೆ ತಲುಪಲಿಲ್ಲ. ಈ ರೀತಿ ನೀವು ಮಾಡಿದ ಆಜ್ಞೆಯು ಸಕಾಲದಲ್ಲಿ ತಲುಪುವುದಕ್ಕೆ ನಿಮ್ಮ ಅಧಿಕಾರಿಗಳು ಏರ್ಪಾಡು ಮಾಡಲಿಲ್ಲವೆಂದರೆ ಹೇಗೆ ? ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಾವು ಹಿಂದೆ ನೋಡುತ್ತೀರಿ. ರಾಜ್ಯದ ಜನತೆಯ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಹೇಳಿರುವ ತಾವು ಯಾವ ಸಮಸ್ಯೆಯನ್ನೂ ಬಗೆಹರಿಸುತ್ತಿಲ್ಲ. ಜನರಿಗೆ ನ್ಯಾಯ ಕೊಡಬೇಕು, ಆ ಳವ ದೃಷ್ಟಿಯಿಂದ ನೀವು ಯಾವುದೇ ಸಂದರ್ಭದಲ್ಲಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡಬಾರದು. ಜನತಾ ಸರ್ಕಾರ ಬಂದ ಮೇಲೆ ಎಲ್ಲಾ ಬದಲಾವಣೆ ಮಾಡುತ್ತೇವೆಂದು ಹೇಳಿದ್ದೀರಿ ಆದರೆ ಏನೂ ಬದಲಾವಣೆ ಮಾಡಿರುವುದು ನಮಗೆ ಕಾಣುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ನಾನು ಭಾಷಣ ಪ್ರಾರಂಭ ಮಾಡುವ ಸಮಯದಲ್ಲಿ ಇರಲಿಲ್ಲ ಇದ್ದಿದ್ದರೆ ಚೆನ್ನಾಗಿ ಗೊತ್ತಾಗುತ್ತಿತ್ತು. ನಾನು ಏಕೆ ಈ ವಿಷಯ ಹೇಳುತ್ತೇನೆ ಎಂದರೆ, ನೀವು ಸರಿಯಾಗಿ ಕೆಲಸ ಮಾಡದೇ ಇದ್ದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ, ಒಳ್ಳೆಯ ಹೆಸರು ಬರಲಿ ಎಂದು ನಾನು ಹೇಳುತ್ತಿದ್ದೇನೆ ನಮ್ಮ ಪಕ್ಷ ಇನ್ನು ಹತ್ತಾರು ವರ್ಷಗಳಲ್ಲಿಯಾದರೂ ಅಧಿಕಾರಕ್ಕೆ ಬರುತ್ತದೆ ಎಂದು ನಂಬಿಕೆ ಇಲ್ಲ. ಈಗ ನಾವು ಒಬ್ಬರೋ ಇಬ್ಬರೋ ಶಾಸಕರು ಇದ್ದೇವೆ. ನೀವು ಈಗ ಅಧಿಕಾರಕ್ಕೆ ಬಂದಿದ್ದೀರಿ. ಈ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡು ದಕ್ಷವಾಗಿ ಕೆಲಸ ಮಾಡಬೇಕು. ನಾನು ಒಬ್ಬ ಸಾಮಾನ್ಯ ರೈತ ಕುಟುಂಬದಿಂದ ಬಂದಿದ್ದೇನೆ. ಬರಗಾಲದ ಪರಿಸ್ಥಿತಿ ಏನು ಎಂಬುದನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಇಂಥ ಬರಗಾಲ ಪರಿಸ್ಥಿತಿ ರಾಜ್ಯದಲ್ಲಿ ಇರುವಾಗಲೂ ನೀವು ಸರ್ಕಾರದ ನೌಕರರಿಗೆ ನೂರಾರು ಕೋಟಿ ರೂಪಾಯಿಗಳಷ್ಟು ಹೆಚ್ಚು ಸಂಬಳವನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದೀರಿ. ಸಾಮಾನ್ಯ ಬಡವರು ಸರ್ಕಾರದಿಂದ ಸುಮಾರು ೫೦ ಕೋಟಿ ರೂಪಾಯಿಗಳನ್ನು ಸಾಲ ಮಾಡಿರಬಹುದು. ಈ ಸಾಲವನ್ನು ವಾಪಸ್ ಮಾಡುವುದಕ್ಕೆ ಈ ರೈತರಿಂದ ಆಗುತ್ತಿಲ್ಲ. ಅವರು ಬರಗಾಲದ ಬೇಗೆಗೆ ಸಿಕ್ಕಿ ಕಷ್ಟಪಡುತ್ತಿದ್ದಾರೆ. ಈ ಸಾಲವನ್ನು ಮನ್ನಾ ಮಾಡಿ ಎಂದು ಸರ್ಕಾರಕ್ಕೆ ಕೇಳಿದರೆ ಸರ್ಕಾರದವರು ಮನ್ನಾ ಮಾಡುವುದಕ್ಕೆ ತಯಾರಿಲ್ಲ. ಸರ್ಕಾರಿ ನೌಕರರಿಗೆ ಮಾತ್ರ ನೂರಾರು ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಕೊಡುವುದಕ್ಕೆ ತಯಾರು ಮಾಡಿದ್ದೀರಿ. ಸಂಬಳವನ್ನು ಪರಿಷ್ಕರಣ ಮಾಡಿ, ಬೇಡ ಎಂದು ನಾನು ಹೇಳುವುದಿಲ್ಲ. ಇವರಿಗೆ ಯಾವ ರೀತಿ ಅನುಕೂಲಗಳನ್ನು ಕಲ್ಪಿಸಿಕೊಡುತ್ತೀರೋ ಅದೇ ರೀತಿ ರೈತರುಗಳಿಗೂ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಆಮೇಲೆ, ಆಸ್ತಿ ತೆರಿಗೆಯನ್ನು ಪರಿಷ್ಕರಣ ಮಾಡುತ್ತಿದ್ದೀರಿ. ಈಗ ಮಾಡಿರುವ ಆಸ್ತಿ ಪರಿಷ್ಕರಣದಲ್ಲಿ ಬಹಳ ಅನ್ಯಾಯವಾಗಿದೆ. ಯಾರು ದುಡ್ಡು ಕೊಡುತ್ತಾರೋ ಅವರಿಗೆ ಕಡಿಮೆ ತೆರಿಗೆ ಹಾಕುವುದು, ಯಾರು ದುಡ್ಡು ಕೊಡುವುದಿಲ್ಲವೋ ಅಂಥವರಿಗೆ ಹೆಚ್ಚು ತೆರಿಗೆಯನ್ನು ಹಾಕುವುದನ್ನು ಮಾಡುತ್ತಿದ್ದಾರೆ. ಈ ಆಸ್ತಿ ತೆರಿಗೆ ಪರಿಷ್ಕರಣವು ಸರಿಯಾಗಿಲ್ಲವೆಂದು ಹೇಳಿದರೂ ಏನೂ ಪ್ರಯೋಜನವಾಗಲಿಲ್ಲ. ತೆರಿಗೆಯನ್ನು ಜಾಸ್ತಿ ಮಾಡಿ ಬೇಡ ಎನ್ನುವುದಿಲ್ಲ. ೨೦ ಪರ್‌ಸೆಂಟೋ ೩೦ ಪರ್‌ಸೆಂಟೋ ಜಾಸ್ತಿ ಮಾಡಿ, ಅದು ಬಿಟ್ಟು ಹೆಚ್ಚು ಹೆಚ್ಚು ತೆರಿಗೆಗಳನ್ನು ಹಾಕಿದರೆ ಸಾಮಾನ್ಯ ಜನಕ್ಕೆ ತೊಂದರೆಯಾಗುತ್ತದೆ. ಮೊದಲು ಕಾರ್ಪೊರೇಟರ್ ಆಗಿ ಅನುಭವ ಇರುವವರೇ ಈಗ ಮಂತ್ರಿಗಳಾಗಿದ್ದಾರೆ. ಅವರಿಗೂ ಸಹ ಸಮಸ್ಯೆಗಳು ಚೆನ್ನಾಗಿ ಗೊತ್ತಿದೆ. ಆಸ್ತಿ ತೆರಿಗೆಯನ್ನು ಹೆಚ್ಚು ಮಾಡಿರುವುದನ್ನು ಪ್ರತಿಭಟಿಸಲು ನಾಲ್ಕು ಜನ ಕಾರ್ಪೊರೇಟರ್‌ಗಳು ಉಪವಾಸ ಸತ್ಯಾಗ್ರಹ ಮಾಡಿದರೂ ಇವರು ಗಮನಹರಿಸಿಲ್ಲ. ತಾವು ಒಳ್ಳೆಯ ಕೆಲಸಗಳನ್ನು ಮಾಡಿ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತನ್ನಿ. ನಿಮ್ಮ ಕಾಲದಲ್ಲೂ ರೈತರ ಮತ್ತು ಸಾಮಾನ್ಯ ಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗದಿದ್ದರೆ ಬಹುಶಃ ಮುಂದೆ ಯಾರೂ ಮಾಡುವುದಕ್ಕಾಗುವುದಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಇವತ್ತು ರೈತರುಗಳು ಜೈಲು ಭರೋ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ, ಆದ್ದರಿಂದ, ರೈತರುಗಳಿಗೆ ಆಗುತ್ತಿರುವ ಕಷ್ಟವನ್ನು ತಾವು ನೋಡಿ ಅವರ ಸಮಸ್ಯೆಯನ್ನು ಬಗೆಹರಿಸಬೇಕು. ಬರಗಾಲ ಪರಿಸ್ಥಿತಿಯನ್ನು ಹಳ್ಳಿಗಳು

ಎದುರಿಸುತ್ತಿದ್ದಾಗಲೂ ನೀವು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳನ್ನು ನಡೆಸಿದಿರಿ. ಚುನಾವಣೆಗಳನ್ನು ನಡೆಸುವುದಕ್ಕೆ ಮುಂಚಿತವಾಗಿ, ರಸ್ತೆಗಳನ್ನು ಮಾಡಿಸುತ್ತೇವೆ, ಕೆರೆಗಳನ್ನು ಕಟ್ಟಿಸುತ್ತೇವೆ, ಆಸ್ಪತ್ರೆಗಳನ್ನು ಕಟ್ಟಿಸುತ್ತೇವೆಂದು ಭರವಸೆಗಳನ್ನು ತಾವು ಕೊಟ್ಟಿರಿ ಆದರೆ, ಆ ಕೆಲಸಗಳನ್ನು ಮಾಡುವುದಕ್ಕೆ ತಾವು ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಗ್ರಾಮಾಂತರ ಪ್ರದೇಶದ ಜನಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಈ ಎಲ್ಲಾ ಕೆಲಸ ಮಾಡುವ ಮೊದಲು, ಸಣ್ಣ ರೈತರುಗಳು ಸರ್ಕಾರಕ್ಕೆ ಕೊಡಬೇಕಾಗಿರುವ ಸಾಲವನ್ನು ಮನ್ನಾ ಮಾಡಬೇಕೆಂದು ನಾನು ನಿಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಎಲ್ಲಾ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳನ್ನು ಪರಿಹರಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು.

ಚಾಮರಾಜನಗರ ತಾಲ್ಲೂಕಿಗೆ ಹೊಸದಾಗಿ ಶ್ರೀ ಮದನಗೋಪಾಲ್ ಎಂಬ ಅಸಿಸ್ಟೆಂಟ್ ಕಮಿಷನರ್ ಬಂದಿದ್ದಾರೆ. ಅವರು ತುಂಬಾ ಪ್ರಾಮಾಣಿಕರು. ಈಗ ಅಲ್ಲಿ ಸಿಗುವ ಕರಿಕಲ್ಲುಗಳನ್ನು ಕಳ್ಳಸಾಗಾಣಿಕೆ ಮಾಡುವ ಕೆಲಸ ನಡೆದಿದೆ. ಆ ಕಲ್ಲುಗಳನ್ನು ಬ್ಲಾಸ್ಟ್ ಮಾಡುವುದಕ್ಕೆ ೩ ಜನಕ್ಕೆ ಮಾತ್ರ ಅಧಿಕೃತ ಲೈಸೆನ್ಸ್ ಇದೆ. ಆದರೆ ಅನಧಿಕೃತವಾಗಿ ಬ್ಲಾಸ್ಟ್ ಮಾಡುತ್ತಿರುವವರು ೮೩ ಮಂದಿ ಇವರೆಲ್ಲಾ ಯಾರೆಂದರೆ ಪ್ರಭಾವಶಾಲಿ ವ್ಯಕ್ತಿಗಳ ಪ್ರಭಾವ ಇರುವವರು. ಶ್ರೀ ಮದನಗೋಪಾಲ ಬಂದ ಕೂಡಲೇ ಯಾವ ಕಾನೂನನ್ನು ನೋಡದೆ ಅಲ್ಲಿಗೆ ಹೋಗಿ ಅನಧಿಕೃತವಾದ ೨೦೦ ಕಲ್ಲುಗಳನ್ನು ತಂದು ಆಫೀಸಿನಲ್ಲಿ ಇಟ್ಟು ಕೊಂಡಿದ್ದಾರೆ. ಆದರೆ ಅಲ್ಲಿರುವ ತಹಸೀಲ್ದಾರ್ ಅದುವರೆಗೂ ಅನಧಿಕೃತ ವ್ಯಕ್ತಿಗಳಿಗೆ ಶಾಮೀಲಾಗಿದ್ದವನು ಈ ಸಂದರ್ಭದಲ್ಲಿ ರಜೆ ಹಾಕಿ ಹೋದ. ಈ ತಹಸೀಲ್ದಾರ್ ಹೆಸರನ್ನು ನಾವು ಹೇಳುವುದಿಲ್ಲ. ಒಳ್ಳೆಯವರಾದ ಎ.ಸಿ. ಹೆಸರನ್ನು ಮಾತ್ರ ಹೇಳಿದ್ದೇನೆ. ಹೀಗೆ ಆದರೆ ಇನ್ನೆಷ್ಟು ದಿನ ಆ ಎ.ಸಿ. ಪ್ರಾಮಾಣಿಕವಾಗಿ, ಧೈರ್ಯವಾಗಿ ತನ್ನ ಕರ್ತವ್ಯ ನಿರ್ವಹಣೆ ಮಾಡುತ್ತಾನೆ ಹೇಳಿ ? ಇದು ಒಂದು ಉದಾಹರಣೆ ಅಷ್ಟೆ.

ನಾವೆಲ್ಲಾ ರೈತರ ಬಗ್ಗೆ ಮಾತನಾಡುತ್ತೇವೆ. ನಮ್ಮ ರಾಜ್ಯದಲ್ಲಿ ಕಬ್ಬನ್ನು ಅರೆದು ಸಕ್ಕರೆ ಮಾಡಲು ೧೧ ಫ್ಯಾಕ್ಟರಿಗಳಿವೆ. ಆದರೆ ಆ ಫ್ಯಾಕ್ಟರಿಗಳು ಸರಿಯಾದ ಲಾಭ ಗಳಿಸಲಾರದೆ ಮುಚ್ಚುವ ಸ್ಥಿತಿಗೆ ಬಂದಿವೆ. ಕೈಗಾರಿಕಾ ಮಂತ್ರಿಗಳಾದ ಶ್ರೀ ಜೆ ಹೆಚ್. ಪಟೇಲರು ಪದೇ ಪದೇ ಈ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಲಾಸ್‌ನಲ್ಲಿ ನಡೆಯುತ್ತಿವೆ ಇವು ಲಾಸ್‌ನಲ್ಲಿ ನಡೆಯುತ್ತಿರುವುದರಿಂದ ಇವನ್ನು ನಾವು ಸಾಕಿಕೊಂಡು ಹೋಗಲು ಸಾಧ್ಯವಿಲ್ಲ. ಬೇರೆಯವರಿಗೆ ಮಾರಿಬಿಟ್ಟು ಕೈತೊಳೆದು ಕೊಳ್ಳುತ್ತೇನೆ ಎನ್ನುತ್ತಿದ್ದಾರೆ. ಕೊಳ್ಳೇಗಾಲದ ಹತ್ತಿರ ಮಾದೇಶ್ವರ ಷುಗರ್ ಫ್ಯಾಕ್ಟರಿ ಇದೆ. ಇದುವರೆಗೂ ಅಲ್ಲಿ ೧೨ ಕೋಟಿ ಲಾಸಾಗಿದೆ. ಅದನ್ನು ೫.೨೫ ಕೋಟಿಗೆ ಖೋಡೇಸ್‌ಗೆ ಮಾರಿಬಿಟ್ಟಿರಿ. ಸರ್ಕಾರದ ಆಧೀನದಲ್ಲಿರುವ ಫ್ಯಾಕ್ಟರಿಗಳಿಗೆ ಕಬ್ಬು ಹೊಡೆಯುವ ರೈತರ ಸ್ಥಿತಿ ದುಸ್ಥಿತಿಯಾಗಿರುವಾಗ ಇನ್ನು ಖಾಸಗಿ ಖೋಡೇಸ್ ರೈತನ ಹಿತವನ್ನು ಕಾಪಾಡುತ್ತಾನೆಯೇ ? ರೈತರ ರಕ್ತ ಹೀರುತ್ತಾನೆ. ಒಬ್ಬ ಖಾಸಗಿಯವನು ಲಾಸಾಗಿರುವ ಫ್ಯಾಕ್ಟರಿಯನ್ನು ಲಾಭದಾಯಕವಾಗಿ ನಡೆಸುವುದಾದರೆ ಇಷ್ಟೊಂದು ಜನ ಬುದ್ಧಿವಂತ ಅಧಿಕಾರಿಗಳನ್ನು ಇಟ್ಟುಕೊಂಡ ಸರ್ಕಾರ ಏಕೆ ಇದನ್ನು ಲಾಭದಲ್ಲಿ ನಡೆಸಲಾಗುತ್ತಿಲ್ಲ? ಇದಕ್ಕೆ ಕಾರಣವೇನು ? ಪ್ರತಿವರ್ಷ ಸರ್ಕಾರೀ ನೌಕರರಿಗೆ ಸಂಬಳ ಜಾಸ್ತಿ ಮಾತ್ರ ನೀವು ಮಾಡುತ್ತಿದ್ದೀರಿ. ಇದರರ್ಥ ಏನೆಂದರೆ ಇನ್ನು ಮುಂದೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಫ್ಯಾಕ್ಟರಿಗಳಲ್ಲಿ ಚೆನ್ನಾಗಿ ತಿಂದು ಅವನ್ನು ಲಾಭದಾಯಕವಾಗಿ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲವೆಂಬ ಸ್ಥಿತಿ ಬಂದಾಗ ಅವನ್ನು ಖೋಡೇಸ್, ಟಾಟಾ, ಬಿರ್ಲಾಗಳ ಹತ್ತಿರ ಮಾತನಾಡಿಕೊಂಡು ಎಷ್ಟು ಪರ್ಸಂಟೇಜ್ ಕಮಿಷನ್ ತೆಗೆದುಕೊಳ್ಳಬಹುದೆಂಬ ಪ್ರಯತ್ನ ಈ ರಾಜ್ಯದಲ್ಲಿ ನಡೆಯುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಅಧ್ಯಕ್ಷಣಿಯವರೇ, ಸದಸ್ಯರು ಬಹಳ ರಭಸವಾಗಿ ಮಾತನಾಡುತ್ತಿರುವುದರಿಂದ ಅವರಿಗೇ ಏನು ಮಾತನಾಡುತ್ತಿದ್ದೇನೆ ಎಂಬುದು ಗೊತ್ತಿಲ್ಲ ಅನ್ನಿಸುತ್ತಿದೆ. ನಾವು ಅಲ್ಲಿ ಟೆಂಡರ್ ಕರೆದಿದ್ದೆವು, ಜಾಸ್ತಿ ಬಂದ ಟೆಂಡರ್‌ನವರಿಗೆ ಅದನ್ನು ಕೊಟ್ಟಿದ್ದೇವೆ. ಆದರೆ ಅವರು ಹೇಳುವಂತೆ ಪ್ರೈವೇಟ್‌ನವರ ಹತ್ತಿರ ಮಾತುಕತೆ ಮೊದಲೇ ನಡೆಸ ಲಿಲ್ಲ. ದಯವಿಟ್ಟು ಅಲಿಗೇಷನ್ ಮಾಡಬೇಡಿ. ಈ ಫ್ಯಾಕ್ಟರಿ ೧೨ ಕೋಟಿ ಲುಕ್ಸಾನಾಗಿತ್ತು. ಮೂರ್ನಾಲ್ಕು ವರ್ಷಗಳಿಂದ ಮುಚ್ಚಿತ್ತು. ಇದೆಲ್ಲಾ ಹಿಂದಿನಿಂದ ನಡೆದುಕೊಂಡು ಬಂದಿದ್ದು. ನಮ್ಮ ಸರ್ಕಾರ ಬಂದ ಮೇಲೆ ೧ ಕೋಟಿ ಹಣ ಕೊಟ್ಟು ನೌಕರರ ಹಿಂದಿನ ಸಂಬಳ ಕೊಡುವುದಕ್ಕೆ ಮತ್ತು ಕಬ್ಬು

ಸರಬರಾಜು ಮಾಡಿದ್ದವರಿಗೆ ಸಾಲ ತೀರಿಸುವುದಕ್ಕೆ ಕೊಟ್ಟಿದ್ದೇವೆ. ಹಾಗೆಯೇ ಗೌರೀಬಿದನೂರು ಫ್ಯಾಕ್ಟರಿಯೂ ೧.೩೭ ಕೋಟಿ ಲೊಕ್ಸಾನನ್ನು ಅನುಭವಿಸಿದೆ. ಇವನ್ನು ನಡೆಸುವುದಕ್ಕೆ ಆಗುವುದಿಲ್ಲವೆಂದು ಟೆಂಡರ್ ಕರೆದು ಅದನ್ನು ಡಿಸ್‌ಪೋಸ್ ಮಾಡಿದ್ದೇವೆಯೇ ಹೊರತು ನೀವು ಹೇಳಿದಂತೆ ಅಲ್ಲ. ಬೇರೆ ಯಾರಾದರೂ ಜಾಸ್ತಿ ಆಫರ್ ಮಾಡುತ್ತೀರಾ ಎಂದು ಕೇಳಿ ನೆಗೋಸಿಯೇಷನ್ಸ್ ನಡೆಸಿಯೇ ಅದನ್ನು ಮಾರಿರುವುದು ಆದ್ದರಿಂದ ತಾವು ಈ ರೀತಿ ಮಾತನಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಹೇಳಿದೇನೆಂದರೆ, ಈ ರೀತಿ ಫ್ಯಾಕ್ಟರಿಗಳು ಬೇರೆಯವರಿಗೆ ಏಕೆ ಹೋಗುವ ಮಟ್ಟಕ್ಕೆ ತಲುಪಿವೆ ಹೀಗೆ ಮಾರಿದರೆ ಸರ್ಕಾರದ ಬೊಕ್ಕಸಕ್ಕೇ ಲಾಸಲ್ಲವೇ ಎಂದು ಹೊರತು, ನೀವು ಖೋಡೇಸ್, ಟಾಟಾ ಬಿರ್ಲಾಗಳ ಹತ್ತಿರ ಮಾತನಾಡಿ ಕಮಿಷನ್ ತೆಗೆದುಕೊಂಡಿದ್ದೀರಿ ಎಂದು ಅಲ್ಲ. ಈ ಪ್ರವೃತ್ತಿ ನಮ್ಮಲ್ಲಿ ತಪ್ಪದೇ ಹೋದರೆ ನಮ್ಮ ಸ್ಟೇಟ್ ಪಬ್ಲಿಕ್ ಸೆಕ್ಟರ್ ಫ್ಯಾಕ್ಟರಿಗಳಲ್ಲಿರುವ ಅಧಿಕಾರಿಗಳು ಚೆನ್ನಾಗಿ ತಿಂದುತೇಗಿ ಅವುಗಳನ್ನು ಮಾರಲೆಬೇಕಾದ ಅನಿವಾರ್ಯ ಸ್ಥಿತಿಗೆ ಕೊಂಡೊಯ್ಯುತ್ತಾರೆ. ಇದಕ್ಕೆ ನಿಮ್ಮಲ್ಲಿ ಏನು ಪರಿಹಾರ ಇದೆ? ಈ ಕಾರ್ಖಾನೆಗಳು ಪ್ರಾರಂಭ ಮಾಡಿದ್ದುದು ಮಾರುವುದಕ್ಕೋಸ್ಕರವೇ? ಏತಕ್ಕೆ ಲಾಸ್ ಆಗುತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ.—ಇದೆಲ್ಲಾ ಆಗಿರುವುದು ಎಲೆಕ್ಟೆಡ್ ರೆಪ್ರೆಸೆಂಟೇಟಿವ್ಸ್ ಇದ್ದಾಗ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಎಲೆಕ್ಟೆಡ್ ರೆಪ್ರೆಸೆಂಟೇಟಿವ್ಸ್ ತುಂಬಾ ಚೆನ್ನಾಗಿ ಕೆಲಸ ಮಾಡಿದರೆಂದು ನಾನು ಹೇಳಿದನೇ?

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಯಡಿಯೂರಪ್ಪನವರಿಗೆ ಎರಡು ಮೂರು ಕಾರ್ಖಾನೆಗಳನ್ನು ವಹಿಸಿ ಕೊಡುತ್ತೇನೆ ಅವರೇ ನಡೆಸಲಿ. ನಾನ್ ಅಫಿಷಿಯಲ್ ಕೈಯ್ಯಲ್ಲಿ, ಅಧಿಕಾರಿಗಳ ಕೈಯಲ್ಲಿ ಆಗುವುದಿಲ್ಲವೆಂದರೆ ಇನ್ನು ಯಾರನ್ನು ತರೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಸದನದಲ್ಲೇ ಅದನ್ನು ತೀರ್ಮಾನ ಮಾಡೋಣ ನಮ್ಮ ರಾಜ್ಯ ಸರಕಾರದ ಅಧಿಕಾರಿಗಳು ಒಳ್ಳೆಯವರಿದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ಈ ರಾಜ್ಯದಲ್ಲಿನ ಯಾವುದೇ ಪಬ್ಲಿಕ್ ಅಂಡರ್ ಟೇಕಿಂಗ್ಸನ್ನು ನಡೆಸುವಂತಹ ಸ್ಥಿತಿಯಲ್ಲಿ ನಾವು ಇಲ್ಲ, ಆ ಚೈತನ್ಯವನ್ನು ಕಳೆದುಕೊಂಡಿದ್ದೇವೆಂದು ಹೇಳಿ ಟಾಟಾ, ಬಿರ್ಲಾ, ಖೋಡೇಸ್‌ಗೆ ಮಾರುವಂತಹ ತೀರ್ಮಾನವನ್ನು ತೆಗೆದುಕೊಳ್ಳಿ, ರಾಜ್ಯದ ಜನತೆಗೆ ನಾವು ಹೋಗಿ ಹೇಳುತ್ತೇವೆ. ಈ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಏನಾದರೂ ಮಾರ್ಗ ಹುಡುಕಿ ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇನ್ನು ಭದ್ರಾವತಿ ಉಕ್ಕಿನ ಕಾರ್ಖಾನೆಯ ಬಗ್ಗೆ ಹೇಳುವುದಾದರೆ, ಅಲ್ಲಿ ಒಂದು ತಿಂಗಳಿಗೆ ಒಂದೂವರೆ ಕೋಟಿ ರೂಪಾಯಿಗಳವರೆಗೆ ಲಾಸ್ ಆಗುತ್ತಿದೆ, ಪ್ರತಿ ತಿಂಗಳೂ ಈ ರೀತಿಯಾಗುವುದಾದರೆ ಹೇಗೆ? ನಮ್ಮ ಸರಕಾರ ಅಧಿಕಾರಕ್ಕೆ ಬಂದು ನಾಲ್ಕು ವರ್ಷವಾಗಿದೆ, ಇದಕ್ಕೆ ಏಕೆ ಪರಿಹಾರವನ್ನು ಹುಡುಕಿಲ್ಲ? ಏನಾದರೂ ಮಾಡಬೇಕಲ್ಲವೇ? ಭದ್ರಾವತಿ ಉಕ್ಕಿನ ಕಾರ್ಖಾನೆಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಏನು ಪ್ರಯತ್ನ ನಡೆದಿದೆ, ಇದಕ್ಕೇನಾದರೂ ಒಂದು ಸಮಯವನ್ನು ಕೊಡುತ್ತೀರಾ? ಇದೆಲ್ಲವನ್ನು ಅಲ್ಲದೆ ಜನಗಳ ಪರವಾಗಿ ಮತ್ತೇನು ಹೇಳಲಿ, ಈ ರಾಜ್ಯದಲ್ಲಿ ಭೀಕರ ಬರಗಾಲವಿದ್ದು ಯಾವುದೇ ಕಾಮಗಾರಿಗಳು ನಡೆಯುತ್ತಿಲ್ಲ. ರೈತರು ಜೈಲಿಗೆ ಹೋಗಬಹುದು. ರಾಜ್ಯದ ರೈತರ ಸಾಲ ಮನ್ನಾ ಮಾಡಿ ಪುಕ್ಕಟೆ ಕೊಟ್ಟಿದ್ದೇವೆಂದು ತಿಳಿದುಕೊಳ್ಳಿ. ಕೋಟಿಗಟ್ಟಲೆ ಲಾಸ್ ಆಗುವುದಕ್ಕೆ ಬಿಡುತ್ತೀರಿ ಸಣ್ಣ ರೈತರು ತೆಗೆದುಕೊಂಡಿರುವ ೫೦ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿ ಎಂದು ಹೇಳಿದರೆ ನಬಾರ್ಡ್ ಅನ್ನು ತೋರಿಸುತ್ತೀರಿ. ಯಾವುದು ಆ ಕಾನೂನು, ಈ ರಾಜ್ಯದ ಜನತೆಗೆ ಅನಾನುಕೂಲವಾಗುವಂತಹ ಕಾನೂನನ್ನು ಬೆಂಕಿ ಹಚ್ಚಿ ಸುಡಬೇಕಾಗುತ್ತದೆ. ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಇದನ್ನು ಉಳಿಸುವಂತಹ ಕೆಲಸವನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಇದನ್ನು ಉಳಿಸುವುದಕ್ಕೆ ಕೆಲವು ಸಲಹೆಗಳನ್ನು ಹಿಂದೆ ಕೊಟ್ಟಿದ್ದೆ. ನಮ್ಮ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಚಂದ್ರಕಲಾ ಫಾರೆಸ್ಟ್‌ನಲ್ಲಿ ತಿಂಗಳಿಗೆ ಮೂರು ನಾಲ್ಕು ಲೋಡ್ ಗಂಧ ಹೋಗುತ್ತಿದೆ. ಒಂದು ಲೋಡ್ ಗಂಧ ಹೋದರೆ ೭-೮ ಲಕ್ಷ ರೂಪಾಯಿಯಾಗುತ್ತದೆ ಈ ಬಗ್ಗೆ ಕಳೆದ ಹದಿನೈದು ದಿನಗಳ ಹಿಂದೆ ನಾನು ಪ್ರಸ್ತಾಪ ಮಾಡಿದಾಗ ಈ ವಿಷಯವನ್ನು ಹೇಳಿದ್ದೆ. ಅಂಗಡಿಯಲ್ಲಿ ಕಟ್ಟಿಗೆ ಮಾರುವ ರೀತಿಯಲ್ಲಿ ಗಂಧವನ್ನು ಇಟ್ಟುಕೊಂಡು ಮಾರಿ

ತ್ತಿದ್ದಾರೆ. ಅದನ್ನು ಖರೀದಿ ಮಾಡಿ ಕಳಿಸುತ್ತಿದ್ದಾರೆ ಇದನ್ನು ನಾನು ಪೂರ್ಣಾಲ್ಕು ಸಾಗಿ ನೋಡಿದ್ದೇನೆ ಫಾರೆಸ್ಟ್ ಅಧಿಕಾರಿಗಳು ಹಗಲೂ ರಾತ್ರಿ ಕಾಡಿನಲ್ಲಿ ಬಿದ್ದಿದ್ದಾರೆ, ಆದರೂ ಕೂಡ ಪ್ರತಿ ನಿತ್ಯ ೧೦ ಲಕ್ಷ ರೂಪಾಯಿಯ ಗಂಧ ಹೋಗುತ್ತಿದೆ. ಇದನ್ನು ಸರಿಪಡಿಸುವಂತಹ ಪ್ರಯತ್ನ ಮಾಡುವುದು ಬೇಡವೇ? ಅದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಇವರನ್ನು ಕಂಡು ಹಿಡಿಯಲು ಅಲ್ಲಿನ ಅಧಿಕಾರಿಗಳಿಗೆ ಸರಿಯಾದ ಅನುಕೂಲವನ್ನು ಕಲ್ಪಿಸಿಕೊಟ್ಟಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನು ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿ ಚುನಾವಣೆಗಳನ್ನು ಮಾಡಿದಿರಿ ಅದನ್ನು ನಾನೂ ಕೂಡ ಸ್ವಾಗತ ಮಾಡಿದ್ದೇನೆ. ಈ ಚುನಾವಣೆಗಳನ್ನು ಮಾಡುವಾಗ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳನ್ನು ಬೇರೆ ಬೇರೆಯಾಗಿ ಮಾಡುವಂತಹ ಅಗತ್ಯವಾದರೂ ಏನಿತ್ತು ? ನಮ್ಮ ರಾಜ್ಯದ ಅಧಿಕಾರಿಗಳು ಸಾಕಷ್ಟು ಬುದ್ಧಿವಂತರಿದ್ದಾರೆ. ಅವರಲ್ಲಿ ಶಕ್ತಿಯಿಲ್ಲವೆಂದು ನಾನು ಹೇಳುವುದಿಲ್ಲ. ಈ ರೀತಿ ಮಾಡಿದ್ದರೆ, ಪೂರ್ಣಾಲ್ಕು ಕೋಟಿ ರೂಪಾಯಿಗಳ ಹಣ ಉಳಿಯುತ್ತಿತ್ತು. ಎರಡನ್ನೂ ಜೊತೆ ಜೊತೆಯಾಗಿ ಏಕೆ ಮಾಡಿಲ್ಲ. ಇದರ ಬಗ್ಗೆ ಏಕೆ ಚಿಂತನೆ ಮಾಡುತ್ತಿಲ್ಲ ? ಈ ಚುನಾವಣೆಗಳನ್ನು ಮಾಡಿ ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆಂದು ಹೇಳುತ್ತಿದ್ದೀರಿ, ನಿನಗೆ ಅಧಿಕಾರವನ್ನು ಕೊಟ್ಟಿದ್ದೇವೆ. ನೀನು ಏನಾದರೂ ಮಾಡಿಕೊಳ್ಳಿ. ನೀನು ಏನಾದರೂ ನೋಡಿಕೊಳ್ಳಿರಿ ಎಂದು ಹೇಳುತ್ತಿದ್ದೀರಿ. ನಾನು ಪುಸ್ತಕ ತೆಗೆದು ನೋಡಿದೆ ಏನು ಮಾಡಿದ್ದೀರಿ ? ಅದರಲ್ಲಿ ಇಲ್ಲಿದ್ದುದನ್ನು ಟ್ರಾನ್ಸ್‌ಫರ್ ಮಾಡಿ ಕೊಟ್ಟಿದ್ದೀರಿ. ಬೇರೆ ವ್ಯವಸ್ಥೆಯನ್ನು ಮಾಡಿಲ್ಲ. ದುಡ್ಡು ಏನು ಮೇಲಿನಿಂದ ಉದುರುತ್ತದೆಯೇ ? ಇಲ್ಲಿ ಚುನಾಯಿತ ಪ್ರತಿನಿಧಿಗಳಿದ್ದಾರೆ. ಅವರ ಮೇಲೂ ಕೂಡ ಜವಾಬ್ದಾರಿ ಬಿದ್ದಿದೆ. ಈ ರಾಜ್ಯದ ನೈಜವಾದ ಪರಿಸ್ಥಿತಿಯನ್ನು ಸುಧಾರಣೆ ಮಾಡುವಂತಹ ಗಹನವಾದ ಜವಾಬ್ದಾರಿ ತಮ್ಮ ಮೇಲೆ ಮತ್ತು ನಮ್ಮ ಮೇಲೂ ಕೂಡ ಬಿದ್ದಿದೆ. ಇಲ್ಲಿರುವಂತಹ ನಮ್ಮ ಸನ್ಮಿತ್ರರು ಹೋರಾಟ ಮಾಡಿಕೊಂಡು ಬಂದಂತಹ ಜನ.

ಬೇರೆ ಯಾರು ಬಂದುಬಿಟ್ಟರೂ ಇದನ್ನು ಸ್ವಚ್ಛ ಮಾಡುವುದಕ್ಕಾಗುವುದಿಲ್ಲ. ಪರಿಸ್ಥಿತಿ ಹೀಗಿದೆ. ಈ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನವನ್ನು ತಾವು ಮಾಡಬೇಕು. ಇನ್ನು ಮೂರು ವರ್ಷ ಚುನಾವಣೆಗಳು ಇಲ್ಲ. ಮಂತ್ರಿಮಂಡಲದ ವಿಸ್ತರಣೆಯ ಬಗ್ಗೆ ಮಾತನಾಡಿದರೆ ನಿಮಗೆ ಸಿಟ್ಟು ಬರುತ್ತದೆ. ಕಳೆದ ತಿಂಗಳಿನಿಂದಲೂ ಮಂತ್ರಿಮಂಡಲವನ್ನು ವಿಸ್ತರಣೆ ಮಾಡದೇ ಹಾಗೆಯೇ ಮ್ಯಾನೇಜ್ ಮಾಡಿಕೊಂಡು ಬರುತ್ತಿದ್ದೀರಿ. ಇದರ ಬಗ್ಗೆಯೂ ಯೋಚನೆ ಮಾಡಬೇಕು. ಹಾಗೆಯೇ ಇರುವವರನ್ನು ಉಳಿಸಿಕೊಂಡಾದರೂ ಸರಿಯಾದ ಕೆಲಸವನ್ನು ಮಾಡಬೇಕು. ಇದರ ಬಗ್ಗೆ ನಿಮಗೆ ಎಷ್ಟರ ಕಾಳಜಿ ಇದೆ. ಇದರಿಂದ ಸಮಸ್ಯೆಗಳು ಬಗೆಹರಿಯುತ್ತವೆಯೇ ? ಮಂತ್ರಿಗಳು ನಮ್ಮ ಕೈಗೆ ಸಿಗುತ್ತಾರೆಯೇ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಹೇಳಿದರು. ನಾನು ಒಬ್ಬ ಶಾಸಕನಾಗಿ ಹೇಳುತ್ತಿದ್ದೇನೆ. ಜಿಲ್ಲಾ ಪರಿಷತ್ತು ಮತು ಮಂಡಲ ಪಂಚಾಯಿತಿ ಮೂಲಕ ಅಧಿಕಾರ ವಿಕೇಂದ್ರೀಕರಣ ಈ ಬಗ್ಗೆ ಮಾತನಾಡುತ್ತಿದ್ದೇನೆ. ಶಾಸಕನಾಗಿ ನಾನು ನನ್ನ ತಾಲ್ಲೂಕಿನಲ್ಲಿ ೫೦ ಲಕ್ಷ ರೂಪಾಯಿಯ ೧೦-೧೨ ಕೆಲಸಗಳು ಆಗಬೇಕಾಗಿದೆ. ಆ ರೀತಿ ಮಾಡಲು ನನಗೆ ಅಧಿಕಾರ ಕೊಟ್ಟಿದ್ದೀರಾ ? ಎಷ್ಟು ಎಷ್ಟು ಸವಲತ್ತುಗಳನ್ನು ಕೊಟ್ಟಿದ್ದೀರಿ ನಮಗೆ ? ನಾವು ಲಕ್ಷಾಂತರ ಜನಗಳಿಂದ ಆರಿಸಿ ಬಂದಿದ್ದೇವೆ. ಈ ರೀತಿ ನಾಳೆ ಬಜೆಟ್‌ನಲ್ಲಿ. ನಾಳೆ ಬರುವಂಥ ಬಜೆಟ್‌ನಲ್ಲಿ ಯಾವುದಾದರೂ ರಸ್ತೆ, ಯಾವುದಾದರೂ ಕೆರೆ ಯಾವುದಾದರೂ ನಮಗೆ ಬೇಕಾದಂಥದ್ದು ಏನಾದರೂ ನನ್ನ ತಾಲ್ಲೂಕಿಗೆ ಕೊಟ್ಟಿದ್ದೀರಾ ? ಜನಗಳ ಅಭಿಪ್ರಾಯವನ್ನು ತೆಗೆದುಕೊಂಡು ತಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಫೈನಲ್ ಮಾಡಿ ಬಜೆಟ್‌ನಲ್ಲಿ ಇದನ್ನು ಹೇಳುತ್ತೀರಾ ? ಇಲ್ಲ. ನಿಮ್ಮ ಅಧಿಕಾರಿ ಮೂಲಕ ಬಂದದ್ದು ಮತ್ತು ನಿಮ್ಮಗಳಿಗೆ ಖುಷಿ ಬಂದದ್ದು ಮಾಡುತ್ತೀರಿ. ಶಿಕಾರಿಪುರದಲ್ಲಿ ಎಂ.ಎಸ್.ಪಿ. ರೋಡ್‌ನ ವಿಷಯದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಅಪಾದನೆಯನ್ನು ಮಾಡಿದ್ದೆ. ಶ್ರೀಮಾನ್ ಬಸವಣ್ಣಪ್ಪನವರು ಇಲ್ಲಿಯೇ ಇದ್ದಾರೆ. ಈ ವಿಷಯದಲ್ಲಿ ಸಿ.ಓ.ಡಿ. ತನಿಖೆ ನಡೆಯುತ್ತಿವೆ. ಆದ್ದರಿಂದ ಅದರ ಪ್ರಸ್ತಾಪಕ್ಕೆ ಹೋಗುವುದಿಲ್ಲ. ಆದ್ದರಿಂದ ತಮ್ಮಲ್ಲಿ ಒಂದು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ, ಶಿಕಾರಿಪುರದಲ್ಲಿ ಭ್ರಷ್ಟಾಚಾರ ಆಗುತ್ತಿದೆ ಎಂದು ಕೂಗುತ್ತಿದ್ದರು. ಈ ರೀತಿಯಾಗಿ ನನ್ನ ತಾಲ್ಲೂಕಿನ ಬಗ್ಗೆ ಕಾಗದ ಮೇಲೆ ಒಂದು ಶಬ್ದವನ್ನು ಮಾತನಾಡುವ ಪ್ರಯತ್ನವನ್ನು ಮಾಡುತ್ತಿಲ್ಲ. ಮಾದನಹಳ್ಳಿ, ಗುಡ್ಡದಹಳ್ಳಿ ರಸ್ತೆಗಾಗಿ ಎಂಟು ಲಕ್ಷ ರೂಪಾಯಿ ಮಂಜೂರಾಗಿದೆ. ಸನ್ಮಾನ್ಯ ದೇವೇಗೌಡರವರಿಗೆ ಪರ್ಸನಲ್ ಆಗಿ ಲೆಟರ್ ಬರೆದಿದ್ದೇನೆ ಮತ್ತು ಅವರ ಹತ್ತಿರ ಹೋಗಿದ್ದೆವು. ಸದನದಲ್ಲಿ ಈ ವಿಷಯ

ವನ್ನು ಪ್ರಸ್ತಾಪ ಮಾಡುವುದಿಲ್ಲ ಎಂದು ಸ್ಪೆಷಲ್ ಸ್ಕ್ವಾಡ್‌ನ್ನು ಕಳುಹಿಸಿದ್ದರು. ಸದನದಲ್ಲಿ ಪರ್ಸನಲ್ ಆಗಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಮಾತನಾಡಿದ್ದೇನೆ. ನನ್ನ ತಾಲ್ಲೂಕಿಗೆ ಇಂಥ ಅಧಿಕಾರಿ ಬೇಕು ಎಂದು ಲಿಖಿತ ಮೂಲಕ ಕೇಳಿಕೊಂಡೆ. ಅವರ ಹೆಸರನ್ನು ಹೇಳುವುದಿಲ್ಲ. ಸಂಗ್ರಹ ಮಾಡಿದ ಜಲ್ಲಿಯನ್ನು ರಾತ್ರೋರಾತ್ರಿ ತೆಗೆದುಕೊಂಡು ಹೋಗುವುದು. ಈ ರೀತಿಯಾಗಿ ಮಾಡುವಾಗ ಸ್ಥಳದಲ್ಲೇ ಸಿಕ್ಕಿಬಿದ್ದರು. ಇವರು ಸಾಗರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಈ ಎಂ.ಎಲ್.ಎ. ಈ ರೀತಿ ಮಾಡುತ್ತಿದ್ದಾರೆ, ಅವನನ್ನು ಏನು ಮಾಡುತ್ತೇನೋ ನೋಡಿ ಎಂದು ಬೆಂಗಳೂರಿಗೆ ಒಂದು ಕಳಿಸಿದ್ದಾರೆ. ಇದರ ಬಗ್ಗೆ ನಾನು ದೇವೇಗೌಡರ ಹತ್ತಿರ ಹೋಗಿ ಮಾತನಾಡಿದ್ದೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಸನ್ಮಾನ್ಯ ಬಸವಣ್ಣಪ್ಪನವರಿಗೂ ನನಗೂ ರಾಜಕೀಯವಾಗಿ ಬಿನ್ನಾಭಿಪ್ರಾಯ ಇರಬಹುದು. ನಾವು ನೀವೂ ಸೇರಿ ರಾಜ್ಯದ ಜನರ ಹಿತದೃಷ್ಟಿಯಿಂದ ಕೆಲಸ ಮಾಡೋಣ. ಆದ್ದರಿಂದ ನಾನು ಜೆ ಹೆಚ್.ಪಟೇಲ್‌ರವರಲ್ಲಿ ವಿನಂತಿ ಮಾಡಿಕೊಂಡೆ. ಈ ತರಹ ಪರಿಸ್ಥಿತಿಯನ್ನು ಸುಧಾರಣೆ ಮಾಡುವಂಥ ಪ್ರಯತ್ನವನ್ನು ನೀವು ಮಾಡುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ದಯಮಾಡಿ ಸುಧಾರಣೆಯನ್ನು ಮಾಡಲಿಕ್ಕೆ ಪ್ರಯತ್ನ ಮಾಡಿ. ಜನ ಏನು ದೃಷ್ಟಿಕೋಣ ಇಟ್ಟುಕೊಂಡು ನಮ್ಮನ್ನು ಕಳುಹಿಕೊಟ್ಟಿದ್ದಾರೋ ಆ ಜನತೆಯ ಹಿತದೃಷ್ಟಿಯಿಂದ ಕೆಲಸ ಮಾಡೋಣ,

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ರಾಜ್ಯದ ರೈತರಿಗೆ, ಕೂಲಿ ಕಾರ್ಮಿಕರಿಗೆ, ಹರಿಜನ ಗಿರಿಜನರಿಗೆ ಸಂಬಂಧಪಟ್ಟ ಯಾವ ಸಂಗತಿಗಳು ಈ ಬಜೆಟ್‌ನಲ್ಲಿ ಇಲ್ಲ. ರೈತ ಚಳುವಳಿ ನಡೆಯುತ್ತಿದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ೧೦೦ಕ್ಕೆ ೭೦ ಜನ ಗ್ರಾಮಾಂತರದಲ್ಲಿ ವಾಸ ಮಾಡುತ್ತಿದ್ದಾರೆ. ರೈತರ ಸಮಸ್ಯೆಯನ್ನು ಬಗಹರಿಸಬೇಕು. ಈ ರೀತಿ ನೀವು ಕೆಲಸ ಮಾಡಿ ಲಕ್ಷಾಂತರ ಬಡವರ ಕಣ್ಣೀರನ್ನು ಹೊರೆಸುವ ಪ್ರಯತ್ನ ಮಾಡಬೇಕು. ಚುನಾವಣಾ ಪ್ರತಿನಿಧಿಗಳ ಕಣ್ಣಲ್ಲಿ ಹೊಳಪನ್ನು ಕಂಡರೆ ಸಮಸ್ಯೆಗಳು ಬಗೆಹರಿಸುವುದಿಲ್ಲ, ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಅವರಲ್ಲಿ ಶಕ್ತಿ ಉಂಟು. ಅವರು ಒಳ್ಳೆಯ ಅಡ್ಮಿನಿಸ್ಟ್ರೇಟರ್ ಆಗಬೇಕು ಎಂದುಕೊಂಡಿದ್ದೆವು. ಆದರೆ ಪಾಲಿಟೀಷಿಯನ್ ಆದರು. ಅವರು ಒಳ್ಳೆಯ ಅಡ್ಮಿನಿಸ್ಟ್ರೇಟರ್ ಆಗಬೇಕು ಎಂದು ನಮ್ಮ ಆಸೆ. ಆಸೆ ಇರುವುದು ಎಲ್ಲರಿಗೂ ಸ್ವಾಭಾವಿಕ. ಮಾನ್ಯ ಶ್ರೀನಿವಾಸ್‌ರವರು ಹೇಳಿದ ಹಾಗೆ ರಾಜ್ಯದ ಜನತೆಯ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. ಬಜೆಟ್‌ನಲ್ಲಿ ತೆರಿಗೆಯನ್ನು ಹಾಕಿದ್ದೀರಿ. ವಿಶೇಷವಾಗಿ ಗೊಬ್ಬರದ ಮೇಲೆ ಹಾಕಿರುವ ಬೆಲೆಯನ್ನು ಇಳಿಸಬೇಕು. ಬಡವನ ಸೈಕಲ್ ಮೇಲೆ ಹಾಕಿರುವ ತೆರಿಗೆಯನ್ನು ಇಳಿಸಬೇಕು. ರೈತನ ಸಾಲವನ್ನು ಮನ್ನಾ ಮಾಡಬೇಕು. ಅವನು ನೆಮ್ಮದಿಯಿಂದ ಜೀವನ ಮಾಡಿ ಆ ಭೀಕರ ಬರಗಾಲದಿಂದ ನರಳುತ್ತಿದ್ದಾನೆ ಕಾಮಗಾರಿ ಕೆಲಸಗಳು ಎಲ್ಲೂ ನಡೆಯುತ್ತಿಲ್ಲ. ಅಧ್ಯಕ್ಷರೇ ನಿಮ್ಮ ಕ್ಷೇತ್ರದಲ್ಲಿ ನಡೆಯುತ್ತಿದೆಯೇ ? ಎಲ್ಲೂ ನಡೆಯುತ್ತಿಲ್ಲ. ಚುನಾವಣೆಗೆ ಮುಂಚೆ ಬಡವರಲ್ಲಿ ಇದ್ದ ಕಳಕಳಿ ಎಲ್ಲಿ ಹೋಯಿತು ? ಬಡವರನ್ನು ಉಳಿಸುವ ಪ್ರಯತ್ನ ಮಾಡಬೇಕೆಂದು ಹೇಳಿ ಈ ಬಜೆಟ್‌ನಲ್ಲಿ ಮಾರ್ಪಾಡುಗಳನ್ನು ಮಾಡಬೇಕೆಂದು ಹೇಳಿ ಈ ಬಜೆಟ್‌ನ್ನು ನಾನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಇವೊತ್ತಿನ ದಿವಸ ಅವರಿಗೆ ಇಂಥಾ ಒಂದು ಅಧಿಕಾರವನ್ನು ಕಾನೂನು ಬದ್ಧವಾಗಿ ಆಯಾಯ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಹಾಗೆಯೇ ರಾಜಕೀಯ ಅಧಿಕಾರವನ್ನೂ ಮತ್ತು ಆರ್ಥಿಕ ಅಭಿವೃದ್ಧಿಯ ಅಧಿಕಾರವನ್ನೂ ಈ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡುವುದರ ಮೂಲಕ ಈ ದಿಶೆಯಲ್ಲಿ ಒಂದು ಕ್ರಾಂತಿಕಾರಕವಾದ ಬದಲಾವಣೆ ಮಾಡಿದ್ದಾರೆ. ಆದರೆ ಇದರಿಂದ ಎಷ್ಟರಮಟ್ಟಿಗೆ ಜನರಿಗೆ ಫಲಕಾರಿಯಾಗುತ್ತದೆಯೋ ? ಎನ್ನುವುದನ್ನು ನಾವು ನೋಡಬೇಕಾಗಿದೆ. ಇವೊತ್ತಿನ ದಿವಸ ನಾವು ಅವರಿಗೆ ಕೆಳ ಹಂತದಿಂದ ಸಂಪನ್ಮೂಲಗಳನ್ನು ರೂಪಿಸಿಕೊಳ್ಳುವ ಅಧಿಕಾರವನ್ನು ಕೊಟ್ಟಿದ್ದೇವೆ. ಜೊತೆಗೆ ಅವರಿಗೆ ಆರ್ಥಿಕ ವಿಕೇಂದ್ರೀಕರಣವನ್ನೂ ಸಹ ಮಾಡಿದ್ದೇವೆ. ಆದರೆ ಇದರಲ್ಲಿ ಅವರು ಎಷ್ಟರಮಟ್ಟಿಗೆ ಜಯಶೀಲರಾಗುತ್ತಾರೋ ನೋಡಬೇಕು, ಅವರು ಜಯಶೀಲರಾಗುತ್ತಾರೆ ಎನ್ನುವುದು ನಮ್ಮೆಲ್ಲರ ಅನಿಸಿಕೆ. ೧೯೪೭ ರಿಂದಲೂ ಕೂಡಾ ಇಂಥಾ ಒಂದು ವ್ಯವಸ್ಥೆಯನ್ನು ರಾಜ್ಯ ಮಟ್ಟದಲ್ಲಾಗಲಿ ಅಥವಾ ರಾಷ್ಟ್ರ ಮಟ್ಟದಲ್ಲಾಗಲಿ ಇದುವರೆಗೆ ಇರಲಿಲ್ಲ. ಇದು ಕೇವಲ ರಾಜಕೀಯ ಶ್ರೀಮಂತ ವರ್ಗದವರಿಗೆ ಇತ್ತು ಅನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಈವಾಗ ಇದರ ಬಗ್ಗೆ ಒಂದು

ಕ್ರಾಂತಿಕಾರಕವಾದ ಬದಲಾವಣೆ ಮಾಡುವುದಕ್ಕೆ ಏನು ಪ್ರಾರಂಭ ಮಾಡಿದ್ದಾರೆ ಇದು ರಾಷ್ಟ್ರಮಟ್ಟದಲ್ಲಿ ಹೋಲಿಕೆ ಮಾಡಿ ನೋಡುವುದಾದರೆ ನಮ್ಮ ಕರ್ನಾಟಕವೇ ಮೊದಲು ಅದರಲ್ಲೂ ನಮ್ಮ ಜನತಾ ಪಕ್ಷದ ಸರ್ಕಾರ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕೆಳಗಿನ ಹಂತದಿಂದ ಹಿಡಿದು ಮೇಲಿನ ಹಂತದವರೆಗೂ ಈ ಒಂದು ಅಧಿಕಾರದ ವರ್ಗಾವಣೆಯಿಂದ ಗ್ರಾಮಾಭಿವೃದ್ಧಿ ಕೆಲಸಗಳು ಚೆನ್ನಾಗಿ ಆಗುತ್ತದೆಂದು ನಾನು ಭಾವಿಸಿದ್ದೇನೆ. ನಾನು ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ನಡೆದ ಚುನಾವಣೆಯಲ್ಲಿ ಪಕ್ಷಾತೀತವಾಗಿ ಚುನಾವಣೆ ನಡೆದಿರುವುದನ್ನು ನೋಡಿದರೆ ಅದು ಎಲ್ಲರಿಗೂ ಅರ್ಥವಾಗುತ್ತದೆ ಇದುವರೆಗೆ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಬಡವರ ಶೋಷಣೆಯ ವರ್ಗ ಏನು ಇತ್ತು ಅದಕ್ಕೆ ಹೆಚ್ಚು ಪ್ರಾತಿನಿಧ್ಯವನ್ನು ಹಿಂದೆ ಕೊಡುತ್ತಿದ್ದರು ಈಗ ಅದನ್ನು ಬದಲಾವಣೆ ಮಾಡುವುದರ ಮೂಲಕ ರಾಜಕೀಯವಾಗಿ ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದಕ್ಕೆ ಕ್ರಾಂತಿ ಕಾರಕವಾದ ಬದಲಾವಣೆಯನ್ನು ಮಾಡುವುದಕ್ಕೆ ಇದನ್ನು ಉಲ್ಲೇಖಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ ಸನ್ಮಾನ್ಯ ಅಧ್ಯಕ್ಷರೇ, ೧೯೮೭-೮೮ನೇ ಸಾಲಿನ ಆಯವ್ಯಯ ಪತ್ರದಲ್ಲಿ ಅನೇಕ ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಆಲೋಚನೆ ಮಾಡಬೇಕಾಗಿದೆ. ಇನ್ನು ೧೯೮೬–೮೭ರಲ್ಲಿ ಆರ್ಥಿಕ ಪರಿಸ್ಥಿತಿ ಏನು ಇತ್ತು ಅದನ್ನು ವಿಶ್ಲೇಷಣೆ ಮಾಡುವುದಾದರೆ ಅವಾಗಿನ ಪರಿಸ್ಥಿತಿ ಏನು ಇತ್ತು ಈವಾಗಿನ ಪರಿಸ್ಥಿತಿ ಏನು ಇದೆ ಎನ್ನುವುದು ಗೊತ್ತಾಗುತ್ತದೆ, ಹಿಂದಿನ ಕಾಲದವರೆಗೆ ಉತ್ಪಾದನೆ ಎಷ್ಟು ಇತ್ತು ಅನ್ನುವುದನ್ನು ನೋಡಿದರೆ

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ). — ಸನ್ಮಾನ್ಯ ಅಧ್ಯಕ್ಷರೇ, ೧೯೮೭–೮೮ನೇ ಸಾಲಿಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಈ ಆಯವ್ಯಯಪತ್ರವನ್ನು ಬೆಂಬಲಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಮೊದಲನೆಯದಾಗಿ ಈ ಆಯವ್ಯಯಪತ್ರದಲ್ಲಿ ಸೂಚಿಸಿರುವಂತೆ ಸನ್ಮಾನ್ಯ ಮುಖ್ಯಮಂತ್ರಿಗಳು ತೆರಿಗೆಯ ನೀತಿಯ ಬಗ್ಗೆ ಏನು ಹೇಳಿದ್ದಾರೆ, ಆ ನೀತಿಯ ಉದ್ದೇಶದ ಬಗ್ಗೆ ಏನು ಹೇಳಿದ್ದಾರೆ ಆ ಮಾತಿಗೆ ನನ್ನ ಬೆಂಬಲವನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ನಾವೆಲ್ಲರೂ ಕೂಡಿ ಎಲ್ಲ ಕ್ಷೇತ್ರಗಳಲ್ಲೂ ಆರ್ಥಿಕ ಅಭಿವೃದ್ಧಿಯಾಗಬೇಕು ಎಂದು ಏನು ಹೇಳುತ್ತಿದ್ದೇವೋ ಅದನ್ನು ಎಲ್ಲಾ ಜನರೂ ಸಹ ಹೇಳುತ್ತಿದ್ದಾರೆ. ಸಾಮಾಜಿಕ ನ್ಯಾಯವನ್ನು ಸುಧಾರಿಸಲಿಕ್ಕೆ ಯಾರಿಗೆ ತೆರಿಗೆಯನ್ನು ಕೊಡುವ ಶಕ್ತಿ ಇದೆಯೋ ಅಂಥವರಿಗೆ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕು. ಅದಕ್ಕೆ ಎರಡನೇ ಅಭಿಪ್ರಾಯವೇ ಇಲ್ಲ ಎಂದು ಹೇಳುತ್ತೇನೆ. ಹಾಗೆಯೇ ತೆರಿಗೆಯ ಕಳ್ಳತನವನ್ನು ತಪ್ಪಿಸುವುದಕ್ಕೆ ಬೇಕಾದ ಕ್ರಮವನ್ನು ತೆಗೆದುಕೊಳ್ಳಿರಿ. ತೆರಿಗೆಯನ್ನು ವಸೂಲ್ಮಾಡುವುದಕ್ಕೆ ಸರಳವಾದ ನಿರೂಪಣೆ ಏನು ಮಾಡಬೇಕೋ ಅದನ್ನು ಮಾಡಿರಿ, ಅದಕ್ಕೆ ನಮ್ಮೆಲ್ಲರ ಬೆಂಬಲ ಇದೆ. ಹಾಗೆಯೇ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸುವುದಕ್ಕೆ ಮತ್ತು ರಾಜ್ಯದ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರೋ ಅದಕ್ಕೆಲ್ಲಾ ಎಲ್ಲರೂ ಬೆಂಬಲವನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ. ಈ ಬಡ್ಜೆಟ್ ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಹಾಗೆಯೇ ರಾಜ್ಯಪಾಲರ ಭಾಷಣದಲ್ಲೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಪಂಚಯತ್‌ರಾಜ್ ಸಂಸ್ಥೆಯ ಉದಯದ ಬಗ್ಗೆ ಮಾತನಾಡಿದ್ದಾರೆ. ಈ ಸಂಸ್ಥೆ ಇರುವುದು ಹೊಸದೇನೂ ಅಲ್ಲ ೧೯೫೯ನೇ ಇಸವಿಯಲ್ಲಿಯೇ ಈ ಸಂಸ್ಥೆ ಇತ್ತು, ಅದಕ್ಕಿಂತ ಮೊದಲೂ ಇತ್ತು. ಅದು ಗ್ರಾಮ ಪಂಚಾಯತಿಯೇ ಆಗಿರಬಹುದು, ಮಂಡಲ ಪಂಚಾಯಿತಿಯೇ ಆಗಿರಬಹುದು ಜಿಲ್ಲಾ ಬೋರ್ಡ್ ಆಗಿರಬಹುದು, ತಾಲ್ಲೂಕು ಬೋರ್ಡ್ ಆಗಿರಬಹುದು, ಅಥವಾ ಜಿಲ್ಲಾ ಅಭಿವೃದ್ಧಿ ಮಂಡಲಿಯೇ ಆಗಿರಬಹುದು. ಇದರಲ್ಲಿ ಹಿಂದೆ ಇದ್ದಂಥ ಸಂಸ್ಥೆಗೂ ಈಗ ಇವರ ಮಾಡಿರತಕ್ಕಂಥ ಸಂಸ್ಥೆಗೂ ಈಗ ಇವರು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಏನು ಮಾಡಿದ್ದಾರೆ ಅದಕ್ಕೂ ಇದಕ್ಕೂ ಹೋಲಿಕೆ ಮಾಡಿ ನೋಡಿದರೆ ಇದು ಎಷ್ಟರಮಟ್ಟಿಗೆ ಸರಿ ಅನ್ನುವುದನ್ನು ನೋಡಬೇಕು. ಹಿಂದೆ ಮಾಡಿದಂಥ ಈ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರವನ್ನು ಕೊಟ್ಟಿರಲಿಲ್ಲ. ಹಿಂದೆ ಇದ್ದ ಯಾವ ಗ್ರಾಮಪಂಚಾಯಿತಿಗೇ ಆಗಲೀ ಯಾವುದಕ್ಕೇ ಆಗಲಿ ಅವರು ಆರ್ಥಿಕ ಅಭಿವೃದ್ಧಿಯನ್ನು ರೂಪಿಸಿಕೊಳ್ಳುವುದಕ್ಕೆ ಅಧಿಕಾರ ಕೊಟ್ಟಿರಲಿಲ್ಲ. ಆಗಿನ ಕಾಲಕ್ಕೆ ಅದು ಬಹಳ ಕಡಿಮೆ ಇತ್ತು. ಆಗ ರೆವಿನ್ಯೂ ಆದಾಯ ಎಷ್ಟು ಇತ್ತು ಅನ್ನುವುದನ್ನು ನೋಡಿದರೆ ಇಂದಿನ ಆದಾಯಕ್ಕಿಂತ ಕಡಿಮೆ ಇತ್ತು ಮಾನ್ಯ ಮುಖ್ಯ ಮಂತ್ರಿಗಳು ೧೯೮೬–೮೭ನೇ ಸಾಲಿನಲ್ಲಿ ರಾಷ್ಟ್ರದ, ರಾಜ್ಯದ ಆದಾಯ

ಎಷ್ಟು ಇತ್ತು ಎನ್ನುವುದನ್ನು ಏನು ತೋರಿಸಿದ್ದಾರೆ ಅದರ ಬಗ್ಗೆ ತುಲನೆ ಮಾಡುವುದಕ್ಕೆ ನಾನು ಇಷ್ಟ ಪಡುತ್ತೇನೆ.

೧-೩೦ ಪಿ. ಎಂ.

೧೯೭೦-೭೧ರಲ್ಲಿ ಈ ರಾಷ್ಟ್ರದ ಆದಾಯ ೩೪,೨೩೫ ಕೋಟಿ ರೂಪಾಯಿಗಳಿದ್ದರೆ ೧೯೮೪-೮೫ರಲ್ಲಿ ಇದು ೧,೭೩,೯೦೦ ಕೋಟಿ ರೂಪಾಯಿಗಳಿಗೆ ಹೆಚ್ಚಿತು. ಅದೇ ನಮ್ಮ ರಾಜ್ಯದ ಆದಾಯ ೧೯೭೦-೭೧ ರಲ್ಲಿ ೮೫೮ ಕೋಟಿ ರೂಪಾಯಿಗಳಿದ್ದರೆ ೧೯೮೪-೮೫ರಲ್ಲಿ ೮೩೫೪ ಕೋಟಿ ರೂಪಾಯಿಗಳಿಗೆ ಹೆಚ್ಚಿತು. ಈ ಒಂದು ಹೆಚ್ಚಳವನ್ನು ನಮ್ಮ ರಾಷ್ಟ್ರದ ಹೆಚ್ಚಳಕ್ಕೆ ಹೋಲಿಕೆ ಮಾಡಿ ನೋಡಿದರೆ ಇಲ್ಲವೇ ತುಲನೆ ಮಾಡಿ ನೋಡಿದರೆ ನಮ್ಮ ರಾಜ್ಯದ ಆದಾಯ ಕಡಿಮೆ ಆಗಿದೆ. ನಮ್ಮದು ರಾಷ್ಟ್ರದ ಆದಾಯದ ಸರಾಸರಿಗಿಂತ ಕಡಿಮೆ ಇದೆ ಎಂದು ಹೇಳಬಹುದು. ರಾಷ್ಟ್ರದ ಹೆಚ್ಚಳ ೧೨.೪೨ ಇದ್ದರೆ ರಾಜ್ಯದ ಹೆಚ್ಚಳ ೧೧.೭೬ ಈ ಬಗ್ಗೆ ನಮ್ಮ ರಾಜ್ಯವನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದಾಗಲೂ ಸಹ ನಮ್ಮ ಆದಾಯ ಅಷ್ಟೊಂದು ತೃಪ್ತಿಕರವಾಗಿ ಹೆಚ್ಚಾಗಿಲ್ಲ ಎಂದು ಹೇಳಬಹುದು. ಕಳೆದ ಸಲ ಚೆನ್ನಾಗಿ ಮಳೆಯಾದ ಕಾರಣ ನಮ್ಮ ವಾರ್ಷಿಕ ಉತ್ಪಾದನೆ ಹೆಚ್ಚಾಗಿದೆ. ಇದು ೮.೮ ರಷ್ಟು ಜಾಸ್ತಿ ಆಗಿದೆ. ೧೯೮೫-೮೬ನೇ ಸಾಲಿನಲ್ಲಿ ಖಾಸಗೀ ಕ್ಷೇತ್ರ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿನ ಬಂಡವಾಳ ಹೂಡಿಕೆಯನ್ನು ನಾವು ಲೆಕ್ಕಕ್ಕೆ ತೆಗೆದುಕೊಂಡರೆ ಶೇಕಡ ೧೨ರಷ್ಟು ಹೆಚ್ಚಾಗಿದೆ. ಈ ಬಂಡವಾಳ ಹೂಡಿಕೆ ೧೯೮೪-೮೫ರಲ್ಲಿ ೨೦೮೬ ಕೋಟಿ ರೂಪಾಯಿ ಗಳಾಗಿದ್ದರೆ ೧೯೮೫-೮೬ರಲ್ಲಿ ೨೩೪೯ ಕೋಟಿ ರೂಪಾಯಿಗಳಿಗೆ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಲು ನಾವು ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಿದ್ದೇವೆ. ೧೯೮೬-೮೭ನೇ ಸಾಲಿನಲ್ಲಿ ಸಾಲದ ಮೊತ್ತ ೨೬೬೭ ಕೋಟಿ ರೂಪಾಯಿಗಳಿದ್ದರೆ ೧೯೮೫-೮೬ನೇ ಸಾಲಿನಲ್ಲಿ ೨೪೮೯ ಕೋಟಿ ರೂಪಾಯಿಗಳಿತ್ತು. ಈ ಸಾಲದ ಹಣದಲ್ಲಿ ನಾವು ೧೨೨೯ ಕೋಟಿ ರೂಪಾಯಿಗಳನ್ನು ಸಾಲದ ಕಂತು ಮತ್ತು ಬಡ್ಡಿಗಾಗಿ ಕೊಟ್ಟು ಇನ್ನುಳಿದ ಹಣವನ್ನು ನಮ್ಮ ಅಭಿವೃದ್ಧಿ ಕೆಲಸಗಳಿಗೆ ಖರ್ಚು ಮಾಡುತ್ತಿದ್ದೇವೆ ನಾವು ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ೨೭೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ೬ನೇ ಯೋಜನೆಯ ಅವಧಿಯಲ್ಲಿ ನಾವು ಖರ್ಚು ಮಾಡಬೇಕಾಗಿದ್ದುದು ೨೨೬೫ ಕೋಟಿ ರೂಪಾಯಿಗಳಾಗಿದ್ದರೂ ಸಹ ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳುವುದರ ಮೂಲಕ ನಾವು ೨೭೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಯೋಜನಾ ಆಯೋಗದವರು ೬೫೮ ಕೋಟಿ ರೂಪಾಯಿಗಳಷ್ಟು ಸಂಪನ್ಮೂಲವನ್ನು ಶೇಖರಣೆ ಮಾಡಬೇಕೆಂದು ನಮಗೆ ತಿಳಿಸಿದ್ದರೂ ಸಹ ನಾವು ೭೫೫ ಕೋಟಿ ರೂಪಾಯಿಗಳನ್ನು ಶೇಖರಣೆ ಮಾಡಿದ್ದೇವೆ. ಅದೇರೀತಿ ೭ನೇ ಪಂಚವಾರ್ಷಿಕ ಯೋಜನೆಯ ಪೂರ್ವನಿರ್ಧರಿತ ಅಂದಾಜು ವೆಚ್ಚ ೩೫೭೫ ಕೋಟಿ ರೂಪಾಯಿಗಳು. ೧೯೮೯ ಮತ್ತು ೧೯೯೦ನೇ ಸಾಲುಗಳಲ್ಲಿ ಅಂದರೆ ಇನ್ನು ಎರಡು ವರ್ಷಗಳಲ್ಲಿ ನಾವು ೧೫೦೬ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಬೇಕಾಗಿದೆ. ಈಗಾಗಲೇ ನಾವು ೧೦೫೬ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸಿದ್ದೇವೆ. ಒಟ್ಟಿನಲ್ಲಿ ನಾವು ನಮ್ಮ ಸಂಪನ್ಮೂಲವನ್ನು ಹೆಚ್ಚಿನ ರೀತಿಯಲ್ಲಿ ಸಂಗ್ರಹ ಮಾಡಲು ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಿದ್ದೇವೆ. ಮತ್ತೆ ತೆರಿಗೆ ಸಂಗ್ರಹಣೆ ಬಗ್ಗೆ ಹೇಳಬೇಕೆಂದರೆ, ಇಡೀ ರಾಷ್ಟ್ರದಲ್ಲಿ ತಮಿಳುನಾಡು ಬಿಟ್ಟರೆ, ಆಂಧ್ರ ಮತ್ತು ಕರ್ನಾಟಕ ರಾಜ್ಯಗಳು ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಅಂದರೆ ನೀವು ತೆರಿಗೆ ಹಾಕುವುದರಲ್ಲಿ ಪ್ರವೀಣರಿದ್ದೀರಿ ಅಲ್ಲವೇ ?

ಶ್ರೀ ಎಚ್. ಏಕಾಂತಯ್ಯ.— ೧೯೮೫-೮೬ನೇ ಸಾಲಿನಲ್ಲಿ ಈ ಬಗ್ಗೆ ಯಾವ ರೀತಿ ಪ್ರಯತ್ನ ಮಾಡಿದ್ದೇವೆಂಬುದನ್ನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ನೀವು ಬರೀ ಟ್ಯಾಕ್ಸ್ ಹಾಕುತ್ತೀರಾ ಎಂದು ಕೇಳಿದರು. ನಮಗೆ ಅಧಿಕಾರ ಇದೆ, ಹಾಕುತ್ತೇವೆ. ಇವೊತ್ತು ದುರಾದೃಷ್ಟದಿಂದ ಏನಾಗಿದೆ ಎಂದರೆ, ಕೇಂದ್ರಸರ್ಕಾರದವರು ಟ್ಯಾಕ್ಸ್ ಹಾಕಿದರೂ ಪರವಾಗಿಲ್ಲ. ಅವರು ಡಿಫಿಸಿಟ್ ಬಜೆಟ್‌ನ್ನು ಮಂಡನೆ ಮಾಡಿದರೂ ಪರವಾಗಿಲ್ಲ. ಆದರೆ ನಾವು ಟ್ಯಾಕ್ಸ್ ಹಾಕಿದರೆ ಇವರು ಕೇಳುತ್ತಾರೆ. ಅವರು ರಾಜ್ಯಗಳಿಗೆ ಕೊಡುತ್ತಿದ್ದ ಓವರ್‌ಡ್ರಾಫ್ಟನ್ನು ತೆಗೆದುಹಾಕಿದ್ದಾರೆ. ನಮಗೆ ನೋಟ್‌ಗಳನ್ನು

ಅವರಂತೆ ಪ್ರಿಂಟ್ ಮಾಡುವ ಅಧಿಕಾರ ಇಲ್ಲ. ಇಂತಹ ಸಂದರ್ಭದಲ್ಲಿ ನಾವು ರಾಜ್ಯದ ಅಭಿವೃದ್ಧಿ ಗೋಸ್ಕರ ಟ್ಯಾಕ್ಸ್ ಹಾಕದೆ ಮತ್ತೇನು ಮಾಡಬೇಕು ಎಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೇಳುತ್ತೇನೆ ?

ಇವತ್ತಿನ ದಿವಸ ಏನು ಒಂದು ಅಭಿವೃದ್ಧಿ ವೆಚ್ಚವನ್ನು ಮಾಡುತ್ತಾ ಇದ್ದೇವೆ ಅದೂ ಸಹ ಮುಖ್ಯ ಎಂದು ನಾನು ಭಾವಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ೧೯೮೫-೮೬ರಲ್ಲಿ ನಮ್ಮ ಟ್ಯಾಕ್ಸ್ ಎಫರ್ಟ್ ಏನು ಎಂದು ಹೇಳಿದರು. ಕರ್ನಾಟಕ ಟ್ಯಾಕ್ಸ್ ಎಫರ್ಟ್ ೧೪.೭೫ ಹಾಕಿದ್ದಾರೆ ಆಂಧ್ರ ಪ್ರದೇಶ ೧೪.೮ ತಮಿಳುನಾಡು ೧೭.೦೭ ಆಗಿದೆ. ಎಲ್ಲಾ ರಾಜ್ಯಗಳಲ್ಲಿಯೂ ಸರಾಸರಿ ತೆಗೆದುಕೊಂಡಾಗ ೧೦.೫೮ ಟ್ಯಾಕ್ಸ್ ಎಫರ್ಟ್ ಪರ್ಸೆಂಟೇಜ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಹಿಂದಿನದು ಓದಿ, ಎಲ್ಲಾ ಟ್ಯಾಕ್ಸ್ ಕಡಿಮೆ ಇದೆ. ಅಲ್ಲಿ ಪರ್‌ಕ್ಯಾಪಿಟ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಕೂಡ ಜಾಸ್ತಿ ಇದೆ. ನಮ್ಮದು ಟ್ಯಾಕ್ಸ್ ಜಾಸ್ತಿ ಇದೆ, ಪರ್‌ಕ್ಯಾಪಿಟ ಡೆವಲಪ್‌ಮೆಂಟ್ ಕಡಿಮೆ ಇದೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಖರ್ಗೆಯವರು ನಮ್ಮನ್ನು ತಪ್ಪುದಾರಿಗೆ ಎಳೆಯಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ, ನಮ್ಮನ್ನು ಅವರು ತಪ್ಪುದಾರಿಗೆ ಎಳೆಯಲಿಕ್ಕೆ ಸಾಧ್ಯವಿಲ್ಲ. ಈಗ ಪರ್‌ಕ್ಯಾಪಿಟ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಬಗ್ಗೆ ಹೇಳಿದರು. ರಾಷ್ಟ್ರದಲ್ಲಿ ಮುಖ್ಯವಾದಂಥ ೧೫ ರಾಜ್ಯಗಳಿವೆ. ನಮ್ಮ ರಾಜ್ಯದಲ್ಲಿ ೪೫೫ ರೂಪಾಯಿಗಳನ್ನು ಪರ್ ಕ್ಯಾಪಿಟ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಖರ್ಚು ಮಾಡುತ್ತಾ ಇದ್ದೇವೆ. ಎಲ್ಲಾ ರಾಜ್ಯಗಳ ಸರಾಸರಿ ಪರ್‌ಕ್ಯಾಪಿಟ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಕೇವಲ ೩೯೩ ರೂಪಾಯಿಗಳು ಆದುದರಿಂದ ಇವೊತ್ತಿನ ದಿವಸ ಈ ಒಂದು ಆರೋಪಣೆ ಏನು ಮಾಡುತ್ತಾ ಇದ್ದಾರೆ ಅದು ಸರಿಯಲ್ಲ. ಇದರ ಜೊತೆಗೆ ಇನ್ನೊಂದು ಮಾತನ್ನು ಹೇಳುತ್ತೇನೆ. ಕೆಲವು ರಾಜ್ಯಗಳಲ್ಲಿ ಟ್ಯಾಕ್ಸ್ ಕಡಿಮೆ ಹಾಕಿದ್ದಾರೆ. ಹರಿಯಾಣ, ಪಂಜಾಬ್‌ನಲ್ಲಿ ಟ್ಯಾಕ್ಸ್ ಕಡಿಮೆ ಹಾಕಿದ್ದಾರೆ. ಆ ರಾಜ್ಯಗಳ ಆದಾಯ ರಾಷ್ಟ್ರೀಯ ಸರಾಸರಿ ಪರ್‌ಕ್ಯಾಪಿಟ ಆದಾಯ ಕ್ಕಿಂತ ಜಾಸ್ತಿ ಇದೆ. ಆದ್ದರಿಂದ ಅವರು ಕಡಿಮೆ ಟ್ಯಾಕ್ಸನ್ನು ಹಾಕಿರಬಹುದು ಇಷ್ಟು ವರ್ಷಗಳಿಂದ ನೀವು ಕೃಷಿ ಉತ್ಪಾದನೆ ಹೆಚ್ಚು ಮಾಡಲಿಕ್ಕೆ, ಕೈಗಾರಿಕಾ ಉತ್ಪಾದನೆ ಹೆಚ್ಚು ಮಾಡಲಿಕ್ಕೆ ಕಾರ್ಯ ಕ್ರಮ ತೆಗೆದುಕೊಂಡು ೬ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಸುಮಾರು ೨೮ ಕೋಟಿ ರೂಪಾಯಿಗಳು ೧೭ ನೀರಾವರಿ ಯೋಜನೆಗಳನ್ನು ಪ್ರಾರಂಭ ಮಾಡಬೇಕು ಎಂದು ಹೇಳಿದಿರಿ, ಆದರೆ ತಾವು ಪ್ರಾರಂಭ ಮಾಡಿದ್ದಿರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಮಾಡಿದ್ದನ್ನೇ ನೀವು ಮುಂದುವರಿಸುತ್ತಾ ಇದ್ದೀರಿ ನಿಮ್ಮದೆಲ್ಲಾ ಕನ್ನಡಿಯೊಳಗಿನ ಗಂಟು

ಶ್ರೀ ಹೆಚ್. ಏಕಾಂತಯ್ಯ.—ಈ ಅಂಕಿ ಅಂಶಗಳು ನಿಮಗೆ ಸರಿ ಕಾಣದೇ ಇರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಅಂಕಿ ಅಂಶಗಳ ಪ್ರಕಾರವೇ ಈಗ ಎಲ್ಲದಕ್ಕಿಂತ ಹೈಯೆಸ್ಟ್ ಟ್ಯಾಕ್ಸ್ ಪೇಯಿಂಗ್ ಸ್ಟೇಟ್ ಕರ್ನಾಟಕ. ಈಗ ಬಂದಿರುವ ೧೪೫ ಕೋಟಿ ರೂಪಾಯಿ ಗಳನ್ನು ಸೇರಿಸಿದರೆ ೧೭.೫ ಆಗುತ್ತದೆ. ನಮ್ಮದು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಾವು ನಂಬರ್ –೧ ನಲ್ಲಿದ್ದೇವೆ. ತಮಿಳುನಾಡಿಗಿಂತ ಮುಂದೆ ಬಂದಿದ್ದೇವೆ. ನಾವು ಎಲ್ಲದಕ್ಕಿಂತಲೂ ಮೇಲೆ ಪ್ರಥಮ ಸ್ಥಾನದಲ್ಲಿದ್ದೇವೆ. ಮತ್ತೆ ಪರ್‌ಕ್ಯಾಪಿಟ ಡೆವಲಪ್‌ಮೆಂಟ್ ಏನಿದೆ ಅದರಲ್ಲಿ ಹೋಲಿಸಿಕೊಂಡರೆ ನಾವು ೯ನೇ ಸ್ಥಾನದಲ್ಲಿದ್ದೇವೆ. ಟ್ಯಾಕ್ಸ್ ಹೈಯೆಸ್ಟ್, ಎಕ್ಸ್‌ಪೆಂಡಿಚೇರ್ ಕಡಿಮೆ. ನಾವು ೯ನೇ ಸ್ಥಾನದಲ್ಲಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ.—ನಮ್ಮ ಅಂಕಿ ಅಂಶಗಳ ಪ್ರಕಾರ ನಾವು ೫ನೇ ಸ್ಥಾನದಲ್ಲಿದ್ದೇವೆ. ೪೫೫ ರೂಪಾಯಿ ನಾವು ಪರ್ ಕ್ಯಾಪಿಟ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಮಾಡುತ್ತಾ ಇದ್ದೇವೆ. ಪೇಜ್ ೬೭ರಲ್ಲಿ ಓದಿದರೆ ಗೊತ್ತಾಗುತ್ತದೆ. ನಾವು ೫ನೇ ಸ್ಥಾನದಲ್ಲಿದ್ದೇವೆ, ೯ನೇ ಸ್ಥಾನದಲ್ಲಿದ್ದೇವೆ ಎನ್ನುವ ಮಾತು ಸರಿಯಲ್ಲ. ಮಾನ್ಯ ಅಧ್ಯಕ್ಷರೆ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಮಾನ್ಯ ಖರ್ಗೆಯವರು ಹೇಳಿದ ಹಾಗೆ ಟ್ಯಾಕ್ಸ್ ಹಾಕದೆ ಸಂಪನ್ಮೂಲಗಳನ್ನು ಶೇಖರಣೆ ಮಾಡದೆ ಮಾಯಾ ಮಾಟದಿಂದ ಉತ್ಪಾದನೆ ಜಾಸ್ತಿ ಮಾಡುವುದಾದರೆ ಆ ರೀತಿ ಅವರು ಹೇಳಿದರೆ ಒಪ್ಪಿಕೊಳ್ಳು ತ್ತೇನೆ. ಇವೊತ್ತಿನ ದಿವಸ ಪರ್ ಕ್ಯಾಪಿಟ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಲೆಕ್ಕ ಹಾಕಿದರೆ ಅಥವಾ

ನಮ್ಮಲ್ಲಿ ಬೇರೆ ಬೇರೆ ಮೂಲಗಳಿಂದ ಬರಬೇಕಾದ ಆದಾಯವನ್ನು ಪರಿಗಣಿಸಿದ್ದೀ ಆದರೆ ನಾವು ಎಷ್ಟು ಹಣವನ್ನು ಮುಖ್ಯವಾದ, ಮೂಲಭೂತವಾದ ವಲಯಗಳಲ್ಲಿ ಖರ್ಚು ಮಾಡುತ್ತಾ ಇದ್ದೇವೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಶೇಕಡ ೫೦ಕ್ಕಿಂತ ಹೆಚ್ಚು ಪ್ರಮಾಣ ನೀರಾವರಿ ಮತ್ತು ವಿದ್ಯುತ್ ವಲಯಗಳಿಗೆ ಖರ್ಚು ಮಾಡುತ್ತಾ ಇದ್ದೇವೆ. ಸುಮಾರು ೨೬ ದಶಲಕ್ಷ ಹೆಕ್ಟೇರ್‌ಗೆ ನೀರಾವರಿ ಸಾಮರ್ಥ್ಯ ೧೯೮೬-೮೭ರಲ್ಲಿ ಅನ್ವಯ ಮಾಡಬೇಕು ಎಂಬ ಗುರಿಯನ್ನು ಹೊಂದಿದ್ದೇವೆ ಇದರಲ್ಲಿ ಸ್ವಲ್ಪ ಮಟ್ಟಿಗೆ ಸಾಧನೆಯನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಈಗ ಇರುವಂಥ ನೀರಾವರಿಯ ಯೋಜನೆಗಳನ್ನು ಪೂರೈಸಲಿಕ್ಕೆ ೨೭೦೦ ಕೋಟಿ ರೂಪಾಯಿಗಳಷ್ಟು ಹಣವನ್ನು ಶೇಖರಿಸಿ ಖರ್ಚು ಮಾಡಬೇಕಾಗಿದೆ. ಪ್ರತಿ ವರ್ಷ ೩೦೦ ಕೋಟಿ ರೂಪಾಯಿಗಳಷ್ಟು ಹಣವನ್ನು ನೀರಾವರಿ ಯೋಜನೆಗಳಿಗೆ ಕೊಡದಿದ್ದರೆ, ಮುಂದಿನ ೭-೮ ವರ್ಷಗಳಲ್ಲಿ ಹಾಲಿ ಇರುವಂಥ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ತೆರಿಗೆಗಳ ಮೂಲಕ ಹಾಗೂ ಹೊಸದಾಗಿ ಸಂಪನ್ಮೂಲಗಳನ್ನು ಶೇಖರಣೆ ಮಾಡುವುದರ ಮೂಲಕ ಹಣವನ್ನು ಶೇಖರಿಸಬೇಕಾಗುತ್ತದೆ, ಇವೊತ್ತು ಬರಿ ನೀರಾವರಿ ಯೋಜನೆಗಳನ್ನು ಮಾತ್ರ ಪೂರೈಸಿದರೆ ಸಾಧ್ಯವಿಲ್ಲ ನೀರನ್ನು ಬಳಕೆಗೆ ಕೊಡುವುದರಲ್ಲಿಯೂ ಕೂಡ ಹಿಂದೆ ಬಿದ್ದಿದ್ದೇವೆ. ಕೇಂದ್ರ ಸರ್ಕಾರ ತನ್ನ ೧,೮೦,೦೦೦ ಕೋಟಿ ರೂಪಾಯಿಗಳ ಬಜೆಟ್ಟಿನಲ್ಲಿ ನೀರಾವರಿ ಕ್ಷೇತ್ರಕ್ಕೆ ಕೇವಲ ೯ರಷ್ಟು ಹಣವನ್ನು ಮಾತ್ರ ಇಟ್ಟಿದೆ. ಕೇಂದ್ರ ಸರ್ಕಾರ ಕೂಡ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಡುತ್ತಿಲ್ಲ. ನಮಗೆ ದುರಾದೃಷ್ಟವಶಾತ್ ನೀರಾವರಿ ಸೌಕರ್ಯಗಳನ್ನು ಹೆಚ್ಚು ಮಾಡಿಕೊಳ್ಳುವ ಬಗ್ಗೆ ಕಾಲ ಕಡಿಮೆ ಇದ್ದು, ಇನ್ನು ೫-೬ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ದಿಸೆಯಲ್ಲಿ ಆಲೋಚನೆ ಮಾಡಿದರೆ, ಅಧಿಕ ತೆರಿಗೆಗಳ ಮೂಲಕ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬೇಕು. ಇದರ ಜೊತೆಗೆ ಅಭಿವೃದ್ಧಿಯೇತರ ವೆಚ್ಚಗಳನ್ನು ಕೂಡ ಕಡಿಮೆ ಮಾಡಿಕೊಳ್ಳಬೇಕು. ೮೪-೮೫ರಲ್ಲಿ ಅಭಿವೃದ್ಧಿ ವೆಚ್ಚ ೬೪ ರಷ್ಟು ಇದ್ದು, ಅನಭಿವೃದ್ಧಿ ವೆಚ್ಚ ಶೇಕಡ ಎರಡ ರಷ್ಟು ಕಡಿಮೆ ಮಾಡಿದ್ದಾರೆ. ಅಭಿವೃದ್ಧಿಯೇತರ ವೆಚ್ಚಗಳಿಗೆ ಹಣ ಖರ್ಚು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಮುಖ್ಯವಾದಂಥ ವಲಯಗಳಿಗೆ ಹಣ ಖರ್ಚು ಮಾಡುವುದಕ್ಕೆ ಆಗುವುದಿಲ್ಲ, ಹಿಂದಿನ ಎರಡು ವರ್ಷಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹಲವಾರು ಹೊಸ ಯೋಜನೆಗಳನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗುವುದೆಂದು ಹೇಳಿದ್ದರು. ಇದರಲ್ಲಿ ಮುಖ್ಯವಾಗಿ ಅಪ್ಪರ್ ಭದ್ರಾ ಅಪ್ಪರ್ ತುಂಗಾ ಯೋಜನೆಗಳನ್ನು ೭ನೇ ಯೋಜನೆಯಲ್ಲಿ ಸೇರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದು ತಿಳಿಸಿದ್ದೀರಿ ನಾನು ಅತ್ಯಂತ ಅಭಾವ ಪೀಡಿತ ಪ್ರದೇಶವಾದ ಚಿತ್ರದುರ್ಗ ಜಿಲ್ಲೆಯ ಪ್ರತಿನಿಧಿಯಾಗಿ ನಾನು ಮನವಿ ಮಾಡಿಕೊಳ್ಳುವುದು ಇಷ್ಟೆ ಬಡತನದ ಬೇಗೆಯಿಂದ ನೊಂದಿರುವಂಥ ಜನರಿಗೆ ನೀರಾವರಿ ಸೌಲಭ್ಯ ಕೊಡದಿದ್ದರೆ, ಪ್ರಗತಿ ಕಾಣುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಕೈಗಾರಿಕೆಗೆ ಬೇಕಾದಂಥ ಕಚ್ಚಾ ವಸ್ತುಗಳು ದೊರೆಯುವುದಿಲ್ಲ. ಬೇಗೆ ಸೌಲಭ್ಯ ಕೂಡ ಇಲ್ಲ. ಕುಡಿಯುವ ನೀರಿಗೂ ಕೂಡ ತೊಂದರೆ ಇರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಜನತೆಯ ಪರವಾಗಿ ಈ ಎರಡು ವರ್ಷಗಳಿಂದ ತಾವು ಏನೋದು ಆಶ್ವಾಸನೆಯನ್ನು ಕೊಟ್ಟಿದ್ದೀರೋ ಅದರಂತೆ ಅಪ್ಪರ್ ಭದ್ರಾ ಯೋಜನೆಯನ್ನು ರೂಪಿಸಿ, ಕೇಂದ್ರದ ಅನುಮತಿಗೆ ಕಳುಹಿಸಿಕೊಡಬೇಕೆಂದು ಸದನದ ಮೂಲಕ ತಮ್ಮನ್ನು ಕೇಳಿ ಕೊಳ್ಳುತ್ತೇನೆ. ಕೇಂದ್ರದ ನೀರಾವರಿ ಸಚಿವರಾದ ಮಾನ್ಯ ಶಂಕರಾನಂದರವರು ಕರ್ನಾಟಕ ರಾಜ್ಯ ಸವಿವರವಾದ ಯೋಜನೆಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಲ್ಲವೆಂದು ಹೇಳಿದ್ದರು. ಇದು ನಿಜವಾಗಿದ್ದರೆ ಖಂಡಿತವಾಗಿಯೂ ದುರದೃಷ್ಟಕರ ಎಂದು ಹೇಳುತ್ತೇನೆ. ಮಾನ್ಯ ಮಂತ್ರಿಯವರು ಇದಕ್ಕೆ ಸಂಬಂಧಪಟ್ಟಂತೆ ವಿಶೇಷವಾದ ಮಾಹಿತಿಯನ್ನು ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದೂ ಮುಖ್ಯವಾದಂಥದ್ದು ವಲಯ ವಿದ್ಯುಚ್ಛಕ್ತಿ ಉತ್ಪಾದನೆ ಈ ವಲಯಕ್ಕೂ ಕೂಡ ೧೯೮೬-೮೭ನೇ ಸಾಲಿನಲ್ಲಿ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ೮೭-೮೮ರಲ್ಲಿಯೂ ಕೂಡ ಹೆಚ್ಚು ಮಾಡಿದ್ದಾರೆ. ಅದಕ್ಕಾಗಿ ಅಭಿನಂದಿಸುತ್ತೇನೆ. ವಿದ್ಯುತ್ ಉತ್ಪಾದನೆಯಲ್ಲಿ ೮೬-೮೭ರಲ್ಲಿ ೨೦೩೦ ಮೆಗಾವಾಟ್ಸ್ ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಪೂರ್ತಿ ನಾವು ಜಯಶೀಲರಾಗಿಲ್ಲ. ಸುಮಾರು ೭ ಪರ್ಸೆಂಟ್ ಹೆಚ್ಚಳವಾಗಿದೆ. ಆದಾಗ್ಯೂ ಸುಮಾರು ೧೯೪೫ ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಕೊರತೆ ಇದೆ

ಈ ಕೊರತೆಯನ್ನು ನಿವಾರಿಸಬೇಕಾದರೆ ನಾವು ವಿದ್ಯುತ್ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸುವ ಕಾರ್ಯಕ್ರಮವನ್ನು ಮಾಡಿಕೊಳ್ಳಬೇಕು. ಈಗಾಗಲೇ ಅನೇಕ ವಿಷಯಗಳ ಬಗ್ಗೆ ಬಡ್ಜೆಟ್ ಭಾಷಣದಲ್ಲಿ

ಹೇಳಿದ್ದಾರೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ೧೯೮೬-೮೭ರಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ, ಆ ಒಂದು ಪ್ರಯತ್ನವನ್ನು ನಾನು ಮೆಚ್ಚಿಕೊಳ್ಳುತ್ತೇನೆ ಜಪಾನ್ ಮತ್ತು ವಿಶ್ವಬ್ಯಾಂಕ್‌ನಿಂದ ಸಹಾಯ ಪಡೆಯಲಿಕ್ಕೆ ಪ್ರಯತ್ನ ಮಾಡಿದ್ದೀರಿ, ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಇವೊತ್ತಿನ ದಿವಸ ಬಹಳ ಮುಖ್ಯವಾದಂಥ ಕೆಲವೊಂದು ವಿಷಯಗಳನ್ನು ಕೆಲವು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ೧೯೮೬-೮೭ನೇ ಸಾಲಿನ ವೆಂಕಟಸ್ವಾಮಿ ವರದಿಯ ಅನುಷ್ಠಾನದಿಂದ ಸರ್ಕಾರಿ ನೌಕರರಿಗೆ ಸುಮಾರು ಒಂದು ನೂರು ಕೋಟಿ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ ಸರ್ಕಾರಿ ನೌಕರರಿಗೆ ಬೇಕಾದಂಥ ಸೌಲಭ್ಯವನ್ನು ಹೆಚ್ಚು ಮಾಡಲಿಕ್ಕೆ ನನ್ನ ವಿರೋಧ ಇಲ್ಲ. ಆದರೆ ಈ ದೇಶದಲ್ಲಿ ಇಲ್ಲಿಯುವರೆಗೂ ನಡೆದುಕೊಂಡು ಬಂದಂತೆ ಈ ಯೋಜನೆಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿರುವುದರ ಫಲ ಕೇವಲ ಅಧಿಕಾರಿಗಳಿಗೆ ಮತ್ತು ಸಮಾಜದ ಶ್ರೀಮಂತ ವರ್ಗದವರಿಗೆ ದೊರಕುವಂತಾಗಬಾರದು. ಆ ಒಂದು ಫಲ ಗ್ರಾಮೀಣ ಭಾರತದ ಜನರಿಗೆ ಸಿಕ್ಕುವಂತಾಗಬೇಕು. ಆ ರೀತಿಯಲ್ಲಿ ಇವೊತ್ತು ನಾವು ಕೆಲಸ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಸರ್ಕಾರಿ ನೌಕರರು, ಪೆನ್‌ಷನ್‌ದಾರರು, ಉಳಿದವರು ಎಲ್ಲಾ ಸೇರಿ ೭ ಲಕ್ಷದ ೩೧ ಸಾವಿರ ಜನ ಇದ್ದಾರೆ. ಇವರುಗಳಿಗಾಗಿ ೧೯೮೬-೮೭ನೇ ಇಸವಿಯಲ್ಲಿ ೧೦೫೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ೧೯೮೭-೮೮ನೇ ಸಾಲಿನಲ್ಲಿ ಪರಿಷ್ಕೃತ ಅಂದಾಜಿನಂತೆ ವೆಂಕಟಸ್ವಾಮಿ ಆಯೋಗದ ವರದಿಯ ಪ್ರಕಾರ ಇನ್ನು ನೂರಕ್ಕಿಂತಲೂ ಹೆಚ್ಚು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇನ್ನು ನಮ್ಮ ರೆವಿನ್ಯೂ ಆದಾಯ ಎಷ್ಟಿದೆ ಎನ್ನುವುದನ್ನು ತೆಗೆದುಕೊಂಡಲೆ ೧೯೮೬-೮೭ರಲ್ಲಿ ೨,೩೧೦ ಕೋಟಿ ರೂಪಾಯಿಗಳು ಮಾತ್ರ ಇತ್ತು. ೧೯೮೭-೮೮ನೇ ಸಾಲಿನಲ್ಲಿ ೨,೪೪೫ ಕೋಟಿ ರೂಪಾಯಿಗಳು ಆಗುತ್ತದೆ, ಈ ಒಂದು ರೆವಿನ್ಯೂ ಆದಾಯವನ್ನು ಮತ್ತು ನಾವು ನಮ್ಮ ಸರ್ಕಾರಿ ನೌಕರರಿಗೆ ಖರ್ಚು ಮಾಡುವ ಹಣವನ್ನು ತೆಗೆದು ಕೊಂಡು ಹೋಲಿಸಿ ನೋಡಿದರೆ ಶೇಕಡ ೪೫ಕ್ಕಿಂತಲೂ ಹೆಚ್ಚು ಹಣವನ್ನು ಈ ಸರ್ಕಾರಿ ನೌಕರರಿಗೆ ಖರ್ಚು ಮಾಡಿದ್ದೇವೆ. ಇವರಿಗೆ ಕೊಡತಕ್ಕ ಸೌಲಭ್ಯ ಏನಿವೆ ಆ ಒಂದು ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಈ ದಾರಿದ್ರ್ಯದ ಜನ ಏನಿದ್ದಾರೆ ಅವರುಗಳಿಗೆ ಸರ್ಕಾರ ಹಾಕತಕ್ಕ ಯೋಜನೆ ಗಳನ್ನು ಜಾರಿಗೆ ತಂದು, ಆ ಯೋಜನೆಗಳ ಫಲ ಆ ಬಡ ಜನತೆಗೆ ಸಿಕ್ಕುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಆಗ ಮೆಚ್ಚಿಕೊಳ್ಳಬಹುದು. ಇವೊತ್ತು ಅನೇಕ ಯೋಜನೆಗಳನ್ನು ಮಾಡುತ್ತಿದ್ದೇವೆ, ಆದರೂ ಸಹ ಈ ಒಂದು ಯೋಜನೆಯ ಫಲ ಗ್ರಾಮೀಣ ಭಾರತದ ಜನರಿಗೆ ಸಿಕ್ಕುವಂಥ ವ್ಯವಸ್ಥೆ ನಮ್ಮ ದೇಶದಲ್ಲಿ ಇಲ್ಲ. ಎಲ್ಲಿಯುವರೆಗೆ ಈ ಕಟ್ಟಕಡೆಯ ಮನುಷ್ಯನ ಬಗ್ಗೆ ನಾವು ಆಲೋಚನೆ ಮಾಡುವುದಿಲ್ಲವೋ, ಈ ಗ್ರಾಮೀಣ ಭಾರತದಲ್ಲಿರತಕ್ಕ ಶಕ್ತಿ ಇಲ್ಲದ ಜನತೆಯ ಬಗ್ಗೆ ಆಲೋಚನೆ ಮಾಡದೇ ಇದ್ದರೆ, ಖಂಡಿತ ಆ ಒಂದು ಜನ ಒಂದು ದಿವಸ ಕುಪಿತರಾಗಿ ನಮ್ಮ ಮೇಲೆ ಕೈ ಮಾಡಿದರೆ ಆಶ್ಚರ್ಯ ಏನೂ ಇಲ್ಲ ಆದ್ದರಿಂದ ಈ ದೇಶದ ಸಾಮಾನ್ಯ ಜನರು ಏನಿದ್ದಾರೆ ಅವರ ಕಷ್ಟ ಸುಖಗಳನ್ನು ಅರಿತುಕೊಂಡು ಅವರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡತಕ್ಕ ಪ್ರಯತ್ನವನ್ನು ಮಾಡಬೇಕು. ಇವೊತ್ತು ನಾವು ಅವರು ದುಡಿಯತಕ್ಕ ಹಣದಿಂದ ಜೀವನ ಮಾಡುತ್ತಿದ್ದೇವೆ, ಅದಕ್ಕೆ ಪ್ರತಿಯಾಗಿ ಅವರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡುವುದು ಅವಶ್ಯ ಇದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನೌಕರಶಾಹಿ ವಿಚಾರ ಬಂದಾಗ ಒಂದು ಮಾತನ್ನು ಹೇಳದೇ ಗತ್ಯಂತರವಿಲ್ಲ. ಮಾನ್ಯ ವೆಂಕಟಸ್ವಾಮಿಯವರ ರಿಪೋರ್ಟ್‌ನಲ್ಲಿಯೂ ಸಹ ಆ ಮಾತನ್ನು ಹೇಳಿದ್ದಾರೆ. ನೂರಕ್ಕೆ ಹತ್ತರಷ್ಟು ಹುದ್ದೆಗಳು ಯಾವಾಗಲೂ ಖಾಲಿ ಇರುತ್ತವೆ. ಈ ರೀತಿ ಇರುವಾಗ, ಹುದ್ದೆಗಳ ನಿರ್ವಹಣ ಏತಕ್ಕೆ. ಏತಕ್ಕೆ ಖಾಲಿ ಹುದ್ದೆಗಳನ್ನು ತೆಗೆದುಹಾಕಬಾರದು ಎಂದು ಅವರು ಹೇಳಿದ್ದಾರೆ. ಅದರ ಜೊತೆಗೆ ಮತ್ತೊಂದು ಮಾತನ್ನು ಹೇಳಿದ್ದಾರೆ, ಈ ನೌಕರಶಾಹಿ ಜನ ಸರಿಯಾಗಿ ಕೆಲಸ ಮಾಡುವುದಿಲ್ಲ, ಇಂತಿಷ್ಟು ಕೆಲಸ ಮಾಡಬೇಕೆಂಬ ನಿಯಮ ನಮ್ಮ ರಾಜ್ಯದಲ್ಲಿ ಇಲ್ಲ ಅಂತಹ ಒಂದು ನಿಯಮವನ್ನು ಜಾರಿಗೆ ತರುವ ಮಾತನ್ನು ಸಹ ಹೇಳಿದ್ದಾರೆ. ಅದರ ಜೊತೆಯಲ್ಲಿ ಮ್ಯಾಕ್ಸಿಮಮ್ ಎಕಾನಮಿ ಬಗ್ಗೆ ಅನೇಕ ವಿಧವಾದ ಸಲಹೆಗಳನ್ನು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆದ್ದರಿಂದ, ಅವರ ವರದಿಯ ಬಗ್ಗೆ ಆಲೋಚನೆ ಮಾಡಿ, ತುರ್ತಾಗಿ ಕ್ರಮ ತೆಗೆದು ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ತಮ್ಮದೇ ಆದ ಶೈಲಿಯಲ್ಲಿ ಹಾಸ್ಯಮಯವಾಗಿ ಹೇಳಿದರು. ಇದು ಜೀರೋ

ಬಜೆಟಿಂಗ್ ಎಂದು ಹೇಳಿದರು. ಅಂದರೆ ಕೊನೆಗೆ ಜೀರೋಗೆ ಬರುತ್ತದೆ. ಎಂದು ಹೇಳಿದರು. ಈ ಒಂದು ಶೂನ್ಯ ಆಧಾರಿತ ಬಜೆಟ್‌ನ್ನು ನಮ್ಮ ರಾಜ್ಯದಲ್ಲಿ ನಾವು ಮುಂಡಿಸುವುದರ ಮೂಲಕ ಇನ್ನೂ ಹೆಚ್ಚಿನ ಹಣವನ್ನು ಉಳಿಸುವುದಕ್ಕೆ ನಾವು ಪ್ರಯತ್ನ ಮಾಡಿದಂತಾಗುತ್ತದೆಂದು ನಾನು ಭಾವಿಸಿದ್ದೇನೆ. ೮೭–೮೮ನೇ ಸಾಲಿನಲ್ಲಿ ಸುಮಾರು ೩೦ ಕೋಟಿ ರೂಪಾಯಿಗಳನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದು ಅಷ್ಟೇ ಸಾಲದು ಈ ಪದ್ಧತಿಯನ್ನು ಎಲ್ಲಾ ಕ್ಷೇತ್ರಗಳಲ್ಲೂ ಕಟ್ಟುನಿಟ್ಟಾಗಿ ಆಚರಣೆಗೆ ತರುವುದರ ಮೂಲಕ ಅನುಪಯುಕ್ತ ಯೋಜನೆಗಳು ಏನಿವೆ, ಇವುಗಳನ್ನು ತೆಗೆದುಹಾಕಬೇಕು, ಕೆಲಸವೇ ಇಲ್ಲದೆ ಸುಮ್ಮನೆ ಕುಳಿತಿರುವ ನೌಕರರನ್ನು ಬೇರೆ ಕಡೆಗಳಿಗೆ ವರ್ಗಾವಣೆ ಮಾಡಬೇಕು, ಇಲ್ಲವೇ ತೆಗೆದುಹಾಕುವುದಕ್ಕೆ ಸಾಧ್ಯವಿದ್ದರೆ ತೆಗೆದುಹಾಕಬೇಕು. ಈ ರೀತಿ ನಾವು ಹಣವನ್ನು ಉಳಿಸಬೇಕಾಗುತ್ತದೆ. ಉದಾಹರಣೆಗೆ ಕೆಲವು ತಾಲ್ಲೂಕು ಬೋರ್ಡ್‌ಗಳಲ್ಲಿ ೬–೭ ಜನ ಇಂಜಿನಿಯರ್ಸ್ ಇದ್ದರೆ ಅದೇರೀತಿ ಲೋಕೋಪಯೋಗಿ ಇಲಾಖೆಯಲ್ಲೂ ಇದ್ದಾರೆ. ಅವರು ಸುಮ್ಮನೆ ಕುಳಿತಿರುತ್ತಾರೆ. ಕೇಳಿದರೆ ನಮಗೆ ಏನೂ ಕೆಲಸವಿಲ್ಲ ಎಂದು ಹೇಳುತ್ತಾರೆ. ಮನಸ್ಸಿಗೆ ಬಂದಂತೆ ಯೋಚನೆಗಳನ್ನು ಮಾಡಿ ಅನವಶ್ಯಕವಾಗಿ ಹಲವಾರು ಹುದ್ದೆಗಳನ್ನು ನಿರ್ಮಾಣ ಮಾಡಿ ನೌಕರರನ್ನು ತುಂಬುವುದಕ್ಕೆ ಬದಲಾಗಿ ಯಾವುದೇ ಕೆಲಸಕ್ಕಾಗಲಿ ಎಷ್ಟೆಷ್ಟು ನೌಕರರ ಅವಶ್ಯಕತೆ ಇದೆಯೆಂಬುದನ್ನು ನೋಡಿಕೊಂಡು ಅದರ ಪ್ರಕಾರ ನೇಮಕ ಮಾಡಿ ನಂತರ ಅವರು ಸರಿಯಾಗಿ ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದಾರೋ, ಇಲ್ಲವೋ, ಎಂಬುದನ್ನು ಪರಿವೀಕ್ಷಣೆ ಮಾಡತಕ್ಕ ಕೆಲಸವನ್ನು ನಾವು ಮಾಡಬೇಕು. ಆರೀತಿ ಯಾರೂ ಮಾಡುತ್ತಿಲ್ಲ. ಜೀರೋ ಬಜೆಟಿಂಗ್‌ನ್ನು ಅನ್ವಯಿಸುವುದರ ಮೂಲಕ ಹೆಚ್ಚುವರಿ ನೌಕರರನ್ನು ತೆಗೆದುಹಾಕುವುದಕ್ಕೆ ಅನುಕೂಲವಾಗುತ್ತದೆ. ಇದೇರೀತಿ ಎಲ್ಲೆಲ್ಲಿ ಹೆಚ್ಚಿಗೆ ಹಣವನ್ನು ಖರ್ಚುಮಾಡುತ್ತಿದ್ದೇವೆ ಅದನ್ನೂ ಕೂಡ ಹಿಡಿತ ಮಾಡುವುದಕ್ಕೆ ಅನುಕೂಲವಾಗುತ್ತದೆ. ಜೀರೋ ಬೇಸ್ಡ್ ಬಜೆಟಿಂಗ್ ಏನಿದೆ ಇದೇ ಪದ್ಧತಿಯನ್ನು ಮುಂದುವರಿಸಿ ಇದರ ಮೂಲಕ ನಾವು ಹಣವನ್ನು ಉಳಿಸಬೇಕು.

ಮಾನ್ಯ ಅಧ್ಯಕ್ಷರೆ, ಮತ್ತೊಂದು ಬಹಳ ಮುಖ್ಯವಾದ ವಿಚಾರ ಎಂದರೆ, ಅನೇಕ ಯೋಜನೆಗಳಲ್ಲಿ ನಾವು ಸಾಕಷ್ಟು ಹಣವನ್ನು ತೊಡಗಿಸಿದ್ದೇವೆ. ಈಗಾಗಲೇ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಿದ್ದೇವೆ. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಿಗೆ ಸುಮಾರು ೭೦ ಪರ್ಸೆಂಟ್‌ನಷ್ಟು ಹಣವನ್ನು ಖರ್ಚುಮಾಡುತ್ತಿದ್ದೇವೆ. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಿಗೆ ಅಥವಾ ಆರ್ಥಿಕ ಕಾರ್ಯಕ್ರಮಗಳಿಗೆ ಖರ್ಚುಮಾಡತಕ್ಕ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡದೇ ಇರುವುದರಿಂದ ಯಾರುಯಾರಿಗೆ ಈ ಯೋಜನೆಗಳ ಫಲ ಸಿಕ್ಕಬೇಕೋ, ಆದರ ಲಾಭ ಸಿಕ್ಕಬೇಕೋ ಅದು ಸಿಕ್ಕುತ್ತಿಲ್ಲ. ಇದರ ಬಗ್ಗೆ ನಾವು ಪರಿವೀಕ್ಷಣೆ ಮಾಡಿ ಅರ್ಹರಿಗೆ ಯೋಜನೆಗಳ ಫಲ ಸಿಕ್ಕುವಂತೆ ಮಾಡಬೇಕು. ೮೫–೮೬ನೇ ಸಾಲಿನ ಆಡಿಟರ್ ಜನರಲ್‌ರವರ ವರದಿಯನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ನಮ್ಮ ಸರ್ಕಾರೀ ಅಧಿಕಾರಿಗಳು ಇವತ್ತು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದ್ದಾರೆಂಬುದಕ್ಕೆ ಹಲವಾರು ನಿದರ್ಶನಗಳನ್ನು ನಾನು ಕೊಡಬಲ್ಲೆ. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಎಲ್ಲವನ್ನೂ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಒಂದೇ ಒಂದು ವಿಚಾರವನ್ನು ಹೇಳುವುದಾದರೆ ತಾ. ೩೧–೩–೧೯೮೫ಕ್ಕೆ ನಮಗೆ ಏನು ತೆರಿಗೆ ಬಾಬ್ತು ಹಣ ಬರಬೇಕಾಗಿತ್ತೋ ಅದರ ಬಗ್ಗೆ ನಾನು ಒಂದು ವಿವರಣೆಯನ್ನು ಕೊಟ್ಟರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರೆಂದು ಅಂದುಕೊಂಡಿದ್ದೇನೆ. ಮಾರಾಟ ತೆರಿಗೆಯಿಂದ ನಮಗೆ ೧೨೮ ಕೋಟಿ ರೂಪಾಯಿ ಬರಬೇಕಾಗಿದ್ದು ಅದರಲ್ಲಿ ಸುಮಾರು ೩೦ ಕೋಟಿ ರೂಪಾಯಿಗಳು ೫ ವರ್ಷಗಳಿಗಿಂತ ಮೇಲ್ಪಟ್ಟು ಬಾಕಿ ನಿಂತಿದೆ. ಇದೇರೀತಿ ಅಬ್ಕಾರಿ ಇಲಾಖೆಯಿಂದ, ಮೋಟಾರು ವಾಹನ ಇಲಾಖೆಯ ವಿಭಾಗದಿಂದ ಕೂಡ ನಿಂತಿದೆ. ಅರಣ್ಯ ವಿಭಾಗದಿಂದ ಬರಬೇಕಾದಂಥ ಆದಾಯವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅದರಲ್ಲೂ ಕೂಡ ಸುಮಾರು ೫ ವರ್ಷಕ್ಕಿಂತಲೂ ಹೆಚ್ಚುಕಾಲದಿಂದ ೩೫ ಕೋಟಿ ರೂಪಾಯಿಗಳಷ್ಟು ಬರಬೇಕಾಗಿದೆ. ಅಷ್ಟೇ ಅಲ್ಲ ಸುಮಾರು ೨೨ ಕೋಟಿ ರೂಪಾಯಿಗಳನ್ನು ನಾವು ಪಡೆದುಕೊಳ್ಳುವುದಕ್ಕೆ ಕಳೆದ ೫ ವರ್ಷಗಳಿಂದ ಯಾವುದೇ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ ಎನ್ನತಕ್ಕ ಮಾತನ್ನು ಈ ವರದಿಯಲ್ಲಿ ಹೇಳಿದ್ದಾರೆ. ಈ ಹಣ ನಮಗೆ ಖಾಸಗಿ ಮಾಲೀಕರಿಂದ ಮತ್ತು ಖಾಸಗಿ ಕಂಪನಿಗಳವರಿಂದ ಬರಬೇಕಾಗಿದೆ. ಈ ಹಣವನ್ನು ವಸೂಲ್ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ ನಮ್ಮ

ಸಂಪನ್ಮೂಲಗಳನ್ನು ಹೆಚ್ಚುಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ಈ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಾಲಾವಕಾಶ ಇಲ್ಲದಿರುವುದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇವರು ಅನೇಕ ರೀತಿಯ ವಸ್ತುಗಳನ್ನು ಖರೀದಿ ಮಾಡಿರುವ ಬಗ್ಗೆ ಆಡಿಟರ್ ಜನರಲ್‌ರವರು ತಮ್ಮ ರಿಪೋರ್ಟ್‌ನಲ್ಲಿ ಹೇಳಿರುವ ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳಮೇಲೆ ತೀವ್ರ ಕ್ರಮ ತೆಗೆದುಕೊಳ್ಳದಿದ್ದರೆ ಇವರು ಒಬ್ಬರಿಗೊಬ್ಬರು ಶಾಮೀಲಾಗಿದ್ದಾರೆಂಬ ಅಭಿಪ್ರಾಯಕ್ಕೆ ಬರ ಬೇಕಾಗುತ್ತದೆ. ದೇಶದ ಜನರ ಹಿತವನ್ನು ಕಾಪಾಡತಕ್ಕ ದಿಸೆಯಲ್ಲಿ ಇವರು ತಯಾರಾಗಿಲ್ಲ ಎನ್ನತಕ್ಕ ಭಾವನೆ ನಮಗೆ ಬರುತ್ತವೆ. ಆದ್ದರಿಂದ ಇವತ್ತು ಆಡಳಿತವನ್ನು ನಡೆಸುತ್ತಿರತಕ್ಕ ಪಕ್ಷ ಅಥವಾ ಆಡಳಿತ ನಡೆಸತಕ್ಕ ಜನ ಯಾರಿದ್ದಾರೆ ಅವರು ಇದರ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮತ್ತೊಂದು ವಿಚಾರವೆಂದರೆ ಮಾನ್ಯ ಕೈಗಾರಿಕಾ ಮಂತ್ರಿಗಳು ಹೇಳಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕಾ ಕ್ಷೇತ್ರಗಳು ಇರಬೇಕು. ಇದು ಬಹಳ ನಂಬಿಕೆಯಿಂದ ನಡೆಯಬೇಕೆಂದು ಹೇಳಿರುತ್ತಾರೆ. ಇವೊತ್ತಿನ ದಿವಸ ೧೪ ಕಂಪೆನಿಗಳು ಪಬ್ಲಿಕ್ ಅಂಡರ್‌ಟೇಕಿಂಗ್‌ನಲ್ಲಿ ನಡೆಯುತ್ತಿದೆ. ಈ ೧೪ ಕಂಪೆನಿಗಳಿಗೆ ಪೇಯ್ಡ್ ಅಪ್ ಕ್ಯಾಪಿಟಲ್ ೧೬೪ ಕೋಟಿ ರೂಪಾಯಿಗಳು. ಆದರೆ ಇವರು ಮಾಡಿದಂಥ ಲಾಭ ಏನು ಇರುವುದಿಲ್ಲ. ನಷ್ಟ ಸುಮಾರು ೧೫೫ ಕೋಟಿ ರೂಪಾಯಿಗಳು ಆಗಿದೆ, ಆದ್ದರಿಂದ ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಚಿಂತನೆ ಮಾಡಬೇಕು ಎಂದರೆ ಇದರ ಅರ್ಥ ಈ ಕಂಪೆನಿಗಳನ್ನು ಟಾಟಾ, ಬಿರ್ಲಾರವರಿಗೆ ಮಾರಬೇಕೆದು ಹೇಳುತ್ತಿಲ್ಲ. ಇವುಗಳನ್ನು ಸರಿಯಾದ ರೀತಿಯಲ್ಲಿ ನಡೆಸುವಂತೆ ಮಾಡಬೇಕು. ಸಾರ್ವಜನಿಕ ಕಂಪೆನಿಗಳಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಬರುವಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳಬಯಸುತ್ತೇನೆ.

ಈಗ ಇರತಕ್ಕಂಥ ಕಂಪೆನಿಗಳಲ್ಲಿ ಒಂಭತ್ತು ಕಂಪೆನಿಗಳನ್ನು ಬಿಟ್ಟರೆ ಉಳಿದ ಕಂಪೆನಿಗಳು ಬಹಳ ನಷ್ಟದಲ್ಲಿ ನಡೆಯುತ್ತಿದೆ. ಅದರಲ್ಲೂ ಎಂಟು ಕಂಪೆನಿಗಳಿಂದ ಸುಮಾರು ೩೪ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಆದ್ದರಿಂದ ಇಂಥ ಒಂದು ಸ್ಥಿತಿಯಲ್ಲಿ ಇರತಕ್ಕಂಥ ಈ ಸಾರ್ವಜನಿಕ ಕಂಪೆನಿಗಳಿಗೆ ಹೂಡಿರತಕ್ಕಂಥ ಬಂಡವಾಳ ೩೦೬ ಕೋಟಿ ರೂಪಾಯಿಗಳಾದರೆ ಬರತಕ್ಕಂಥ ಲಾಭ ೮ ಕೋಟಿ ರೂಪಾಯಿಗಳು ಮಾತ್ರವಾಗಿರುತ್ತದೆ. ಆದ್ದರಿಂದ ಇವುಗಳನ್ನು ಸರಿಪಡಿಸುವುದಕ್ಕೆ ಯೋಗ್ಯವಾದ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಷಯವನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಸೂಚನೆಯನ್ನು ಮಾಡಿರುತ್ತಾರೆ. ಆ ಸೂಚನೆ ಏನೆಂದರೆ ಸಹಕಾರಿ ಸಂಘಗಳ ಮೂಲಕ ಮದ್ಯವನ್ನು ಮಾರಾಟ ಮಾಡುವಂಥವುಗಳಿಗೆ ಪರವಾನಿಗೆಯನ್ನು ಕೊಡಬೇಕೆಂಬ ಆಲೋಚನೆಯನ್ನು ಮಾಡಿದಿಟ್ಟಿದ್ದಾರೆ. ಆ ಆಲೋಚನೆಯನ್ನು ಕೈ ಬಿಡಬೇಕೆಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ನಮ್ಮ ದೇಶದಲ್ಲಿ ೧೪೫ ಕೋಟಿ ರೂಪಾಯಿಗಳಷ್ಟು ಸಹಕಾರಿ ಸಂಘಗಳ ಮೂಲಕ ಶೇಕರಣೆಯನ್ನು ಮಾಡುವುದಾಗಿ ಹೇಳಿದ್ದಾರೆ. ೧೯೮೭–೮೮ನೇ ಸಾಲಿನಲ್ಲಿ ಉಳಿದ ಕೊರತೆಯನ್ನು ನಿವಾರಣೆ ಮಾಡುವ ಸಲುವಾಗಿ ಯೋಗ್ಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ನಾವು ವಿಶ್ವಾಸವನ್ನು ಇಟ್ಟಿರುತ್ತೇವೆ. ಇನ್ನು ೪೭ ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆ ಗಳಿಗಾಗಿ ಕೊಡುತ್ತೇವೆಂದು ೮೭೦ ಕೋಟಿ ಯೋಜನಾ ವೆಚ್ಚ ಏನು ಇದೆ ಅದಕ್ಕೆ ೪೭ ಕೋಟಿ ರೂಪಾಯಿ ಗಳನ್ನು ಸೇರಿಸಿ ೯೧೭ ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗಳಿಗಾಗಿ ಇಡುತ್ತೇವೆಂದು ಹೇಳಿರುತ್ತಾರೆ, ನಾನು ಈ ಬಗ್ಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಹಣವನ್ನು ಏನು ಬಡ್ಜೆಟ್‌ನಲ್ಲಿ ಕೊಟ್ಟಿರುತ್ತೀರಿ ಇದು ಪುಸ್ತಕದಲ್ಲಿ ಮಾತ್ರ ಇರಬಾರದು. ಬೇರೆ ಬೇರೆ ಬಾಬುಗಳಿಂದ ವಸೂಲು ಮಾಡಿದಂಥ ಹಣ ಮತ್ತು ಬೇರೆ ಬೇರೆ ಬಾಬುಗಳಿಗೆ ಕೊಟ್ಟಂಥ ಹಣ ಮತ್ತು ಅಭಿವೃದ್ಧಿಯೇತರ ವೆಚ್ಚವನ್ನು ಕಡಿಮೆ ಮಾಡಿಯಾದರೂ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡ ಬೇಕೆಂದು ಹೇಳುತ್ತೇನೆ, ನೀರಾವರಿ ಯೋಜನೆಗಳು ಅಂದರೆ ಅಪ್ಪರ್ ತುಂಗ, ಅಪ್ಪರ್ ಕೃಷ್ಣ ಈ ಯೋಜನೆಗಳಿಗೆ ಯಾವ ಕಾರಣಕ್ಕೂ ಕುಂಠಿತವಾಗದಂತೆ ಹೆಚ್ಚು ಹಣವನ್ನು ಒದಗಿಸಿ ತೀವ್ರಗತಿಯಲ್ಲಿ ಈ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಮಾಡಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

೧೨_೦೦ ಪಿ. ಎಂ.

† ಶ್ರೀ ಎಸ್. ಬಂಗಾರಪ್ಪ (ಸೊರಬ). —ಸನ್ಮಾನ್ಯ ಸಭಾ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳ, ಹಣಕಾಸಿನ ಸಚಿವರು ಆದ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿರತಕ್ಕ ೧೯೮೭-೮೮ರ ಸಾಲಿನ ಆಯವ್ಯಯ ಪತ್ರವನ್ನು ನಾನು ವಿರೋಧಿಸಿ ಮಾತ ನಾಡಲಿಕ್ಕೆ ನಿಂತಿದ್ದೇನೆ. ಕಾರಣಗಳೇನೆಂದರೆ ಈ ಒಂದು ಆಯವ್ಯಯ ಪತ್ರದಿಂದ ಹಣ ದುಬ್ಬರವನ್ನು ಬಹಳ ಜಾಸ್ತಿ ಮಾಡುತ್ತಿದ್ದಾರೆಂದು ಇದನ್ನು ವಿರೋಧಿಸಬೇಕಾಗಿದೆ. ರಾಜ್ಯದ ಆರ್ಥಿಕ ಬೆಳವಣಿಗೆ ಅಥವಾ ಪ್ರಗತಿಗೆ ಇದು ಬಹಳ ಕುಂಠಿತವಾಗಿದೆ. ಇದು ಆಂಟಿ ಪೂರರ್ಸ್ ಬಡ್ಜೆಟ್ ಕಡುಬಡವರಿಗೂ ಕೂಡ ಇದು ವಿರುದ್ಧವಾಗಿರುವುದರಿಂದ ಈ ಒಂದು ಆಯವ್ಯಯ ಪತ್ರವನ್ನು ನಾನು ವಿರೋಧಿಸಿ ಮಾತ ನಾಡಲಿಕ್ಕೆ ನಿಂತಿದ್ದೇನೆ. ಈ ಒಂದು ಆಯವ್ಯಯ ಪತ್ರವನ್ನು ಓದಿರತಕ್ಕ ಯಾರಿಗೇ ಆಗಲಿ, ಇದು ಹಿಂದಿನ ವರ್ಷದ ಮತ್ತು ಅದಕ್ಕಿಂತ ಹಿಂದಿನ ವರ್ಷದ ಬಡ್ಜೆಟ್‌ನ ಪೂರ್ವ ಪೀಠಿಕೆ ಏನಿರುತ್ತಿತ್ತು, ಅದೇ ಪೀಠಿಕೆಗಳನ್ನು ಪುನಃ ಇಲ್ಲಿ ಪ್ರಸ್ತಾಪ ಮಾಡಲಾಗಿದೆ ಮತ್ತು ಕೇಂದ್ರದ ಮೇಲೆ ಪುನಃ ದೋಷ ರೋಪಣೆ ಮಾಡತಕ್ಕ ಇವರ ಚಿಂತನೆ ಇಲ್ಲಿ ಮರುಕಳಿಸಿದೆ ಎಂಬುದು ಸುಸ್ಪಷ್ಟ. ೧೯೮೬.೮೭ರ ಆಯವ್ಯಯ ಪತ್ರವನ್ನು ಅವಲೋಕನ ಮಾಡಿದವರಿಗೆ ಕೇಂದ್ರದವರ ಮೇಲೆ ಆಪಾದನೆ ಮಾಡತಕ್ಕ ಸಂದರ್ಭ ಇತ್ತು, ಆ ಮೇಲೆ ಆ ಒಂದು ಅಂತರ ಸ್ವಲ್ಪ ಮಟ್ಟಿಗೆ ಕಡಿಮೆ ಆಗಿರುವ ಧಾಟಿಯನ್ನು ನೋಡುತ್ತಿದ್ದೆವು. ಪುನಃ ಈಗ ಅದೇ ಧಾಟಿ ಪುನರಾವರ್ತನೆ ಆಗುವುದನ್ನು ನೋಡಿದರೆ ರಾಜ್ಯ ಸರ್ಕಾರ ಆರ್ಥಿಕ ಚಿಂತನೆಗಳ ವಿಚಾರದಲ್ಲಿ ಜನತೆಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ವಿಚಾರದಲ್ಲಿ ಸಮ ತೋಲನವನ್ನು ಕಳೆದುಕೊಂಡಿದೆ ಎಂದು ಗ್ರಹಿಸಿದೆ. ಅವೆಲ್ಲವನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಪುನಃ ಕೇಂದ್ರದ ಮೇಲೆ ಅಪಾದನೆಗಳನ್ನು ಮಾಡತಕ್ಕ ಪರಿಪಾಠ ಇಲ್ಲಿ ಮತ್ತೊಮ್ಮೆ ಪ್ರಸ್ತಾಪವಾಗಿದೆ ಎಂಬ ಅಂಶ ಎಲ್ಲರಿಗೂ ಗೊತ್ತಾಗುತ್ತದೆ. ಹಿಂದೆಯೂ ಕೂಡ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ೧೯೮೬ರ ಆಯವ್ಯಯ ಪತ್ರವನ್ನು ಸರ್ಕಾರ ಮಂಡನೆ ಮಾಡಿದಾಗ ಕೊರತೆ ಇರತಕ್ಕ ಬಡ್ಜೆಟ್ಟನ್ನು ರಾಜ್ಯ ಸರ್ಕಾರ ಮಂಡಿಸಿರುವಾಗ ಕೇಂದ್ರ ಸರ್ಕಾರದ ಬಡ್ಜೆಟ್ಟನ್ನು ಪ್ರಸ್ತಾಪ ಮಾಡತಕ್ಕುದ್ದು ಸಾಧುವಲ್ಲವೆಂದು ಹೇಳಿದ್ದೆ. ಈ ಸಾರಿ ಆಯವ್ಯಯ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಭಾರೀ ಕೊರತೆ ಇರುವ ಆಯವ್ಯಯ ಪತ್ರದ ಬಗ್ಗೆ ಪುನಃ ಪ್ರಸ್ತಾಪಿಸಿರುವುದರಿಂದ ಮತ್ತೊಮ್ಮೆ ನಾನು ಕಳೆದ ವರ್ಷ ಹೇಳಿದ ಮಾತುಗಳನ್ನೇ ಹೇಳಿದರೆ ಒಳಿತು ಎಂದು ನನ್ನ ಭಾವನೆ ಕೊರತೆ ಇರತಕ್ಕ ಬಡ್ಜೆಟ್ ಯಾವಾಗಲೂ ಹಣದುಬ್ಬರಕ್ಕೆ ಎಡೆಮಾಡಿಕೊಡತಕ್ಕ ಬಡ್ಜೆಟ್ ಆಗುತ್ತದೆ. ಈ ಮೂಲಭೂತವಾದ ನೀತಿಯನ್ನು ನಾನು ಅರ್ಥ ಮಾಡಿ ಕೊಂಡಿದ್ದೇನೆ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಕೊರತೆಯ ಬಡ್ಜೆಟ್‌ನ್ನು ಇಟ್ಟಾಗ ಸಹಜವಾಗಿ ಹಣದುಬ್ಬರಕ್ಕೆ ಒತ್ತುಕೊಡತಕ್ಕ ಬಡ್ಜೆಟ್ ಆಗಿ ಮಾರ್ಪಾಡಾಗುತ್ತದೆ. ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ. ಉದಾಹರಣೆ ಡಿಫೆನ್ಸ್. ಪ್ರೊಡಕ್ಷನ್ ಇರತಕ್ಕ ಖಾತೆ ಆದರೆ ಆಗುವುದಿಲ್ಲ. ಈ ವರ್ಷ ಕೇಂದ್ರ ಸರ್ಕಾರ ಪ್ರಕಟಿಸಿರತಕ್ಕ ಬಡ್ಜೆಟ್‌ನ್ನು ನೋಡಿದಾಗ ಎಷ್ಟೋ ಪಟ್ಟು ಅನಿವಾರ್ಯವಾಗಿ ಜಾಸ್ತಿ ಆಗಿದೆ, ಈಗ ಆ ಅಂಕಿಅಂಶಗಳಿಗೆ ನಾನು ಹೋಗುವುದಿಲ್ಲ. ಜಾಸ್ತಿ ಇರತಕ್ಕ ಹಣವನ್ನು ಡಿಫೆನ್ಸ್‌ಗೋಸ್ಕರ, ರಾಷ್ಟ್ರ ರಕ್ಷಣೆಗೋಸ್ಕರ ಅಥವಾ ರಕ್ಷಣೆ ಖಾತೆ ಗೋಸ್ಕರ ಉಪಯೋಗಿಸಬಹುದು. ಇದು ಸಹಜವಾಗಿ ಕೇಂದ್ರ ಸರ್ಕಾರದ ಬಡ್ಜೆಟ್ ಮೇಲೆ ಒತ್ತಡವನ್ನು ತಂದೇ ತರುತ್ತದೆ. ಹಣಕಾಸಿನ ಪರಿಸ್ಥಿತಿಯ ಮೇಲೆ ಒತ್ತಡ ತರುವುದು ಸಹಜ.

But that is not the case so far as the State budgetting is concerned. That is the point I want to make out. ಏಕೆಂದರೆ ಇವೊತ್ತು ಇಲ್ಲಿ ನಮಗೆ ಜವಾಬ್ದಾರಿ ಇರತಕ್ಕದ್ದು ಹೆಚ್ಚಾಗಿ ಸೋಷಿಯಲ್ ಸರ್ವೀಸಸ್‌ಗೆ. ಇದಕ್ಕೆ ಸಂಬಂಧಪಟ್ಟಂತೆ ಆರೋಗ್ಯದ ವಿಚಾರ, ಹರಿಜನ-ಗಿರಿಜನರ ವಿಚಾರ ಶಿಕ್ಷಣದ ವಿಚಾರ ಇದೆಲ್ಲವೂ ಕೂಡ ರಾಜ್ಯಾಂಗದ ಪ್ರಕಾರ ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುತ್ತದೆ. ಇವುಗಳ ಬಗ್ಗೆ ಕಾರ್ಯಕ್ರಮ ಹಾಕತಕ್ಕ ವಿಚಾರ ಇಲ್ಲಿದೆ. ಉತ್ಪಾದನಾರಹಿತವಾದ ಕೆಲವು ವಿಚಾರಗಳಿಗೆ ಹಣ ತೊಡಗಿಸತಕ್ಕ ಸಂದರ್ಭ ಬಂದಾಗ ಹೆಚ್ಚಿನ ಒತ್ತಡ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಬಂದು ಹಣದುಬ್ಬರಕ್ಕೆ ಅದು ಒತ್ತನ್ನು ತಂದುಹಾಕುತ್ತದೆ. ಒಂದು ವಿಚಾರ ನಾವು ಪದೇಪದೇ ಪ್ರಸ್ತಾಪ ಮಾಡುತ್ತಿದ್ದೇವೆ, ಹಣದುಬ್ಬರಕ್ಕೆ ಹೆಚ್ಚಾಗಿ ಎಡೆ ಮಾಡ ತಕ್ಕದ್ದು ಯೋಜನೇತರ ವೆಚ್ಚಗಳು. ಯೋಜನಾ ವೆಚ್ಚ ಎಂದರೆ ಪವರ್ ಜನರೇಷನ್ ಮಾಡುವುದು,

ನೀರಾವರಿ ಬಳಕೆ ಮಾಡಿ ಹೆಚ್ಚಿನ ಉತ್ಪಾದನೆ ಮಾಡುವುದು, ನಾವು ಅಗ್ರಿಕಲ್ಚರಲ್ ಔಟ್‌ಪುಟ್ಸ್‌ಗೆ ಹಣ ಖರ್ಚು ಮಾಡುತ್ತೇವೆ. ಪವರ್ ಇದ್ದರೆ ಇಂಡಸ್ಟ್ರಿಯಲ್ ಸೆಕ್ಟಾರ್‌ನಲ್ಲಿ ಕೂಡ ಹೆಚ್ಚಾಗಿ ಬೆಳವಣಿಗೆ ಯನ್ನು ಕಾಣಬಹುದು. ಆದ್ದರಿಂದ ಪ್ರೊಡಕ್ಷನ್ ಓರಿಯೆಂಟೆಡ್ ಪ್ರೋಗ್ರಾಂಗಳು ಯಾವಾಗಲೂ ಇದ ರಲ್ಲಿ ಇದ್ದೇ ಇರುತ್ತವೆ. ಕೇಂದ್ರ ಸರ್ಕಾರ ಈ ರೀತಿಯಾಗಿರತಕ್ಕ ಸಂದರ್ಭ, ಪರಿಸ್ಥಿತಿಯನ್ನು ಎದುರಿಸ ತಕ್ಕ ಸಂದರ್ಭ ಇರುವಾಗ ಡಿಫಿಸಿಟ್ ಬಜೆಟಿಂಗ್ ಅಥವಾ ಡಿಫಿಸಿಟ್ ಫೈನಾನ್ಸಿಂಗ್ ಅನಿವಾರ್ಯವಾಗು ತ್ತದೆ. ಕೆಲವೊಮ್ಮೆ ಹಣದುಬ್ಬರಕ್ಕೆ ಎಡೆ ಮಾಡಿಕೊಟ್ಟರೂ ರಾಷ್ಟ್ರದ ಹಿತದೃಷ್ಟಿಯಿಂದ ಇದನ್ನು ಒಪ್ಪಲೇಬೇಕಾಗುತ್ತದೆ. ಆದರೆ ರಾಜ್ಯ ಬಜೆಟ್‌ನಲ್ಲಿ ಆ ರೀತಿ ಯೋಚನೆ ಮಾಡುವುದಕ್ಕಾಗುವುದಿಲ್ಲ. ನೀವು ಕೇಂದ್ರ ಸರ್ಕಾರದ ಬಜೆಟ್ಟನ್ನು ಉದಾಹರಣೆ ಕೊಟ್ಟು ನೋಡಿ ಇಷ್ಟೊಂದು ಸಾವಿರ ಕೋಟಿ ರೂಪಾಯಿಗಳು ಇರತಕ್ಕ ಆಯವ್ಯಯ ಪತ್ರವನ್ನು ಕಳೆದವರ್ಷ ನೋಡಿದ್ದೇವೆ, ಈ ವರ್ಷವೂ ಕೂಡ ಬರಬಹುದು ಎಂದು ಹೇಳತಕ್ಕದ್ದು ಅಥವಾ ಅದನ್ನು ಪ್ರಸ್ತಾಪ ಮಾಡಿ ಜಸ್ಟಿಫೈ ಮಾಡಿಕೊಳ್ಳತಕ್ಕದ್ದು ಎಂದೂ ಕೂಡ ಸಾಧುವಾದುದಲ್ಲ, ಅದು ಒಳ್ಳೆಯದೂ ಅಲ್ಲ. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯ ಭಾಷಣದಲ್ಲಿ ಹೇಳಿರುವುದನು ನೋಡಿದಾಗ ಗೊತ್ತಾಗುತ್ತದೆ ನಮಗೆ ಎಷ್ಟು ಕೊರತೆ ಇದೆ ಅದನ್ನು ನೀಗಿಸುವುದಕ್ಕೋಸ್ಕರ ಟ್ಯಾಕ್ಸೇಷನ್ ಪ್ರೊಪೋಸಲ್ಸ್ ಇಲ್ಲಿ ತಿಳಿಸಿದ್ದಾರೆ ಎಂದು. ೧೪೫.೫೪ ಕೋಟಿ ರೂಪಾಯಿಗಳ ಡಿಫಿಸಿಟ್ ಇದ್ದರೆ ಸುಮಾರು ೧೪೮ ಕೋಟಿ ರೂಪಾಯಿಗಳ ಟ್ಯಾಕ್ಸೇಷನ್ ರೆವಿನ್ಯೂ ತೋರಿಸಿದ್ದಾರೆ, ಅಂದರೆ ಅಷ್ಟು ಟ್ಯಾಕ್ಸನ್ನು ಜನರ ಮೇಲೆ ಹಾಕುವ ಸಲಹೆ ಯನ್ನು ಕೊಟ್ಟಿದ್ದಾರೆ. ಕೊರತೆ ಇರತಕ್ಕಂಥ ೧೪೫.೫೪ ಕೋಟಿ ರೂಪಾಯಿಗಳು ಎಂಬ ಪ್ರಸ್ತಾಪ ಇದ್ದರೂ ಕೂಡ ಕೊರತೆ ಅಷ್ಟಕ್ಕೇ ನಿಲ್ಲುವುದಿಲ್ಲ. ಜಾಸ್ತಿಯಾಗುವುದಕ್ಕೆ ಹೆಚ್ಚಿನ ಕಾರಣಗಳು ನಮ್ಮ ಹತ್ತಿರ ಇವೆ. ಪರಿಸ್ಥಿತಿ ಹಾಗಿದೆ. ಪರಿಸ್ಥಿತಿಯನ್ನು ಸಮತೋಲನದಲ್ಲಿಟ್ಟು ಸರಿಯಾದಂಥ ದಾರಿಯಲ್ಲಿ ಆರ್ಥಿಕ ವ್ಯವಸ್ಥೆಯ ರೂಪುರೇಷೆಗಳನ್ನು ರೂಪಿಸಿ, ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ಕೊಡತಕ್ಕ ಆರ್ಥಿಕ ದೃಢತೆ ೧೯೭೩-೭೪ ರಿಂದ ಇದ್ದಿದ್ದರೆ ಆಗುತ್ತಿತ್ತು. ಆದರೆ ಈಗ ಮಾಡುವುದಕ್ಕೆ ಹೋದರೆ ಅದು ಸಾಧ್ಯವಾಗಲಾರದು ಎಂಬುದಾಗಿ ನನ್ನ ಅನಿಸಿಕೆ. ನಿಜ, ಬರಗಾಲ ವ್ಯಾಪಕವಾಗಿ ಕರ್ನಾಟಕ ರಾಜ್ಯದಲ್ಲಿತ್ತು ಎಂದು ಸದನದ ಎಲ್ಲಾ ಮೂಲೆಗಳಿಂದ ಮಾತನಾಡಿದ್ದಾರೆ. ಅದೇನೂ ಹೊಸ ವಿಚಾರ ಅಲ್ಲ. ಕಳೆದ ನಾಲ್ಕು ವರ್ಷಗಳಿಂದ ಅನುಭವಿಸುತ್ತಿರತಕ್ಕ ಭೀಕರ ಬರಗಾಲ ಪರಿಸ್ಥಿತಿಯ ಪರಿಣಾಮ ಆರ್ಥಿಕ ಪರಿಸ್ಥಿತಿಯ ಮೇಲೆ ಅಥವಾ ಆರ್ಥಿಕ ವ್ಯವಸ್ಥೆಯ ಮೇಲೆ ದೊಡ್ಡ ಅಂಕಿತವನ್ನು ಹಾಕಿದೆ. ಆದರೆ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡತಕ್ಕ ವಿಚಾರದಲ್ಲಿ ಅದು ಬರಗಾಲವನ್ನು ನಿಭಾಯಿಸ ತಕ್ಕ ವಿಚಾರ ಇರಬಹುದು ಮತ್ತು ನಮ್ಮ ಮುಂದಿರತಕ್ಕ ಯೋಜನೆಗಳನ್ನು ನಿಭಾಯಿಸತಕ್ಕ ವಿಚಾರ ಇರಬಹುದು, ಯೋಜನೇತರ ವೆಚ್ಚ ನೋಡತಕ್ಕ ವಿಚಾರ ಇರಬಹುದು.

ಯೋಜನೇತರ ವೆಚ್ಚಗಳನ್ನು ನೋಡಿದಾಗ ಕೇಂದ್ರದಿಂದ ದೊಡ್ಡ ಸಹಾಯ ನಿಮಗೆ ಬರದಿದ್ದರೆ ನಿಮ್ಮ ಪರಿಸ್ಥಿತಿ ನಾನು ಕೆಡುತ್ತಿತ್ತು ಎನ್ನುವ ಮಾತನ್ನಾಡುವುದಿಲ್ಲ. ಹದಗೆಟ್ಟು ಹೋಗುತ್ತಿತ್ತು. ಆ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಟ್ಟಕ್ಕೆ ಹೋಗುತ್ತಿತ್ತು ಎನ್ನುವ ಮಾತನ್ನು ಅನಿವಾರ್ಯವಾಗಿ ನಾನು ಹೇಳಲೇಬೇಕಾಗುತ್ತದೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಕೇಂದ್ರ ಸರ್ಕಾರಕ್ಕೆ ದುಡ್ಡು ಎಲ್ಲಿಂದ ಬರುತ್ತದೆ? ನಮಗೆ ಕೊಡುಗೆ ಕೊಡುತ್ತಾರೆ ಎಂದು ಅವರು ಹೇಳಿದರು. ಅವರಿಗೆ ಆಕಾಶದಿಂದ ದುಡ್ಡು ಬರುತ್ತದೆಯೋ?

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ತಮ್ಮ ಗಮನಕ್ಕೆ ತರತಕ್ಕಂತಹದ್ದು, ಸಾಮಾನ್ಯ ಒಬ್ಬ ಮನುಷ್ಯನ ಮೇಲೆ ಯಾವ್ಯಾವ ಐಟಮ್ಸ್‌ಗಳ ಮೇಲೆ ತೆರಿಗೆಯನ್ನು ಹಾಕಿದ್ದೀರಿ ಎಂಬುದರ ಬಗ್ಗೆ ನಾನು ಅನಂತರ ಮಾತನಾಡುತ್ತೇನೆ. ಆದರೆ ಈ ಹಣವನ್ನು ಹೇಗೆ ವಸೂಲು ಮಾಡುತ್ತೀರಿ? ಇಂತಹ ದೊಡ್ಡ ಅನ್ಯಾಯವನ್ನು ತಮ್ಮ ಆಯವ್ಯಯ ಪತ್ರದಲ್ಲಿ ಮಾಡಿದ್ದೀರಿ. ಬರಗಾಲದ ಪರಿಸ್ಥಿತಿ ಯಿಂದ ತತ್ತರಿಸಿ ಹೋಗತಕ್ಕ ಕರ್ನಾಟಕ ರಾಜ್ಯದ ಜನತೆಯ ಮೇಲೆ ತೆರಿಗೆಯನ್ನು ಹಾಕತಕ್ಕ ವಿಚಾರ ಹೇಗೆ ಹೊಳೆಯಿತು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವೊತ್ತು ಯಾವುದೇ ಒಬ್ಬ ವ್ಯಕ್ತಿಯ ಮೇಲೆ ಹಾಕತಕ್ಕ ಹೊರೆಯನ್ನು ಹೊರುವುದಕ್ಕೆ ಶಕ್ತಿ ಇದ್ದಾಗ ಮಾತ್ರ ಕೊಡತಕ್ಕ ಶಕ್ತಿಯೂ ಬರು ತ್ತದೆ. ಕಳೆದ ೪ ವರ್ಷಗಳಿಂದಲೂ ಭೀಕರ ಬರಗಾಲ ಎನ್ನತಕ್ಕಂಥ ಮಾತನ್ನಾಡಿದ್ದೀರಿ. ಒಟ್ಟು ರೆವಿನ್ಯೂ ಬಾಬ್ತು ಅಂದರೆ ಇಂಡಸ್ಟ್ರಿಯಲ್ ಸೆಕ್ಟಾರ್ ಹಾಗೂ ಅಗ್ರಿಕಲ್ಚರ್ ಸೆಕ್ಟಾರ್‌ನಿಂದ ಎಷ್ಟು ಲಾಭವಾಗಿದೆ ಎನ್ನತಕ್ಕಂಥ ಮಾತನ್ನು ಬಜೆಟ್ ಸ್ಪೀಚ್‌ನಲ್ಲೇ ಹೇಳಿದ್ದಾರೆ. ನಾನು ಅದರ ಅಂಕಿ ಅಂಶಗಳ

ವಿಚಾರಕ್ಕೆ ಹೋಗುವುದಿಲ್ಲ. ಇದನ್ನು ವಿಚಾರ ಮಾಡಿದಾಗ ನೀವು ಹಾಕಿರತಕ್ಕ ತೆರಿಗೆಯನ್ನು ಕೊಡತಕ್ಕ ಶಕ್ತಿ ಅವನಿಗೆ ಹೇಗೆ ಬರುತ್ತದೆ ? ಹೇಗೆ ಆ ಶಕ್ತಿಯನ್ನು ಪಡೆದುಕೊಳ್ಳುತ್ತಾನೆ ? ಕಳೆದ ೪ ವರ್ಷಗಳಿಂದಲೂ ಭೀಕರ ಬರಗಾಲ ಪರಿಸ್ಥಿತಿಯಿಂದ ಜನತೆ ತೆರಿಗೆಯನ್ನು ಕೊಡತಕ್ಕ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ. ರೈತರು ಮಾನ್‌ಸೂನ್ ಸ್ಟೆಬಿಲೈಜೇಸನ್ಸ್ ಅನ್ನೂ ಕೂಡ ಕಳೆದುಕೊಂಡಿದ್ದಾರೆ. ನಾವು ಈಗ ಮಾರ್ಚಿಯಲ್ಲಿದ್ದೇವೆ. ಈ ಸಾಲಿನಲ್ಲಿ ಬೆಳೆ ಬಂದಂತಹ ಮೊತ್ತ ಈಗಾಗಲೇ ನಮಗೆ ಸಿಕ್ಕಿದೆ. ಅಗ್ರಿಕಲ್ಚರ್ ಸೆಕ್ಟರ್‌ನಲ್ಲಿ ಎಷ್ಟು ನಷ್ಟವಾಯಿತು ? ಅದೇ ರೀತಿ ಇಂಡಸ್ಟ್ರೀಯಲ್ ಸೆಕ್ಟರ್‌ನಿಂದ ಎಂದರೆ ಪವರ್ ಜನರೇಷನ್‌ನಿಂದ ಎಷ್ಟು ಕೊರತೆಯಾಗಿದೆ ಎಂಬುದರ ಅಂದಾಜು ಈಗಾಗಲೇ ಸಿಕ್ಕಿದೆ. ಇದನ್ನು ನೋಡಿದ್ದೇ ಆದರೆ ಜನತೆ ತೆರಿಗೆಯನ್ನು ಕೊಡತಕ್ಕ ಶಕ್ತಿಯನ್ನು ಪಡೆದುಕೊಂಡಿಲ್ಲ. ಬರಗಾಲ ಪರಿಸ್ಥಿತಿಯಿಂದ ತತ್ತರಿಸಿ ಹೋಗಿರುವ ಜನತೆಯ ಮೇಲೆ ಹೆವಿ ಟ್ಯಾಕ್ಸೇಷನ್ ಡೋಸ್ ಕೊಡತಕ್ಕ ಕೆಲಸವನ್ನು ನೀವು ಮಾಡಿದ್ದೀರಿ. ಇದು ಯಾವ ನ್ಯಾಯ ? ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಜೊತೆಗೆ ಬಹಳ ಮುಂದೆ ಒಳ್ಳೆಯ ಕಾಲ ಬರುತ್ತದೆ ಎಂದು ಹೇಳಿದ್ದೀರಿ. ಎಕನಾಮಿಕ್ ಗ್ರೋತ್‌ಗೆ ಒಳ್ಳೆಯ ಅವಕಾಶ ಇದೆ ಎಂದು ಹೇಳಿದ್ದಾರೆ, ಪ್ಲಾನ್‌ಔಟ್ ಲೇ ಬಗ್ಗೆ ನಾನು ಆ ಮೇಲೆ ಹೇಳುತ್ತೇನೆ. ಆದರೆ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡತಕ್ಕಂತಹ ವಿಚಾರದಲ್ಲಿ ನಿಜವಾಗಿಯೂ ಮೂರು ವರ್ಷಗಳಿಂದ ನಮ್ಮ ಮಾನ್‌ಸೂನ್ ಏನಿದೆ ಅದು ಬಹಳ ಸಹಾಯಕವಾಗಬಹುದು ಎಂಬುದಾಗಿ ತಾವು ಮಾತನಾಡಿದ್ದೀರಿ. ಒಂದು ವಿಚಾರವನ್ನು ಯಾವಾಗಲೂ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಬೆಳೆಗಳ ಪರಿಸ್ಥಿತಿ ಯಾವಾಗ ಚೆನ್ನಾಗಿದೆ ಎಂಬುದು ವ್ಯವಸಾಯಗಾರರಾಗಿರತಕ್ಕ ನಮಗೆಲ್ಲರಿಗೂ ಗೊತ್ತಿದೆ. ಫೈನಾನ್ಸಿಯಲ್ ಇಯರ್ ಎಂಡ್‌ನಲ್ಲಿ ಇದು ಗೊತ್ತಾಗುತ್ತದೆ, ಮಳೆ ಚೆನ್ನಾಗಿ ಬರುತ್ತದೆಂದರೆ, ಏಪ್ರಿಲ್‌ನಲ್ಲಿ ಬಿತ್ತನೆ ಪ್ರಾರಂಭವಾಗುತ್ತದೆಂದರೂ ಏಪ್ರಿಲ್, ಮೇ, ಜೂನ್, ಜುಲೈವರೆಗೂ ನಡೆಯುತ್ತದೆ ಎಂದು ಇಟ್ಟುಕೊಂಡರೂ ಕೂಡ ಅದರ ನಂತರವೂ ಕೂಡ ಬೆಳೆ ಬರತಕ್ಕಂತಹ ವಿಚಾರ ತಕ್ಷಣ ನಮಗೆ ಆಗಸ್ಟ್ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲೂ ಅದು ಗೊತ್ತಾಗುವುದಿಲ್ಲ.

ನಮಗೆ ಬೆಳೆ ಸಿಗತಕ್ಕದ್ದು ನವೆಂಬರ್, ಡಿಸೆಂಬರ್, ಜನವರಿಯಲ್ಲಿ. ಅದೂ ತಮ್ಮ ಕಡೆ ಬ್ಲಾಕ್ ಕಾಟನ್ ಸಾಯಿಲ್ ಇರುವಲ್ಲಿ ಬಿಳಿ ಜೋಳ ಕೊನೇ ಗಳಿಗೆಯಲ್ಲಿ ಬರುತ್ತದೆ. ನಮಗೆ ಸಂಪನ್ಮೂಲ ಎಷ್ಟು ಬರುತ್ತದೆ ಎಂಬುದು ಕೊನೆಯಲ್ಲೇ ಗೊತ್ತಾಗುತ್ತದೆ. ಮುಂದಿನ ವರ್ಷ ಏನು ಬರುತ್ತದೆ ಅದರಿಂದ ಈ ಡಿಫಿಸಿಟ್‌ನ್ನು ಈ ಪ್ಲಾನ್ ಪೀರಿಯಡ್‌ನಲ್ಲಿ ತುಂಬುತ್ತೇವೆಂದು ಏನು ಆಸೆ ಇಟ್ಟುಕೊಂಡಿದ್ದೀರೋ ಅದು ಎಂದೂ ಸಾಧ್ಯವಾಗುವುದಿಲ್ಲ ಈ ರೀತಿಯ ಲೆಕ್ಕದಿಂದ ಅದು ಸಾಧ್ಯವಾಗುವುದಿಲ್ಲ. ಆದುದರಿಂದ, ಸುಮಾರಾಗಿ ತಮ್ಮ ಮೂಲಭೂತ ಆರ್ಥಿಕ ಚಿಂತನೆ ದಾರಿ ತಪ್ಪಿದೆ, ತಪ್ಪುದಾರಿ ಹಿಡಿದಿದೆ ಯೆನ್ನುವ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಅನಿವಾರ್ಯವಾಗಿ ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಕಳೆದ ವರ್ಷದ ಯೋಜನಾ ವೆಚ್ಚದ ಗಾತ್ರ ೭೬೫ ಕೋಟಿ ರೂಪಾಯಿಗಳು. ಅದರಲ್ಲಿ ಕೇಂದ್ರದ ಸಾಲ ೩೧೮.೦೭ ಕೋಟಿ ಇರತಕ್ಕದ್ದು. ಜೊತೆಗೆ ಕೇಂದ್ರದ ತೆರಿಗೆ ಹಣದಲ್ಲಿ ಸೆಂಟ್ರಲ್ ಎಕ್ಸೈಸ್ ರಾಜ್ಯ ಸರ್ಕಾರದ ಭಾಗ ಏನಿದೆ ಅದರಲ್ಲಿ ೩೫೦.೨೫ ಕೋಟಿ ಹಣವನ್ನೂ ಕೂಡಾ ೧೯೮೬–೮೭ಕ್ಕೆ ಕೊಡಲಾಗಿದೆ. ರಾಜ್ಯಾಂಗದ ಪ್ರಕಾರ ಏನು ಹಣ ಬರಬೇಕು ಅದನ್ನೆಲ್ಲಾ ಲೆಕ್ಕ ಹಾಕಿದಾಗ ಯೋಜನಾ ವೆಚ್ಚದಲ್ಲಿ ಕೇಂದ್ರದಿಂದ ಬಂದಿರತಕ್ಕದ್ದು ೩೧೮.೦೭ ಕೋಟಿ ಮತ್ತು ತೆರಿಗೆ ಹಣ ೩೫೦.೨೮ ಕೋಟಿ ಬಂದಿದೆ. ಇದರ ಜೊತೆ ೧೫ ತಿಂಗಳಿಗೆ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಕೇಂದ್ರ ಸರ್ಕಾರ ಸುಮಾರು ೧೧೨ ಕೋಟಿ ರೂಪಾಯಿಗಳನ್ನು ಕೊಟ್ಟಿದೆ ೧೫ ತಿಂಗಳು ಎಂದರೆ. ೧೫ ತಿಂಗಳಿಗೆ ಲೆಕ್ಕ ಹಾಕಿ ೩ ತಿಂಗಳದ್ದು ಅಡ್ವಾನ್ಸ್ ಕೂಡಾ ಕೊಟ್ಟಿದೆ. ನಮಗೆ ಗೊತ್ತಿರುವಹಾಗೆ ಈ ಪ್ಲಾನ್ ಔಟಲೇ ೧೯೮೬—೮೭ಕ್ಕೆ ಎಷ್ಟು ಹಣ ತಮಗೆ ಸಿಗಬೇಕೋ ಅದನ್ನು ನಿಮಗೆ ಕೇಂದ್ರ ಕೊಟ್ಟರೂ ಕೂಡಾ ರಾಜ್ಯದಿಂದ ತಾವು ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರಲ್ಲಿ ವಿಫಲರಾಗಿದ್ದೀರಿ. ವಿಫಲರಾಗಿರುವುದರಿಂದ ಸುಮಾರಾಗಿ ನಮ್ಮ ಯೋಜನಾ ಗಾತ್ರವನ್ನು ನಾವು ನಿರೀಕ್ಷೆ ಮಾಡಿದ್ದೆವೋ ಅದಕ್ಕೆ ದೊಡ್ಡ ಪೆಟ್ಟು ಬಿತ್ತು. ಈ ಒಂದು ಹಿನ್ನೆಲೆಯಲ್ಲಿ ೧೯೮೭–೮೮ರ ಮುಂದಿನ ವರ್ಷದ ಅವಧಿಯಲ್ಲಿ ಹೆಚ್ಚಿನ ಕೊರತೆ ಬೀಳತಕ್ಕ ಸಂದರ್ಭ ಇದೆಯೆಂದು ನನಗನ್ನಿಸುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ನಾನು ಸೂಕ್ಷ್ಮವಾದ ವಿವರಗಳಿಗೆ ಹೋಗದೇ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಬರಗಾಲದ ಪರಿಸ್ಥಿತಿಯಿಂದ ಟೋಟಲ್ ರೆವಿನ್ಯೂ ಲಾಸ್ ೪೮೮ ಕೋಟಿ ಆಯಿತು ಎಂದು ಹೇಳಿರುವುದು ನಿಜ ಇದೆ. ಇಷ್ಟು ಲಾಸ್ ಆಗಿದೆ ಎನ್ನುವ ವಿಷಯದಲ್ಲಿ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಅದು ಆಗಿರತಕ್ಕದ್ದು

ನಿಜ. ಬರಗಾಲ ಸಾಕಷ್ಟು ಪ್ರಮಾಣದಲ್ಲಿ ಜಾಸ್ತಿ ಇತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆ ಒಂದು ದೃಷ್ಟಿಯಿಂದ ಇವತ್ತು ತಮ್ಮ ಈ ವರ್ಷದ ಯೋಜನಾ ಗಾತ್ರವನ್ನು ಏನು ತಾವು ಆಯವ್ಯಯ ಪತ್ರದಲ್ಲಿ ಪ್ರಸ್ತಾಪ ಮಾಡಿದ್ದೀರೋ, ಅದನ್ನು ಸುಮಾರಾಗಿ ನನ್ನ ಪ್ರಕಾರ ಯೋಜನಾ ಆಯೋಗದ ಮುಂದೆ ತಾವು ನಮ್ಮ ರಾಜ್ಯ ಸರ್ಕಾರದ ವಾದವನ್ನು ಮಂಡನೆ ಮಾಡುವ ಸಂದರ್ಭದಲ್ಲಿ ಸರಿಯಾದ ದಾರಿಯಲ್ಲಿ ಇಟ್ಟಿದ್ದರೆ ನಮ್ಮ ಈ ಯೋಜನಾ ಗಾತ್ರ ಇನ್ನೂ ಹೆಚ್ಚು ಆಗುತ್ತಾ ಇತ್ತು. ಈ ಹಲವಾರು ವಿಚಾರಗಳನ್ನು ನನ್ನ ಭಾಷಣದಲ್ಲಿ ವಿವರವಾಗಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಯಾವ ಯಾವ ವಿಚಾರದಲ್ಲಿ ಯೋಜನಾ ಆಯೋಗದ ಮುಂದೆ ನಿಮ್ಮ ವಾದವನ್ನು ಮಂಡನೆ ಮಾಡಿದ್ದೀರಿ, ಅದರಲ್ಲಿ ವಿಫಲರಾಗಿದ್ದೀರಿ. ನೀವು ಇಲಾಖಾವಾರು ಹೋಗಬೇಕಾಗುತ್ತದೆ. ಯೋಜನಾ ಆಯೋಗದವರು ವಾರ್ಷಿಕ ಯೋಜನೆಯ ಗಾತ್ರವನ್ನು ೧೯೮೭—೮೮ ರಲ್ಲಿ ಜಾಸ್ತಿ ಮಾಡಿದ್ದಾರೆಂದು ಹೇಳಿದ್ದೀರಿ. ಅವರು ಒಪ್ಪಿದ್ದಾರೆ ಅದಕ್ಕೆ ಯಾವುದೇ ತಕರಾರು ಇಲ್ಲವೆಂದು ಇದರಲ್ಲಿ ಬರೆದಿದ್ದೀರಿ. ರಾಜ್ಯ ಸರ್ಕಾರ ಹಲವಾರು ವಿಚಾರಗಳಲ್ಲಿ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ನಮ್ಮ ಸಮಸ್ಯೆಗಳಿಗೆ ಪರಿಹಾರ ಕೊಡುವುದರಲ್ಲಿ ವಿಫಲವಾಗಿದೆ. ಆ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಇಲ್ಲಿಟ್ಟರೆ ಬಹಳ ಒಳ್ಳೆಯದೆಂದು ನನ್ನ ಭಾವನೆ ಕೆಲವು ಯೋಜನೆಗಳನ್ನು ೧೯೮೪—೮೫ ರಲ್ಲಿ ಲೆಕ್ಕ ಹಾಕಿದರೆ ಯೋಜನೆಯ ಗಾತ್ರ ಎಷ್ಟು, ನಾವು ಎಷ್ಟು ಗುರಿಯನ್ನು ತಲುಪಬೇಕು. ಎಷ್ಟು ನಿಗದಿ ಮಾಡಿದ್ದೇವೆ ಅದರಲ್ಲಿ ಈ ಸರ್ಕಾರ ಯಾವರೀತಿ ವಿಫಲವಾಗಿದೆ ಎನ್ನುವುದನ್ನು ಪ್ರಸ್ತಾಪ ಮಾಡುವುದಕ್ಕೆ ಬದಲಾಗಿ, ರಾಜ್ಯ ಸರ್ಕಾರದವರು ಯೋಜನಾ ಆಯೋಗದವರಿಗೆ, ಕೇಂದ್ರದ ಹಣಕಾಸು ಖಾತೆಯವರಿಗೆ, ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಮಧ್ಯೆ ಮಧ್ಯೆ ಬೇರೆ ಬೇರೆ ರೀತಿಯ ಹೇಳಿಕೆಗಳು ಬಂದಿವೆ. ಕರ್ನಾಟಕ ರಾಜ್ಯದ ಆರ್ಥಿಕ ಸ್ಥಿತಿ ಹೇಗಿದೆ ಎಂಬುದಕ್ಕೆ ಅವರೇ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರೆ ಬಹಳ ಒಳ್ಳೆಯದು. ಯಾವ ರೀತಿ ಇಳಿಮುಖವಾಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಜೀತಮುಕ್ತರ ಬಗ್ಗೆ ಹೇಳುವುದಾದರೆ, ೧೯೮೪—೮೫ನ್ನು ಹೋಲಿಸಿ ನೋಡಿದರೆ, ೧೯೮೬—೮೭ ರಲ್ಲಿ ವಿವಿಧ ಯೋಜನೆಗಳಿಗೆ ಖರ್ಚುಮಾಡಿರ ತಕ್ಕದ್ದನ್ನು ನೋಡಿದರೆ ಗೊತ್ತಾಗುತ್ತದೆ. ೧೯೮೬—೮೭ ರಲ್ಲಿ ೭೦೩೦ ಜನ ಜೀತದಾಳುಗಳನ್ನು ಜೀತ ವಿಮುಕ್ತರನ್ನಾಗಿ ಮಾಡತಕ್ಕ ಕಾರ್ಯಕ್ರಮ ಸರ್ಕಾರದ ಮುಂದಿತ್ತು. ಅದೇ ರೀತಿ ೬೦೫೦ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯತಕ್ಕ ಗುರಿಯನ್ನು ಸರ್ಕಾರ ಇಟ್ಟುಕೊಂಡಿತ್ತು. ಇವರು ೧೯೮೬—೮೭ರಲ್ಲಿ ೭೦೩೦ ಜನ ಜೀತ ವಿಮುಕ್ತರನ್ನಾಗಿ ಮಾಡುವುದಕ್ಕೆ. ೧೩೫೦ ಜನರನ್ನು ಮಾತ್ರ ಜೀತ ವಿಮುಕ್ತ, ರನ್ನಾಗಿ ಮಾಡಿದ್ದಾರೆ. ೬೦೫೦ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದಕ್ಕೆ ಬದಲಾಗಿ ೩೦೦ ನ್ಯಾಯಬೆಲೆ ಅಂಗಡಿಗಳನ್ನು ಮಾತ್ರ ತೆರೆದಿದ್ದಾರೆ. ಇವರ ಸಾಧನೆ ಹೇಗೆ ಸಾಗಿ ಹೋಗುತ್ತಿದೆ ಎನುವುದಕ್ಕೆ ಉದಾಹರಣೆಯನ್ನು ಇಟ್ಟಿದ್ದೇನೆ. ದುರ್ಬಲವರ್ಗದವರನ್ನು ಗುರುತಿಸತಕ್ಕ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ಯಾವರೀತಿ ಸರ್ಕಾರ ಕಡೆಗಾಣಿಸಿದೆ ಎನ್ನುವ ಅಂಕಿ ಅಂಶಗಳನ್ನು ಕೊಟ್ಟರೆ ಬಹಳ ಒಳ್ಳೆಯದು. ಕೇಂದ್ರ ಸರ್ಕಾರಕ್ಕೆ ಇವರೇ ಕೊಟ್ಟಿರುವ ಅಂಕಿ ಅಂಶಗಳು. ೧೯೮೫—೮೬ ರಲ್ಲಿ ಇವರ ಸಾಧನೆ ಹೇಗಿದೆ ಎಂಬುದನ್ನು ಗಮನಿಸಬೇಕು. ಒಂದು ವರ್ಷದ ಅಂಕಿ ಅಂಶಗಳನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಆ ಅವಧಿಯಲ್ಲಿ ಹಳ್ಳಿಗಳಿಗೆ ದೀಪ ಕೊಡತಕ್ಕ ಕಾರ್ಯಕ್ರಮ ಆರ್. ಇ. ಪಿ. ಇವರು ಗುರಿ ಇಟ್ಟುಕೊಂಡಿದ್ದು ೧೯೯೦ ಇವರು ಸಾಧಿಸಿದ್ದು ೧೦೩೮, ಎಲ್ಲಾ ಗುರಿಗಳು ಇಳಿಯುತ್ತಾ ಹೋಗುತ್ತವೆ.

ಆ ಒಂದು ದಿಸೆಯಲ್ಲಿ ಸರ್ಕಾರ ಏನು ಸಾಧನೆ ಮಾಡಿದೆ ಎಂದು ಹೇಳುತ್ತಿದ್ದೇನೆ ಹೇಗೆ ನೀವು ಡೌನ್‌ವರ್ಡ್ ಟ್ರೆಂಡ್‌ಗೆ ಹೋಗಿದ್ದೀರಿ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ದುರ್ಬಲವರ್ಗದವರಿಗೆ ಮನೆಗಳನ್ನು ಕೊಟ್ಟಿರತಕ್ಕಂಥ ಕಾರ್ಯಕ್ರಮ. ಪುನಃ ಕೇಂದ್ರ ಸರ್ಕಾರಕ್ಕೆ ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ. ೮೯೬೩ ಮನೆಗಳ ನಿರ್ಮಾಣ ಇದ್ದದ್ದು ಇದು ೬೦೫೯ಕ್ಕೆ ಇಳಿದು ಹೋಗಿಬಿಡುತ್ತದೆ. ಸುಮಾರು ೨ ಸಾವಿರ ಚಿಲ್ಲರೆ ಮನೆಗಳನ್ನು ಕಟ್ಟಿಸುವುದಕ್ಕೆ ಆಗಿಲ್ಲ. ೮೩–೮೪ ರಿಂದ ೮೫–೮೬ ರವರೆಗೆ ಮತ್ತು ಗೃಹ ನಿರ್ಮಾಣಕ್ಕೆ ಸಂಬಂಧಿಸಿದಂತೆ ನೀವು ಕೊಟ್ಟಿರ ತಕ್ಕಂಥ ಅಂಕಿಅಂಶಗಳನ್ನೇ ನಾನು ಕೊಡುತ್ತಿದ್ದೇನೆ. ಅದು ೮೩ ರಿಂದ ೭೮,೦೦೦ ದಿಂದ ೫೨,೨೦೬ ಕ್ಕೆ ಇಳಿದು ಹೋಯಿತು. ಇದು ಹೇಗೆ ಡೌನ್‌ವರ್ಡ್ ಟ್ರೆಂಡ್ ಆಗಿದೆ ನೋಡಿ. ಕೊಳಗೇರಿಗಳಲ್ಲಿ ವಾಸ ಮಾಡುವ ಜನರಿಗೆ ನಿವೇಶನಗಳನ್ನು ಕೊಡುವುದು. ಯಾರು ಯಾರು ಬಡವರು ಗುಡಿಸಲು, ಜೋಪಡಿಗಳನ್ನು ಕಟ್ಟಿಕೊಂಡಿರುತ್ತಾರೆ. ಅವರಿಗೆ ಕೇಂದ್ರಸರ್ಕಾರ, ಆಗಲೀ ಯಾವುದೇ ರಾಜ್ಯ

ಸರ್ಕಾರವಾಗಲೀ, ಕರ್ನಾಟಕ ರಾಜ್ಯವೂ ಸೇರಿದಂತೆ ಕೊಡತಕ್ಕದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಅವರಿಗೆ ಪುನರ್ ವಸತಿ ಒದಗಿಸಿರತಕ್ಕ ಪ್ರಕರಣಗಳ ಸಂಖ್ಯೆ ೧,೫೫,೭೫೧ ರಿಂದ ೫೫,೧೯೭ಕ್ಕೆ ಇಳಿದಿರುವುದು ಮತ್ತೊಂದು ಉದಾಹರಣೆ, ಅಂದರೆ ಕೊಳಗೇರಿಗಳಲ್ಲಿ ವಾಸ ಮಾಡತಕ್ಕಂಥ ಜನರಿಗೆ ಸಹಾಯ ಮಾಡತಕ್ಕಂಥ ವಿಚಾರದಲ್ಲಿಯೂ ನೀವು ವಿಫಲರಾಗಿದ್ದೀರಿ ಎಂದು ಉದಾಹರಣೆಯನ್ನು ನಾನು ಕೊಡುತ್ತಿರತಕ್ಕಂಥಾದ್ದು. ದುರ್ಬಲ ವರ್ಗದವರಿಗೆ ಮನೆ ನಿವೇಶನ ಬಗ್ಗೆ ಬಹಳ ಜನಕ್ಕೆ ಕೊಟ್ಟಿದ್ದೇವೆ ಎಂಬ ಮಾತನ್ನು ಪದೇ ಪದೇ ಹೇಳಿದ್ದೀರಿ. ನಿಮ್ಮ ಅಂಕಿ ಅಂಶಗಳನ್ನೇ ಇಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಗುರಿ ೭೮೦೦೧ ಇದ್ದದ್ದು ೫೦,೧೮೩ಕ್ಕೆ ಇಳಿದಿದೆ. ಜೀತ ವಿಮುಕ್ತರಿಗೆ ಪುನರ್ ವಸತಿ ಕಾರ್ಯಕ್ರಮದಲ್ಲಿ ೭೨೮೪ ರಿಂದ ೪೧೯೭ಕ್ಕೆ ಇಳಿದು ಹೋಗಿದೆ. ಹರಿಜನರಿಗೆ ನೆರವನ್ನು ಕೊಟ್ಟಿರುವ ಬಗ್ಗೆ ಕೇಂದ್ರಸರ್ಕಾರಕ್ಕೆ ವಿವರ ಕೊಟ್ಟಿರುವ ಪ್ರಕಾರ, ೧,೫೫,೯೮೬ ಕುಟುಂಬಗಳಿಗೆ ಕೊಡಬೇಕೆಂದು ಇದ್ದಂಥ ಕಾರ್ಯಕ್ರಮ ೧,೨೯,೬೦ ಕುಟುಂಬಗಳಿಗೆ ಇಳಿದು ಹೋಗಿದೆ. ಸುಮಾರು ೫೦ ಸಾವಿರ ಚಿಲ್ಲರೆ ಕುಟುಂಬಗಳಿಗೆ ನೆರವನ್ನು ಕೊಡುವುದಕ್ಕೆ ನಿಮ್ಮಿಂದ ಆಗಲಿಲ್ಲ. ಇದರಲ್ಲಿ ನೀವು ವಿಫಲರಾದಿರಿ. ಈ ಎರಡು ವರ್ಷಗಳ ಕಾಲದಲ್ಲಿ ಹೆಚ್ಚುವರಿ ಭೂಮಿಯನ್ನು ಕೊಡತಕ್ಕಂಥ ವಿಚಾರದಲ್ಲಿ ಭೂಹೀನ ರೈತರಿಗೆ ಹಂಚಿಕೆ ಮಾಡಿ ಕೊಟ್ಟಿರತಕ್ಕದ್ದು ೬,೬೭೧ ಹೆಕ್ಟೇರ್‌ಗಳು. ಅದರಲ್ಲಿ ಹರಿಜನರು ಮತ್ತು ಗಿರಿಜನರು ಇವರಿಗೆ ಕೊಟ್ಟಿರತಕ್ಕದ್ದು ಪ್ರತ್ಯೇಕವಿದೆ. ಮಾನ್ಯ ಅಧ್ಯಕ್ಷರೇ, ಕೆಲವು ಉದಾಹರಣೆಗಳನ್ನು ಅಷ್ಟೇ ಇಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಸಮಾಜದಲ್ಲಿರತಕ್ಕಂಥ ದುರ್ಬಲ ವರ್ಗಗಳನ್ನು ಗುರುತಿಸಿ ಅವರಿಗೆ ಉದ್ಯೋಗವನ್ನು ಕೊಡುವ ಬಗ್ಗೆ, ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅಚ್ಚುಹಾಕಿಸಿ ಹಂಚಿದ್ದೀರಿ, ಏನೆಂದರೆ ಮನೆಗೊಂದು ಉದ್ಯೋಗ ಕೊಡುತ್ತೇವೆ ಎಂದು. ಏನು ಉದ್ಯೋಗ ಕೊಟ್ಟಿದ್ದೀರಿ ಎಂದರೆ ಉದ್ಯೋಗವನ್ನು ಹುಡುಕುವ ಉದ್ಯೋಗವನ್ನು ಅವರಿಗೆ ಕೊಟ್ಟಿದ್ದೀರಿ. ಅದೇ ಉದ್ಯೋಗವನ್ನು ಕೊಟ್ಟಿರತಕ್ಕದ್ದು. ಇವತ್ತು ಸರ್ಕಾರದ ವಿವಿಧ ಇಲಾಖೆಗಳಲ್ಲಿ ೧೯೮೩-೮೪ರಲ್ಲಿ ಸುಮಾರು ೫೦ ಸಾವಿರ ಚಿಲ್ಲರೆ ಹುದ್ದೆಗಳು ಖಾಲಿ ಇದ್ದವು ಎಂದು ಒಂದು ಅಂದಾಜು. ಅದು ಇವತ್ತು ಎಷ್ಟಕ್ಕೆ ಹೋಗಿದೆ ಎಂದರೆ ೭೨ ಸಾವಿರ ಚಿಲ್ಲರೆಗೆ ಹೋಗಿದೆ, ಇದು ಸಬ್ಜೆಕ್ಟ್ ಟು ವೆರಿಫಿಕೇಶನ್. ಸ್ವಲ್ಪ ವ್ಯತ್ಯಾಸ ಆಗಬಹುದು ಏಕೆಂದರೆ ಇದು ಪ್ರತಿ ತಿಂಗಳೂ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಇವೊತ್ತು ವಿದ್ಯಾವಂತ ನಿರುದ್ಯೋಗಿಗಳು ಮತ್ತು ಅವಿದ್ಯಾವಂತ ನಿರುದ್ಯೋಗಿಗಳು ಎಂದು ಎರಡು ಗುಂಪು ಇದೆ.

೨-೫೦ ಪಿ. ಎಂ.

ಇವತ್ತು ಎಸ್.ಎಸ್.ಎಲ್.ಸಿ., ಡಿಪ್ಲಮೋ, ಬಿ.ಎ., ಬಿ.ಕಾಂ ಮತ್ತು ಟೆಕ್ನಿಕಲ್ ಕೋರ್ಸ್ ಓದಿರತಕ್ಕಂಥ ಮಕ್ಕಳ ಪರಿಸ್ಥಿತಿ ಅಲ್ಲಲ್ಲಿಗೆ ಬಿದ್ದಿದೆ. ಕೊನೆಯ ಪಕ್ಷ ಎಷ್ಟು ರಿಕ್ವೈರ್‌ಮೆಂಟ್ ಇದೆ, ಅಷ್ಟನ್ನಾದರೂ ತೆಗೆದುಕೊಳ್ಳಬೇಕು, ಏಕೆಂದರೆ ಸರ್ಕಾರದ ಕೆಲಸ ನಡೆಯಬೇಕಲ್ಲ. ನಾನು ಈ ಒಂದು ಮೂಲ ನೀತಿಯನ್ನು ಒಪ್ಪುತ್ತೇನೆ. ಎಲ್ಲಿ ಯಾರನ್ನು ಕೊಡಬೇಕೋ, ಎಲ್ಲೆಲ್ಲಿ ಯಾವ ಯಾವ ಅಧಿಕಾರಿಯನ್ನು ಹಾಕಬೇಕೋ, ಅವರು ಯಾವರೀತಿ ಜನರ ಸೇವೆಯನ್ನು ಮಾಡಬೇಕೋ, ಅದನ್ನು ಮಾಡಿಸುವುದಕ್ಕೆ ನಿಮ್ಮಿಂದ ಆಗಿಲ್ಲ. ಏತಕ್ಕೆಂದರೆ ಇವತ್ತು ನಿಮ್ಮ ಹಣಕಾಸಿನ ಪರಿಸ್ಥಿತಿಯೂ ಹಾಗೆಯೇ ಇದೆ. ನೌಕರರಿಗೆ ಸಂಬಳ ಸಾರಿಗೆ ಕೊಡತಕ್ಕ ಪರಿಸ್ಥಿತಿ ಇಲ್ಲ. ಸರ್ಕಾರದ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ. ಇವತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯನ್ನೇ ತೆಗೆದುಕೊಳ್ಳಿ. ಎಷ್ಟೋ ಬಿಲ್ಲುಗಳು ಯಾವ ಯಾವುದೋ ಆಫೀಸಿನಲ್ಲಿ ಬಾಕಿ ಬಿದ್ದಿವೆ. ನಾನು ಈ ಒಂದು ಇಲಾಖೆಯ ಉದಾಹರಣೆಯನ್ನು ಮಾತ್ರ ಕೊಡುತ್ತೇನೆ. ಹಿಂದೆ ಅಂದರೆ, ಕಳೆದ ವರ್ಷ ಸರ್ಕಾರದ ಚೆಕ್‌ಗಳು ಬೌನ್ಸ್ ಆಗಿರತಕ್ಕಂಥಾದ್ದು ಇದೆ. ರಾಶಿ, ರಾಶಿ ಚೆಕ್‌ಗಳು ಬಿದ್ದಿವೆ, ಅವುಗಳನ್ನು ಗೋಣಿ ಚೀಲದಲ್ಲಿ ತುಂಬಬಹುದೆಂದು ಇಲ್ಲಿಯೂ ಅನೇಕ ಸದಸ್ಯರು ಮಾತನಾಡಿದ್ದಾರೆ, ನಾನು ಕೂಡ ಮಾತನಾಡಿದ್ದೇನೆ. ತಾವು ಈ ಬಗ್ಗೆ ರಿಸರ್ವ್ ಬ್ಯಾಂಕ್ ನೆರವು ನಮಗೆ ಬರಲಿಲ್ಲವೆಂದು ಹೇಳಬಹುದು. ಈ ಓವರ್ ಡ್ರಾಫ್ಟ್ ವಿಚಾರದಲ್ಲಿ, ಓವರ್ ಡ್ರಾಫ್ಟ್ ಹೇಗೆ ಕೊಡಬೇಕು ? ಹೇಗೆ ಸರಿಪಡಿಸಬೇಕು ಎಂಬ ಬಗ್ಗೆ ಕೇಂದ್ರಸರ್ಕಾರದವರು ಒಂದು ಹೊಸ ನೀತಿಯನ್ನು ಮಾಡಿದ್ದಾರೆ. ಇದನ್ನು ಎಲ್ಲಾ ರಾಜ್ಯಗಳ ಹಿತದೃಷ್ಟಿಯಿಂದ ಮಾಡಿದ್ದಾರೆ. ಇಲ್ಲದೇ ಹೋಗಿದ್ದರೆ ರಿಸರ್ವ್ ಬ್ಯಾಂಕ್ ಡೀಲಿಂಗ್ಸ್ ಮಾಡುವುದು ಕಷ್ಟವಾಗುತ್ತಿತ್ತು. ಮಾನ್ಯ ವಿ. ಪಿ. ಸಿಂಗ್‌ರವರು ಕೇಂದ್ರದಲ್ಲಿ ಹಣಕಾಸಿನ ಸಚಿವರಾಗಿದ್ದಾಗಲೇ ಈ ನೀತಿಯನ್ನು

ರೂಪಿಸಿದ್ದುದು, ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವ ದೃಷ್ಟಿಯಿಂದ, ಓವರ್ ಡ್ರಾಫ್ಟ್ ದೃಷ್ಟಿಯಿಂದ ಈ ನೀತಿಯನ್ನು ಕೇಂದ್ರಸರ್ಕಾರ ಮಾಡಿದೆ. ಇದನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆ.

ಇನ್ನು ಈ ವರ್ಷವೂ ಕೂಡ ಸರ್ಕಾರದ ಹಲವಾರು ಇಲಾಖೆಗಳಲ್ಲಿ ಬಾಕಿ ಇರತಕ್ಕಂಥ ಬಿಲ್ಲುಗಳನ್ನು ಪೂರ್ಣ ಮಾಡುವುದಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ಇದ್ದೆ ನಿಮ್ಮ ಆಡಳಿತದ ಕಾಲದಲ್ಲಿ, ೧೯೮೪-೮೫ರಲ್ಲಿ ಆರ್ಥಿಕ ಪರಿಸ್ಥಿತಿ ವಿಚಾರದಲ್ಲಿ ಬಹಳ ಹೆಮ್ಮೆಪಟ್ಟುಕೊಳ್ಳುವ ಮಟ್ಟಕ್ಕೆ ಮಾತನಾಡುತ್ತಾ ಹೋಗಿದ್ದೀರಿ. ಅದಕ್ಕೆ ತದ್ವಿರುದ್ಧವಾಗಿ ನಿಮ್ಮ ಪರಿಸ್ಥಿತಿ ಕಂಡುಬಂದಿದೆ. ಇವತ್ತು ಪೆನ್‌ಷನ್‌ದಾರರಿಗೂ ಹಣ ಕೊಡುವುದಕ್ಕಾಗದೆ ಇರುವ ವಿಚಾರವನ್ನು ಹೇಳಿದ್ದಾರೆ. ಈ ರೀತಿ ಅನೇಕ ತಾಲ್ಲೂಕುಗಳಲ್ಲಿ ಆಗಿದೆ. ಈ ಸದನದಲ್ಲೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ನಾನು ಎಲ್ಲಾ ವಿವರಗಳಿಗೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. ಇದೇ ಸಂದರ್ಭದಲ್ಲಿ, ಯಾವರೀತಿಯಾಗಿ ಸರ್ಕಾರ ಮತ್ತೆ ವಿಫಲವಾಗಿದೆ ಎನ್ನುವ ವಿಚಾರ. ಕೆಲವು ಸಾಧನೆಗಳ ದೃಷ್ಟಿಯಿಂದ ಇದನ್ನು ಇಲ್ಲಿ ಹೇಳಬೇಕಾಗಿದೆ. ಈಗ ಈ ಮ್ಯಾನ್‌ಡೇಸ್ ಎಂದರೆ ಮಾನವ ದಿನಗಳು. ಎನ್.ಆರ್.ಇ.ಪಿ ಮತ್ತು ಆರ್.ಎಲ್.ಇ.ಜಿ.ಪಿ. ಅವರ ಪ್ರಕಾರ ಯಾವುದೇ ಒಂದು ಎಂದು ಇಟ್ಟುಕೊಳ್ಳೋಣ. ಇವರ ಆಡಳಿತದ ಕಾಲದಲ್ಲಿ ಇದರಲ್ಲಿ ಹೇಗೆ ಕಡಿಮೆಯಾಗಿದೆ ಎನ್ನುವುದು ಗೊತ್ತಾಗುತ್ತದೆ. ಎನ್.ಆರ್.ಇ.ಪಿ. ಕಾರ್ಯಕ್ರಮದಲ್ಲಿ ೪,೧೩,೩೨,೦೦೦ ಮ್ಯಾನ್‌ಡೇಸ್ ಇದ್ದುದು, ೨ ಕೋಟಿ ೩೧ ಲಕ್ಷಕ್ಕೆ ಇಳಿದು ಹೋಗಿದೆ. ಅಂದಾಜು ೫೦ ಪರ್ಸೆಂಟ್ ಎಂದು ಇಟ್ಟು ಕೊಳ್ಳಬಹುದು, ಅಷ್ಟು ಕಡಿಮೆಯಾಗಿದೆ. ಆರ್.ಎಲ್.ಇ.ಜಿ.ಪಿ. ಕಾರ್ಯಕ್ರಮದಲ್ಲಿ ೧,೭೮,೪೪,೦೦೦ ಮ್ಯಾನ್‌ಡೇಸ್ ಇದ್ದುದು, ೧,೬೧,೮ ೦೦೦ಕ್ಕೆ ಇಳಿದು ಹೋಗಿದೆ. ಎಷ್ಟು ಕಡಿಮೆಯಾಗಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾನು ಇಲ್ಲಿ ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಹೀಗೆಯೇ ಉದಾಹರಣೆಯನ್ನು ಕೊಡುತ್ತಾ ಹೋದರೆ ಬೇಕಾದಷ್ಟು ಕೊಡಬಹುದು. ಒಂದೆರಡನ್ನು ಮಾತ್ರ ತಮ್ಮ ಗಮನಕ್ಕೆ ತಂದಿದ್ದೇನೆ. ಇದೇ ಸಂದರ್ಭದಲ್ಲಿ ಅನೇಕ ಪತ್ರಿಕೆಯವರೂ ಇದರ ಬಗ್ಗೆ ಬರೆದರು. ನಾನು ಎಲ್ಲಾ ಪತ್ರಿಕೆಗಳನ್ನು ಓದುವುದಕ್ಕೆ ಹೋಗದಿದ್ದರೂ ಕೂಡ, ಆರ್ಥಿಕ ಭದ್ರತೆಗೋಸ್ಕರ ಸಂಪನ್ಮೂಲಗಳನ್ನು ಹಿಡಿದುಕೊಳ್ಳತಕ್ಕಂಥ ವಿಚಾರದಲ್ಲಿ ರಾಜ್ಯ ಸರಕಾರ ಹಿಂದೆ ಬೀಳುತ್ತಿದೆ ಎಂಬ ಮಾತನ್ನು ಬರೆದರು. ನಮಗೆ ಗೊತ್ತಿರುವ ಹಾಗೆ ಹೊಸ ಸಂಪನ್ಮೂಲವನ್ನು ಹುಡುಕತಕ್ಕ ವಿಚಾರದಲ್ಲಿ, ನಾವು ಮುಂದೆ ಉಳಿದಿರತಕ್ಕಂಥ ಪ್ಲಾನ್ ಪೀರಿಯಡ್‌ನಲ್ಲಿ, ಉಳಿದಿರತಕ್ಕಂಥ ವರ್ಷಗಳಲ್ಲಿ, ಹಣವನ್ನು ಕ್ರೋಢೀಕರಣ ಮಾಡತಕ್ಕ ವಿಚಾರದಲ್ಲಿ, ಇನ್‌ಕ್ಲೂಡಿಂಗ್ ಡೈರೆಕ್ಟ್ ಟ್ಯಾಕ್ಸಸ್ ಸ್ಪಷ್ಟವಾದ ಕಾರ್ಯಕ್ರಮ ಹಾಕಿದ್ದೇವೆ ಎಂಬ ಮಾತನ್ನು ಹೇಳಿ, ೧೪೮ ಕೋಟಿ ರೂಪಾಯಿಗಳ ಡೈರೆಕ್ಟ್ ಟ್ಯಾಕ್ಸಸ್ ಹಾಕುತ್ತೇವೆ ಎಂದು ಹೇಳಿರತಕ್ಕ ಮಾತನ್ನು ಇವರು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿರತಕ್ಕಂಥಾದ್ದು ರಾಜ್ಯ ಸರಕಾರ. ಈಗೇನು ಕೊರತೆ ಇರತಕ್ಕಂಥ ಆಯವ್ಯಯ ಪತ್ರವನ್ನು ಮಂಡನೆ ಮಾಡಿ ಹಣವನ್ನು ತುಂಬತಕ್ಕಂಥ ಪ್ರಯತ್ನ ಮಾಡುತ್ತಿದೆ. ಇದರಿಂದ ಏನೂ ಆಗುವುದಿಲ್ಲ. ಹಣವನ್ನು ಉಳಿತಾಯ ಮಾಡುವುದಕ್ಕೋಸ್ಕರ ಜೀರೋ ಬೇಸ್ ಬಜೆಟ್ ಎಂಬ ಹೊಸ ಪದ್ಧತಿಯನ್ನು ತಂದಿದ್ದಾರೆ. ಜೀರೋ ಬೇಸ್ ಬಜೆಟ್ ವಿಚಾರವನ್ನು ನಾನೂ ಕೇಳಿದ್ದೆ, ಯಾವುದೋ ಒಂದು ಪುಸ್ತಕವನ್ನು ಓದಬೇಕಾದರೆ ನಾನೂ ಓದಿದ್ದೆ. ಆದರೆ ಅದರ ಬಗ್ಗೆ ಹೆಚ್ಚು ಗಮನ ಕೊಟ್ಟಿರಲಿಲ್ಲ. ಈ ಜೀರೋ ಬೇಸ್ ಬಜೆಟ್‌ನ್ನು ಕೇಂದ್ರ ಸರಕಾರದವರೂ ಕೂಡಾ ಪ್ರಸ್ತಾಪ ಮಾಡಿರುವುದನ್ನು ನಾನು ಕೇಳಿದ್ದೇನೆ. ಈಗ ನೂರು ರೂಪಾಯಿಗಳಿಗೆ ಒಂದು ಇಂಡಸ್ಟ್ರಿ ಮಾಡುತ್ತಾರೆ ಎಂದು ಇಟ್ಟುಕೊಳ್ಳಿ. ಒಂದುನೂರು ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ ಅದನ್ನು ಟೆಸ್ಟ್ ಮಾಡಬೇಕು ಎನ್ನತಕ್ಕಂಥಾದ್ದು ಇದರ ತತ್ವ. ಪ್ರಾಫಿಟ್ ಅಂಡ್ ಲಾಸ್ ದೃಷ್ಟಿಯಿಂದ ಅದನ್ನು ಟೆಸ್ಟ್ ಮಾಡಿ, ಅದನ್ನು ತೆಗೆದುಕೊಳ್ಳಬೇಕೇ ಬಿಡಬೇಕೇ ಎನ್ನುವುದು. This is called Zero-base budgeting ಲಾಸ್ ಆಗುತ್ತದೆ ಎನ್ನುವ ಅಭಿಪ್ರಾಯ ಬಂದರೆ ಅದನ್ನು ನಿಲ್ಲಿಸಿಬಿಡುವುದು. ಪ್ರಾಫಿಟ್ ಬರುತ್ತದೆ ಎಂದರೆ ಮುಂದುವರಿಸುವುದು, ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟನ್ನು ಪ್ರಸ್ತಾಪ ಮಾಡಿ ೩೦ ಕೋಟಿ ರೂಪಾಯಿಗಳನ್ನು ಉಳಿಸುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. How he is going to save Rs 30 crores, he has not said. He has not given all those details. ಅದನ್ನು ಎಲ್ಲೂ ಕೂಡಾ ಎಕ್ಸ್‌ಪ್ಲೈನ್ ಮಾಡಿಲ್ಲ. ಈ ೩೦ ಕೋಟಿ ರೂಪಾಯಿಗಳ ಹಣವನ್ನು ಜೀರೋ ಬೇಸ್ ಬಜೆಟ್‌ನಲ್ಲಿ ಹೇಗೆ ತರುತ್ತಾರೆ? ಹೇಗೆ ಬರುತ್ತದೆ ? ಇದರ ಬಗ್ಗೆ ಒಂದೆರಡು ಸೆಂಟೆನ್ಸ್

ಹೇಳುವ ಬದಲು ಸಂಪೂರ್ಣ ವಿವರಗಳನ್ನು ಕೊಟ್ಟಿದ್ದರೆ ಸದಸ್ಯರಿಗೆ ಅನುಕೂಲವಾಗುತ್ತಿತ್ತು. ಯಾವ ಯಾವ ಐಟಮ್‌ನಲ್ಲಿ ಇದನ್ನು ತರಬೇಕೆಂದು ವಿಚಾರ ಮಾಡಿದ್ದೀರಿ ಎಂಬ ಮಾತನ್ನು ನೀವು ಹೇಳಿಲ್ಲ. ಈ ದೃಷ್ಟಿಯಿಂದ ಇವತ್ತು ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಕೇಂದ್ರ ಸರಕಾರದವರು ಇನ್‌ಫ್ಲೇಷನ್‌ನ್ನು ತಡೆಗಟ್ಟಬೇಕಾದರೆ ಬ್ಯಾಲೆನ್ಸ್ ಬಜೆಟ್ ಇಟ್ಟಾಗಲೂ ಕೂಡಾ ಇನ್‌ಫ್ಲೇಷನ್ ಇದ್ದೇ ಇರುತ್ತದೆ. ಅಲ್ಲಿ ಡಿಫೆನ್ಸ್ ಮತ್ತೊಂದು ಇರುವುದರಿಂದ ಡೆಫಿಸಿಟ್ ಬಂದೇ ಬರುತ್ತದೆ. ಅವರು ಎಷ್ಟೇ ತೂಕ ಮಾಡಿ ಇಟ್ಟರೂ ಡೆಫಿಸಿಟ್ ಇದ್ದೇ ಇರುತ್ತದೆ. ಆದರೆ ರಾಜ್ಯ ಸರಕಾರ ಮೊದಲೇ ಡಿಫಿಸಿಟ್ ಬಜೆಟ್ ಇಟ್ಟುಬಿಟ್ಟರೆ ಮುಗಿದು ಹೋಯಿತು. ಅದನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಈ ಸಂದರ್ಭದಲ್ಲಿ ರಾಜ್ಯಾಂಗದ ಪ್ರಕಾರ ಇರತಕ್ಕ ಜವಾಬ್ದಾರಿ ಕೇಂದ್ರದ ಮೇಲೆ ಇರುವುದರಿಂದ. ಆ ಜವಾಬ್ದಾರಿಯನ್ನು ಅರಿತು ಅವರು ಕೆಲಸ ಮಾಡಬೇಕಾಗಿರುತ್ತದೆ. ಆದರೆ ನಮ್ಮದು ಹಾಗ ಆಗುವುದಿಲ್ಲ. ನಾವು ಯೋಜನೆ ಮಾಡುವಾಗ ಕೂಡಾ ಟ್ರೈ ಫಿಸ್ಕಲ್ ಪಾಲಿಸಿ ನಾವು ಇಟ್ಟುಕೊಂಡಿರತಕ್ಕ ಪದ್ಧತಿ. ಅದರ ವಿವರಕ್ಕೆ ನಾನು ಹೋಗುವುದಿಲ್ಲ. ಈ ಬಜೆಟ್ ಭಾಷಣ ಓದಿದಾಗ ನಮಗನ್ನಿಸುತ್ತದೆ. ಹಣದುಬ್ಬರಕ್ಕೆ ಒತ್ತು ಕೊಡತಕ್ಕ ಬಜೆಟ್ ಇದಾಗಿರುವುದರಿಂದ naturally the rupee value in Karnataka it starts going down again. ಕನ್‌ಸ್ಯೂಮರ್ ಇಂಡೆಕ್ಸ್ ದೃಷ್ಟಿಯಿಂದ ಕನ್‌ಸ್ಯೂಮರ್ ಪ್ರೈಸಸ್ ದೃಷ್ಟಿಯಿಂದ ಇದನ್ನು ನಾನು ಹೇಳತಕ್ಕದ್ದು. ಎಕನಾಮಿಕ್ ಸರ್ವೆ ಆಫ್ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ನೋಡಿದರೆ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದರ ಅಂಕಿಅಂಶಗಳಿಗೆ ಈ ಸಂದರ್ಭದಲ್ಲಿ ನಾನು ಹೋಗುವುದಿಲ್ಲ. ಇದನ್ನು ಕೃಷ್ಣನ್‌ರವರು ಹಾಗೂ ಬೇರೆಯವರು ಪ್ರಸ್ತಾಪ ಮಾಡಿದರು. ಆಲ್ ಇಂಡಿಯಾ ಲೆವೆಲ್‌ಗೆ ಹೋಲಿಸಿ ನೋಡಿದರೆ ರೂಪಾಯಿಯ ಬೆಲೆ ನಮ್ಮ ರಾಜ್ಯದಲ್ಲಿ ಕಡಿಮೆಯಾಗಿದೆ. ನೀವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ, ಅದು ಸರಿಯಾದ ವಾದ ಆಗುವುದಿಲ್ಲ. ಇತ್ತೀಚೆಗೆ ಪ್ರಕಟವಾಗಿರುವ ವರದಿಯ ಪ್ರಕಾರ Rupee value in Bangalore is 13.21 paise approximately. it is something like that. ರೂಪಾಯಿಯ ಬೆಲೆ ಇದೇ ಇಂಡಿಯಾ ದೇಶದಲ್ಲಿ ಕಡಿಮೆಯಾಗಿರತಕ್ಕ ಜಾಗ ಎಲ್ಲಾದರೂ ಇದ್ದರೆ ಅದು ಬೆಂಗಳೂರು ಮಾತ್ರ. ಬೇರೆ ಭಾಗದಲ್ಲಿ ನಮ್ಮ ಇಂಡಿಯಾ ದೇಶದಲ್ಲಿ ಅದರ ಬೆಲೆ ಜಾಸ್ತಿ ಇದೆ.

ಸುಮಾರು ಪಟ್ಟು ಹಣದುಬ್ಬರ ಜಾಸ್ತಿಯಾಗುತ್ತದೆ. It is the house wives who go to the market and make purchases, they are the better person to assess rather than the Finance Minister. ನಮ್ಮ ಒಂದು ಅಂದಾಜಿನ ಪ್ರಕಾರ ಜಾಸ್ತಿ ಪಟ್ಟು ಹೊರೆಯಾಗುತ್ತದೆ. ಈ ವಿಷಯವನ್ನು ತಾವು ಹಣಕಾಸಿನ ಮಂತ್ರಿಗಳಾಗಿ ತಿಳಿದುಕೊಳ್ಳಬೇಕಾಗಿತ್ತು ಎನ್ನುವ ಅಭಿಪ್ರಾಯವನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಎಕನಾಮಿಕ್ ಡೆವಲಪ್‌ಮೆಂಟ್ ವಿಚಾರದಲ್ಲಿ ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನು ಇರಿಗೇಷನ್ ದೃಷ್ಟಿಯಿಂದ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ನೀವು ಮೇಜರ್ ಇರಿಗೇಷನ್, ಮೀಡಿಯಂ ಇರಿಗೇಷನ್, ಮೈನರ್ ಇರಿಗೇಷನ್ ಅಂಡರ್‌ಗ್ರೌಂಡ್ ವಾಟರ್ ಎಷ್ಟು ಎಕರೆಗಳಿಗೆ ನಾವು ನೀರು ಕೊಡಬೇಕೆನ್ನುವ ಗುರಿಯನ್ನು ಇಟ್ಟುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ದೃಷ್ಟಿಯಲ್ಲಿ ತಾವು ಕೊಟ್ಟಿರತಕ್ಕಂಥ ಹಣ ಏನೇನು ಸಾಲದು. ಕೃಷ್ಣಾ ಬೇಸಿನ್ ಯೋಜನೆಗಾಗಲಿ ಅಥವಾ ಕಾವೇರಿ ಬೇಸಿನ್ ಯೋಜನೆಗಾಗಲಿ ಇತರೆ ಯಾವುದೇ ಯೋಜನೆಗಳಿಗೆ ಆಗಲಿ ಕೊಟ್ಟಿರತಕ್ಕಂಥ ಹಣ ನೋಡಿದರೆ ನನಗನ್ನಿಸುತ್ತದೆ ಹಿಂದೆ ಇದ್ದಂತಹ ಸರ್ಕಾರ ಅಂದರೆ ಕಾಂಗ್ರೆಸ್ (ಐ) ಪಕ್ಷದ ಸರ್ಕಾರಗಳು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೋ ಆ ರೀತಿಯ ಕಾರ್ಯಕ್ರಮಗಳನ್ನು ನೀವು ಹಾಕಿಕೊಂಡಿಲ್ಲ. ಈ ವಿಚಾರವನ್ನು ನಾವು ಈ ಹಿಂದೆಯೂ ಕೂಡ ಪ್ರಸ್ತಾಪ ಮಾಡುತ್ತಿದ್ದೇವೆ. ಈಗಲೂ ಕೂಡ ಪ್ರಸ್ತಾಪ ಮಾಡುತ್ತಿದ್ದೇವೆ. ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಸಚಿವರಾದಂಥ ದೇವೇಗೌಡರು ಉತ್ತರ ಕೊಟ್ಟರು. ಆಗ ಸನ್ಮಾನ್ಯ ಮುಖ್ಯಮಂತ್ರಿಗಳ

ಹೆಲಿಕ್ಯಾಪ್ಟರ್ ಕೆಟ್ಟಿದ್ದರಿಂದ ಆ ದಿವಸ ಅವರು ಬರಲಿಲ್ಲ. ಸನ್ಮಾನ್ಯ ಸದಸ್ಯರಾದಂಥ ವೀರಪ್ಪಮೊಯಿಲಿಯವರು ಆಗ ಬಹಳ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದರು. ಅದನ್ನು ನೋಡಿದರೆ ಇವತ್ತು ತಾವು ಯಾವ ದೃಷ್ಟಿಯಲ್ಲಿಯೂ ಕೂಡ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಹಣ ಖರ್ಚು ಮಾಡಿಲ್ಲ. ಈಗ ಆಂಧ್ರಪ್ರದೇಶದಲ್ಲಿ ತೆಲುಗುಗಂಗಾ ಯೋಜನೆಯನ್ನು ಪ್ರಾರಂಭ ಮಾಡಿ ಕೆಲಸವನ್ನು ಮಾಡುತ್ತಿದ್ದಾರೆ ಅವರು ಯಾವ ದೃಷ್ಟಿಯಿಂದ ತೆಲಗು ಗಂಗಾ ಯೋಜನೆಯನ್ನು ಮಾಡುತ್ತಿದ್ದಾರೆಂದರೆ, ನಮ್ಮ ಕರ್ನಾಟಕ ರಾಜ್ಯ ಕೃಷ್ಣಾ ಯೋಜನೆಯಲ್ಲಿ ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳದಿರುವುದನ್ನು ನೋಡಿಯೇ ಆ ಯೋಜನೆಯನ್ನು ಅವರು ಪ್ರಾರಂಭಿಸಿದ್ದಾರೆ. ಕೃಷ್ಣಾ ಯೋಜನೆಯಿಂದ ಗುಲ್ಬರ್ಗಾ, ಬಿಜಾಪುರ ಇತರೆ ಜಿಲ್ಲೆಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಕೃಷ್ಣಾ ನದಿಯ ನೀರನ್ನು ಉಪಯೋಗಿಸಿಕೊಳ್ಳಲು ನಾವು ಎಷ್ಟು ವೇಗವಾಗಿ ಕೆಲಸ ಪ್ರಾರಂಭ ಮಾಡಬೇಕಾಗಿತ್ತೋ ಅಷ್ಟು ವೇಗವಾಗಿ ಕೆಲಸ ಪ್ರಾರಂಭ ಮಾಡಲಿಲ್ಲ. ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಆಸಕ್ತಿ ತೋರಿಸಲಿಲ್ಲ. ಆ ಶಕ್ತಿ ನಿಮ್ಮಲ್ಲಿ ಬರಲಿಲ್ಲ. ನಾವು ಇವತ್ತು ಕರ್ನಾಟಕ ರಾಜ್ಯದ ಜನತೆಯ ಹಿತವನ್ನು ಕಾಪಾಡುವುದಕ್ಕೆ ಆಗಲಿಲ್ಲ. ನೀರಾವರಿ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಆಗಲಿಲ್ಲ. ಈ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ನಾವು ತೆಲಗಂಗಂಗಾ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ಕೃಷ್ಣಾ ಬೇಸಿನ್‌ಗೆ ಹೆಚ್ಚು ಹಣವನ್ನು ಒದಗಿಸಿಕೊಟ್ಟು ನಮ್ಮ ಪಾಲಿನ ನೀರನ್ನು ನಾವು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ರಾಜ್ಯದ ಹಿತಾಸಕ್ತಿಗೆ ಧಕ್ಕೆಯುಂಟಾಗುತ್ತದೆ. ರಾಜ್ಯದ ಹಿತಾಸಕ್ತಿಗೆ ಕೊಡಲಿಪೆಟ್ಟು ಹಾಕಿದಂತಾಗುತ್ತದೆ.

ಇನ್ನು ಈ ಆಯವ್ಯಯ ಪತ್ರದಲ್ಲಿ ಟ್ಯಾಕ್ಸನ್ನು ಜಾಸ್ತಿ ಹಾಕಿದ್ದೀರಿ ಎಂದು ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ತಾವು ಸಾಮಾನ್ಯ ಜನ ಉಪಯೋಗ ಮಾಡುವಂಥ ಟೀ ಕಾಫಿ, ಸೋಪು ಇತ್ಯಾದಿ ವಸ್ತುಗಳ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿದ್ದೀರಿ. ರಾಜ್ಯದ ಜನ ಬರಗಾಲ ಪರಿಸ್ಥಿತಿಯಿಂದ ತತ್ತರಿಸಿ ಹೋಗಿರುವಾಗ ತಾವು ಈ ತೆರಿಗೆಯನ್ನು ಹಾಕಿದರೆ ಅವರು ಹೇಗೆ ಜೀವನ ಮಾಡಬೇಕು ? ತಾವು ಹಾಕಿರತಕ್ಕಂಥ ತೆರಿಗೆಯನ್ನು ಭರಿಸುವ ಶಕ್ತಿ ಸಾಮಾನ್ಯ ಜನರಿಗೆ ಇವತ್ತು ಇದೆಯೇ ? ಖಂಡಿತವಾಗಿ ಆ ಶಕ್ತಿ ಅವನಿಗೆ ಇಲ್ಲವೆಂದು ನಾವು ಹೇಳಬಹುದು. ನನ್ನ ದೃಷ್ಟಿಯಲ್ಲಿ ಲಗ್ಝುರಿ ಲೈಫ್ ಲೀಡ್ ಮಾಡುವವರಿಗೆ ಬೇಕಾದರೆ ತಾವು ತೆರಿಗೆಯನ್ನು ಹಾಕಿ. ಬೇಡವೆಂದು ನಾನು ಹೇಳುವುದಿಲ್ಲ. ಯಾರು ಲಗ್ಝುರಿ ಲೈಫ್ ಲೀಡ್ ಮಾಡುತ್ತಾರೋ ಅವರು ತಮ್ಮ ಮನೆಗಳಲ್ಲಿ ಟಿ. ವಿ. ಸೋಫಾ ಮುಂತಾದವುಗಳನ್ನು ಇಟ್ಟುಕೊಂಡಿರುತ್ತಾರೆ. ಅವರ ಮೇಲೆ ಬೇಕಾದರೆ ತೆರಿಗೆಯನ್ನು ಹಾಕಿ ಎಂದು ನಾವು ಪದೇ ಪದೇ ಹೇಳುತ್ತಾ ಬಂದಿದ್ದೇವೆ. ಉಳ್ಳವರಿಗೆ ತೆರಿಗೆಯನ್ನು ಹಾಕಿ. ಇಲ್ಲದವರು ತೆರಿಗೆಯನ್ನು ಕೊಡುವುದಕ್ಕಾಗುವುದಿಲ್ಲ. ನೀವು ತೆರಿಗೆಗಳನ್ನು ಉದ್ದಿಮೆದಾರರಿಗೆ ಅಥವಾ ವ್ಯಾಪಾರಗಾರರಿಗೆ ಹಾಕುತ್ತೇವೆ ಎಂದು ತಿಳಿದುಕೊಂಡಿರಬಹುದು. ಈ ಒಟ್ಟು ತೆರಿಗೆಯನ್ನೆಲ್ಲಾ ಸಾಮಾನ್ಯ ಕನ್‌ಸ್ಯೂಮರ್‍ಸೇ ಕೊಡಬೇಕಾಗುತ್ತದೆ. ಬಳಕೆದಾರರ ಮೇಲೆಯೇ ನಿಮ್ಮ ತೆರಿಗೆ ಭಾರವೆಲ್ಲಾ ಬೀಳುತ್ತದೆ. ಇವೊತ್ತಿನ ದಿವಸಗಳಲ್ಲಿ ಜನರು ಬರಗಾಲಕ್ಕೆ ತುತ್ತಾಗಿ ತತ್ತರಿಸಿ ಹೋಗಿದ್ದಾರೆ ಎಂದು ತಾವೇ ಹೇಳುತ್ತೀರಿ ಅಂಥವರ ಮೇಲೆ ಟ್ಯಾಕ್ಸ್‌ಗಳನ್ನು ಹಾಕಿ ವಸೂಲಿ ಮಾಡುತ್ತೀರಿ. ಟ್ಯಾಕ್ಸ್ ಹಾಕದೇ ಹೋದರೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ನೀವು ಯಾವ ಯಾವ ಐಟಮ್ಸ್ ಮೇಲೆ ತೆರಿಗೆಗಳನ್ನು ಹಾಕಿದ್ದೀರೆಂದು ನಾನು ಹೇಳಲೇಬೇಕಾಗುತ್ತದೆ ಡೀಸಲ್ ಮೇಲೆ ೧೬ ಪರ್‌ಸೆಂಟ್ ಇದ್ದದ್ದನ್ನು ೧೮ ಪರ್‌ಸೆಂಟ್ ಮಾಡಿದ್ದೀರಿ. ಡೀಸಲ್‌ನ್ನು ರೈತ ಕೊಂಡುಕೊಳ್ಳುವುದಿಲ್ಲವೆಂದು ತಾವು ಹೇಳಬಹುದು. ಆದರೆ, ಲಾರಿಯವರು ಬಸ್‌ನವರು ಡೀಸಲ್‌ನ್ನು ಕೊಂಡುಕೊಳ್ಳುತ್ತಾರೆ. ಇವರಿಗೆ ಬೆಲೆ ಜಾಸ್ತಿ ಆದರೆ ಗೂಡ್ಸ್ ಸಾಗಿಸುವುದಕ್ಕೆ ಹೆಚ್ಚು ಬೆಲೆಯನ್ನು ಕೇಳುತ್ತಾರೆ. ಗೂಡ್ಸ್ ಅಥವಾ ರೈತ ತಾನು ಬೆಳೆದ ಮಾಲನ್ನು ಸಾಗಿಸುವುದಕ್ಕೆ ಹೆಚ್ಚು ಬೆಲೆಯನ್ನು ಕೊಡಬೇಕಾಗುತ್ತದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಪಂಪು ಸೆಟ್ಟುಗಳ ಮೇಲೆ, ಸಿಮೆಂಟಿನ ಮೇಲೆ, ರಸಗೊಬ್ಬರ, ಹತ್ತಿ ಬೀಜ, ಖಾದ್ಯ ತೈಲ, ಅಡಿಕೆ, ಕಾಫಿ, ಟೀ, ಎಲ್ಲದಕ್ಕೂ ತೆರಿಗೆಯನ್ನು ಹೆಚ್ಚಿಗೆ ಮಾಡಿದ್ದೀರಿ. ರೇಷ್ಮೆ ವಸ್ತ್ರಕ್ಕೆ ಜಾಸ್ತಿ ಮಾಡಿದ್ದೀರಿ, ಇದಕ್ಕೆ ಬೇಕಾದರೆ ಮಾಡಿ, ರೇಷ್ಮೇ ವಸ್ತ್ರವನ್ನು ದೊಡ್ಡ ಸಾಹುಕಾರ ಜನಗಳು ಮಾತ್ರ ಇಟ್ಟುಕೊಳ್ಳುತ್ತಾರೆ. ಆಮೇಲೆ ಎಲೆಕ್ಟ್ರಾನಿಕ್ಸ್ ಗೂಡ್ಸ್ ಮೇಲೆ ಹಾಕಿದ್ದೀರಿ.

ಟೆಲಿವಿಷನ್ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿದ್ದೀರಿ. ಈಗಿನ ಕಾಲದಲ್ಲಿ ಟೆಲಿವಿಷನ್ ಇಟ್ಟುಕೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ. ಇವುಗಳನ್ನು ಬಡವರೂ ಸಹ ಕೊಂಡುಕೊಳ್ಳಬೇಕೆಂದು ಇಷ್ಟಪಡುತ್ತಾರೆ. ಸಮಾಜದಲ್ಲಿ ಟಿ. ವಿ. ಇಟ್ಟುಕೊಳ್ಳುವುದು ಲಕ್ಸುರಿಯಾಗುವುದಿಲ್ಲ. ಅದರ ಮೇಲೂ ಶೇಕಡ ಎರಡರಷ್ಟು ಟ್ಯಾಕ್ಸ್ ಹಾಕಿದ್ದೀರಿ. ಡಾಲ್ಡಾ ಮೇಲೆ ತೆರಿಗೆಯನ್ನು ಹಾಕಿದ್ದೀರಿ. ಬಣ್ಣಗಳ ಮೇಲೆ ತೆರಿಗೆಯನ್ನು ಹಾಕಿದ್ದೀರಿ. ಇದರಿಂದ ಒಬ್ಬ ಬಡವ ಒಂದು ಸೂರನ್ನು ಮಾಡಿಕೊಂಡು ಮನೆಯ ಬಾಗಿಲಿಗೆ ಬಣ್ಣ ಹೊಡೆಯುವುದಕ್ಕೂ ತೊಂದರೆಯಾಗುತ್ತದೆ. ಅಸ್‌ಬೆಸ್ಟಾಸ್ ಶೀಟ್‌ಗಳ ಬೆಲೆಗಳನ್ನೂ ಜಾಸ್ತಿಯಾಗುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೀರಿ. ಬಡವನು ತನ್ನ ತಲೆಯ ಮೇಲೆ ಒಂದು ಸೂರನ್ನು ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲದಂತಾಗಿದೆ. ಬಣ್ಣ ಬಳಿದುಕೊಳ್ಳುವುದಕ್ಕೂ ಬಡವನಿಗೆ ಅವಕಾಶವನ್ನು ತಾವು ಕೊಟ್ಟಿಲ್ಲ. ಹೆಂಡ, ಸಾರಾಯಿಗಳ ಮೇಲೆ ಬೇಕಾದರೆ ಟ್ಯಾಕ್ಸ್‌ಗಳನ್ನು ಹಾಕಬಹುದು. ಆದರೆ ನೀವು ಈಗ ಹಾಕಿರುವ ಟ್ಯಾಕ್ಸ್‌ನಿಂದ ಬಡವನು ಕುಡಿಯುವ ಹೆಂಡ ಮತ್ತು ಸಾರಾಯಿ ಬೆಲೆ ಹೆಚ್ಚು ಆಗುತ್ತದೆ. ಕಾಸ್ಟಲಿ, ಡ್ರಿಂಕ್ಸ್‌ಗೆ ಬೇಕಾದರೆ ನಿಮಗೆ ಇಷ್ಟ ಬಂದಷ್ಟು ಹೆಚ್ಚು ತೆರಿಗೆಯನ್ನು ಹಾಕಿ. ಅದಕ್ಕೆ ನಾನು ಬೇಡ ಎನ್ನುವುದಿಲ್ಲ. ಹೆಂಡ, ಸಾರಾಯಿಯ ಬೆಲೆಯನ್ನು ಹೆಚ್ಚು ಮಾಡಿದರೆ ಭಟ್ಟಿ ಸಾರಾಯಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಬಡವರು ಉಪಯೋಗಿಸುವ ಮಾಧ್ಯಮದ ಮೇಲೆ ಹೆಚ್ಚು ತೆರಿಗೆಯನ್ನು ವಿಧಿಸುವುದು ಸರಿಯಲ್ಲ. ಆಮೇಲೆ ತುಪ್ಪದ ಮೇಲೆ ಎರಡು ಪರ್‌ಸೆಂಟ್ ತೆರಿಗೆಯನ್ನು ಕಡಿಮೆ ಮಾಡಿದ್ದೀರಿ. ಯಾವ ಬಡವ ಸ್ವಾಮಿ ತುಪ್ಪವನ್ನು ಉಪಯೋಗಿಸುತ್ತಾನೆ. ಶ್ರೀಮಂತರೇ ಹೆಚ್ಚಾಗಿ ತುಪ್ಪವನ್ನು ಉಪಯೋಗಿಸುವವರು. ಅವರು ತುಪ್ಪವನ್ನು ಹೆಚ್ಚಾಗಿ ಉಪಯೋಗಿಸಲಿ ಎಂದು ತೆರಿಗೆಯನ್ನು ಕಡಿಮೆ ಮಾಡಿದ್ದೀರಾ ? ಬೆಣ್ಣೆಗೂ ಸಹ ತೆರಿಗೆಯನ್ನು ಕಡಿಮೆ ಮಾಡಿದ್ದೀರಿ. ಬೆಣ್ಣೆ ಮತ್ತು ತುಪ್ಪದ ತೆರಿಗೆಯನ್ನು ಇಳಿಸಿರುವುದರಿಂದ ಬಡವನಿಗೆ ಏನೂ ಅನುಕೂಲವಾಗುವುದಿಲ್ಲ. ಇವೊತ್ತು ಬಡವನಿಗೆ ಅನ್ನ ಸಿಗದಂಥ ಪರಿಸ್ಥಿತಿ ಇದೆ. ಬಿಜಾಪುರ, ಧಾರವಾಡ ಜಿಲ್ಲೆಗಳಿಂದ ಕೂಲಿಜನರು ಕಾಫಿ ಪ್ಲಾಂಟೇಷನ್ ಏರಿಯಾಗಳಿಗೆ ಮತ್ತು ಮಂಗಳೂರು ಕಡೆ ಕೆಲಸಕ್ಕೆ ಹೊರಟು ಹೋಗಿದ್ದಾರೆ. ನಮ್ಮ ತಾಲ್ಲೂಕಿನಿಂದಲೂ ಅನೇಕ ಜನ ಬೇರೆ ಕಡೆ ಕೆಲಸ ಹುಡುಕಿಕೊಂಡು ಹೋಗಿದ್ದಾರೆ. ಇಂಥ ಪರಿಸ್ಥಿತಿ ಬಡವನಿಗೆ ಇರುವಾಗ ನೀವು ಬೆಣ್ಣೆ ತುಪ್ಪದ ಬೆಲೆಯನ್ನು ಇಳಿಸಿದ್ದೀರಿ. ಇದು ಸರಿಯಾದುದಲ್ಲವೆಂದು ನಾನು ಹೇಳಬೇಕಾಗುತ್ತದೆ. ಆಮೇಲೆ ಡಾಲ್ಡ, ಸೋಪು, ಶಾಂಪುಗಳಿಗೂ ತೆರಿಗೆಗಳನ್ನು ಹಾಕಿದ್ದೀರಿ. ನಾವು ಸಣ್ಣವರಿದ್ದಾಗ ಶಾಂಪು ಎಂದರೆ ಏನು ಎಂದು ನಮಗೆ ಗೊತ್ತಿರಲಿಲ್ಲ. ಈಗೀಗ ಶಾಂಪು ಹಳ್ಳಿಗಳ ಕಡೆಗೂ ಹೋಗುತ್ತಿದೆ, ಅವರೂ ಸಹ ಶಾಂಪುವನ್ನು ಉಪಯೋಗಿಸುತ್ತಿದ್ದಾರೆ. ಪೇಟೆ ಜನರು ಮಾತ್ರ ಶಾಂಪುವನ್ನು ಉಪಯೋಗಿಸಬೇಕೋ ? ಹಳ್ಳಿಯ ಜನರು ಉಪಯೋಗಿಸಬಾರದೇ ? ಅವರು ಸಹ ಉಪಯೋಗಿಸಲಿ. ಈ ಶಾಂಪುವಿನ ಮೇಲೂ ತೆರಿಗೆಯನ್ನು ಹಾಕಿದ್ದೀರಿ.

ಅಧ್ಯಕ್ಷರು.—ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ೫೦ ಮಿನಿಟ್ ಆಯಿತು, ಇನ್ನು ನಾಲ್ಕೈದು ಮಿನಿಟ್‌ನಲ್ಲಿ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಈ ಟಾಯಿಲೆಟ್ ಸೋಪು, ಶ್ಯಾಂಪೂ, ಇದರ ಮೇಲೆ ತೆರಿಗೆಯನ್ನು ಏಕೆ ಹಾಕಬೇಕು ಎನ್ನತಕ್ಕಂಥಾದ್ದು ಮತ್ತು ತೆರಿಗೆ ಏರಿಸಿರತಕ್ಕಂಥವು ಯಾವುವು ಎನ್ನತಕ್ಕಂಥಾದ್ದರ ಬಗ್ಗೆ ನಾನು ಮತ್ತೊಮ್ಮೆ ಹೇಳುವುದಕ್ಕೆ ಹೋಗುವುದಿಲ್ಲ. ಈ ರೀತಿಯಾಗಿ ನೀವು ತೆರಿಗೆಯನ್ನು ಹಾಕಿರತಕ್ಕಂಥ ವಿಧಾನ ಇದೆಯಲ್ಲ ಅದನ್ನು ಎಂದೂ ಯಾರೂ ಮೆಚ್ಚತಕ್ಕಂಥಾದ್ದು ಅಲ್ಲ ಎಂದು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರಲೇ ಬೇಕಾಗುತ್ತದೆ.

ನಾನು ಮತ್ತೆ ಕೆಲವೊಂದು ವಿಚಾರಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ ತಮ್ಮ ಬಜೆಟ್ ಭಾಷಣದಲ್ಲಿ ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ. ಹಿಂದೆ ತಾವು ೧೯೮೩–೮೪ನೇ ಸಾಲಿನಲ್ಲಿ, ಕ್ಯಾಪಿಟೇಷನ್ ಫೀ ಎಲ್ಲಾ ರದ್ದು ಮಾಡಿ, ಕಾಲೇಜು-ಗೀಲೇಜು ಯಾವುದನ್ನೂ ಕೊಡುವುದಿಲ್ಲ ಎಂಬ ಮಾತನ್ನು ಹೇಳಿದ್ದೀರಿ. ಏಕೆಂದರೆ ಅನುದಾನ ಇತ್ಯಾದಿಯಾಗಿ ಅನೇಕ ರೀತಿಯಲ್ಲಿ ನಾವು ಇವೊತ್ತು ಕೊಡುತ್ತಾ ಇದ್ದೇವೆ. ಸಹಾಯವನ್ನು ನಾವು ರಾಜ್ಯ ಸರಕಾರದವರು ಮಾಡುತ್ತಾ ಇದ್ದೇವೆ. ಏಕೆಂದರೆ ಬೌರಿಂಗ್ ಆಸ್ಪತ್ರೆಯನ್ನು ಇವೊತ್ತು ಪ್ರೈವೇಟ್ ಮೆಡಿಕಲ್ ಕಾಲೇಜಿನವರ ಉಪಯೋಗಕ್ಕೆ ಕೊಟ್ಟಿದ್ದೇವೆ. ವಿಕ್ಟೋರಿಯ ಆಸ್ಪತ್ರೆಯನ್ನು ಕೊಡುತ್ತಾ ಇದ್ದೇವೆ. ಮಲ್ಲೇಶ್ವರಂ

ಆಸ್ಪತ್ರೆಯೂ ಕೂಡ ಕೊಡುವ ಯೋಚನೆ ಇರಬಹುದು. ಹೀಗೆ ಒಂದು ಆಸ್ಪತ್ರೆಯೂ ಕೂಡ ನಮಗೆ ಇಲ್ಲವಾಗಿದೆ. ಹೀಗೆ ಹಲವಾರು ಸವಲತ್ತುಗಳನ್ನು ನಾವು ಪ್ರೈವೇಟ್ ಮೆಡಿಕಲ್ ಕಾಲೇಜಿನವರಿಗೆ ಕೊಟ್ಟುಬಿಟ್ಟಿದ್ದೇವೆ. ಬೇರೆ ರೀತಿಯಲ್ಲಿಯೂ ಸಹಾಯ ಸೌಲಭ್ಯಗಳನ್ನು ಕೊಟ್ಟಿದ್ದೇವೆ. ಇಷ್ಟೇ ಅಲ್ಲದೆ ನೀವು ಜಿಲ್ಲೆಗೆ ಒಂದೊಂದು ಮೆಡಿಕಲ್ ಕಾಲೇಜನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಇದೆಂತಹವಾದ? ಯಾವ ದೇಶದಲ್ಲಿ ಕಡು ಬಡವರು ಇದ್ದಾರೋ, ಇವೊತ್ತು ಅವರು ಅಲ್ಲಿ ಹೋಗಿ ಸೇರುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೊಡಬೇಕೆನ್ನುವಂತಹ ಪರಿಸ್ಥಿತಿ ಇದೆಯೋ, ಅದನ್ನು ತೊಲಗಿಸುತ್ತೇವೆ, ಇತ್ಯಾದಿಯಾಗಿ ಹೇಳಿ ಜನರಿಂದ ಮತಗಳನ್ನು ಪಡೆದು ಬಂದಿರತಕ್ಕಂಥ ನೀವು ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನು ಇನ್ನೂ ಕೂಡ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಆಡಿ, ನೀವು ನಿಮ್ಮ ಮಾತಿಗೆ ವಿರುದ್ಧವಾಗಿ ಹೋಗಿ ಜನತೆಗೆ ಕೊಟ್ಟಿರತಕ್ಕಂಥ ವಚನಕ್ಕೆ ಭ್ರಷ್ಟರಾಗಿ ಜನತೆಯ ಎದುರು ವಚನ ಭ್ರಷ್ಟರಾಗಿದ್ದೀರಿ ಎಂದು ನಾನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ ಪ್ರೈಮರಿ ಸ್ಕೂಲ್‌ಗಳ ತರಹದಲ್ಲಿ ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಕೊಡುತ್ತಾ ಹೋಗಿದ್ದೀರಿ Why should I confine myself to Medical College? ಇನ್ನು ನರ್ಸರಿ ಸ್ಕೂಲ್‌ಗಳ ವಿಚಾರದಲ್ಲಿ ಕೂಡ ತಾವುಗಳು ಬೇಕಾದಷ್ಟು ಪ್ರಯತ್ನವನ್ನು ಪಟ್ಟಿದ್ದೀರಿ. ಅವುಗಳ ಬಗ್ಗೆ ನಿಲ್ಲಿಸಬೇಕೆಂದು ಭಾಷಣವನ್ನು ಕೂಡ ಮಾಡುತ್ತಾ ಇದ್ದೀರಿ. ಆದರೆ ನಿಮ್ಮ ಕೈಯಲ್ಲಿ ಆ ಕೆಲಸವನ್ನು ಮಾಡುವುದಕ್ಕೂ ಕೂಡ ಆಗಲಿಲ್ಲ. ನಿಮಗೆ ಕ್ಯಾಪಿಟೇಷನ್ ಫೀಯನ್ನು ನಿಲ್ಲಿಸುವುದಕ್ಕೆ ಕೂಡ ಆಗಲಿಲ್ಲ ಆ ಕ್ಯಾಪಿಟೇಷನ್ ಪದ್ಧತಿಯು ಇನ್ನೂ ಕೂಡ ತನ್ನ ವಿಷಜ್ವಾಲೆಯ ರೀತಿ ನಾಲಿಗೆ ಚಾಚಿ, ಸಮಾಜದಲ್ಲಿರತಕ್ಕಂಥ ಕಡು ಬಡವರನ್ನು ಆಹುತಿ ತೆಗೆದುಕೊಳ್ಳುವುದಕ್ಕೆ, ಸಂಪೂರ್ಣವಾಗಿ ಅವರನ್ನು ನುಂಗಿ ಹಾಕುವುದಕ್ಕೆ ನೀವೇ ಅವಕಾಶ ಮಾಡಿ ಇಟ್ಟು, ಇದರಲ್ಲಿ ಏನೇನು ದುರ್ವ್ಯವಹಾರ ನಡೆದಿದೆ ಎಂಬ ಮಾತನ್ನು ಒಂದೆಯೂ ಕೂಡ ಹೇಳಿದ್ದೇವೆ. ಮತ್ತೆ ಪುನಃ ಅದಕ್ಕೆ ಅವಕಾಶ ಮಾಡಿಕೊಡತಕ್ಕಂಥ ಮಾತನ್ನು ನೀವು ಇಲ್ಲಿ ಆಡಿದ್ದೀರಿ. ಕ್ಯಾಪಿಟೇಷನ್ ಫೀ ರದ್ದು ಮಾಡುವುದಕ್ಕೆ ನಿಮ್ಮ ಹಣೆಬರಹದಲ್ಲಿ ಆಗಲಿಲ್ಲ.

"ಆಮೇಲೆ ಮನೆ ಬಾಗಿಲಿಗೇ ಬೀಜ ಗೊಬ್ಬರ" ಎಂತೆಂಥ ಭಾಷಣಗಳು ಬಂದವು? ನಿಮ್ಮ ಬಜೆಟ್ ಭಾಷಣದಲ್ಲಿ ಇವೊತ್ತು ಸಮಾಜದಲ್ಲಿರತಕ್ಕಂಥ ಜನಸಂಖ್ಯೆಯ ಪೈಕಿ, ಶೇಕಡಾ ೭೭ರಷ್ಟು ಜನರು ವ್ಯವಸಾಯವನ್ನು ಮಾಡಿಕೊಂಡು ಜೀವನ ಮಾಡತಕ್ಕಂಥವರು ಇದ್ದಾರೆ. ಆದರೆ ಇವೊತ್ತು ಏನಾಗಿದೆ? ಸಂಪೂರ್ಣವಾಗಿ ಆ ರೈತರ ಬಗ್ಗೆ ಯಾವುದೇ ಒಂದು ಸಹಾಯವನ್ನು ರಿಯಾಯಿತಿಯನ್ನು ಕೊಡದೇ ಬಜೆಟ್ ಭಾಷಣದಲ್ಲಿ ಸಂಪೂರ್ಣವಾಗಿ ಅವರನ್ನು ಕೈಬಿಟ್ಟಿದ್ದೀರಿ. ರೈತರ ಸಂಘವನ್ನು ಕೂಡ ಒಡೆದು ಹಾಕಿದ್ದೀರಿ. ಆ ಪ್ರಶ್ನೆ ಬೇರೆ. ಇನ್ನು ಸಹಕಾರಿ ಸಂಘಗಳ ಸಾಲದ ಬಗ್ಗೆ ಪದೇ ಪದೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಕಳೆದ ಸಾರಿ ಪ್ರಸ್ತಾಪ ಮಾಡಿದ್ದಾಗ, ಇವರ ಬಗ್ಗೆ ಮಾನ್ಯ ಜಾಲಪ್ಪನವರು ಉತ್ತರವನ್ನು ಕೊಟ್ಟಿದ್ದರು ಈಗಾಗಲೇ ಜನರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು. ಹರಾಜಿಗೆ ಹಾಕಿದ್ದೀರಿ. ಪಂಚಾಯತ್‌ಗಳಲ್ಲಿ. ಚಾವಡಿಗಳಲ್ಲಿ. ಸೊಸೈಟಿಯ ಬಾಗಿಲುಗಳಲ್ಲಿ ನೋಟೀಸ್ ಹಚ್ಚಿಬಿಟ್ಟಿದ್ದೀರಿ. ಹೀಗೆ ಮಾಡಿದರೆ ರೈತರ ಗತಿ ಏನಾಗಬೇಕು ?

ಶ್ರೀ ಬಿ. ಸ್ವಾಮಿರಾವ್.—ಜನತ ಪಕ್ಷದವರದ್ದು ಯಾರದ್ದು ನೋಟೀಸ್‌ನಲ್ಲಿ ಇಲ್ಲ.

ಶ್ರೀ ಎಸ್ ಬಂಗಾರಪ್ಪ.—ಹಾಗೆ ಮಾಡಿದರೆ ನಾಳೆ ಇವರೂ ಉಳಿಯುವುದಿಲ್ಲ. ಇದು ಪಕ್ಷಕ್ಕೆ ಸಂಬಂಧಪಟ್ಟಿದ್ದಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸ್ವಾಮಿರಾವ್‌ರವರು ಸಹಕಾರಿ ಸಂಘಗಳಲ್ಲಿ ಎಷ್ಟು ಡಿಪಾಸಿಟ್‌ನ್ನು ಇಟ್ಟಿದ್ದಾರೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರು ಅಲ್ಲಿ ಡಿಪಾಸಿಟ್ ಇಡುತ್ತಾರೆ, ಅವರಿಗೆ ಎನ್‌ಕರೇಜ್‌ಮೆಂಟ್ ಇಲ್ಲ... ಸಹಕಾರಿ ಸಂಘಗಳಲ್ಲಿ ಯಾರು ಡಿಪಾಸಿಟ್ ಇಟ್ಟಿದ್ದಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಹಿಂದೆ ಅಡಿಶನಲ್ ಸೆಕ್ರೆಟರಿಯವರಾಗಿದ್ದ, ಪಿ. ಆರ್. ನಾಯಕ್‌ರವರು ಮತ್ತು ದುಬಾಷಿಯವರು ಬಹುಶಃ ದುಬಾಷಿಯವರು ಈಗ ಕೇಂದ್ರ ಸರಕಾರದ ಸೇವೆಯಲ್ಲಿ ಇರಬೇಕು, ಅವರ ಕಾಲದಲ್ಲಿ, ಕೋ-ಆಪರೇಟಿವ್ ಮತ್ತು ಅಪೆಕ್ಸ್ ಬ್ಯಾಂಕ್‌ಗಳು ಏನಿವೆ ಅವುಗಳಿಗೆ ಎನ್‌ಕರೇಜ್ ಮಾಡಬೇಕೆಂದು ಹೇಳಿ ಎಲ್ಲರಿಗೂ ಒತ್ತಾಯ ಮಾಡುತ್ತಿದ್ದರು ಮತ್ತು ಆದರಲ್ಲಿ ಅವರು ಯಶಸ್ವಿಯಾಗಿದ್ದರು ಜನರಿಗಷ್ಟೇ ಅಲ್ಲದೆ ಸಚಿವರುಗಳು ಕೂಡ ಅಲ್ಲಿಯೇ ಡಿಪಾಸಿಟ್ ಇಡಬೇಕೆಂದು ಹೇಳಿದ್ದರು. ಈಗ ನಿಮ್ಮ ಅಕೌಂಟ್ ಅಲ್ಲಿದ್ದರೂ ಡಿಪಾಸಿಟ್ ಬೇರೆ ಕಡೆಗಳಲ್ಲಿ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುವುದು ಇಷ್ಟೇ, ನಾಳೆ ಬೇರೆ ಒಂದು ಪರಿಸ್ಥಿತಿ ಉದ್ಭವವಾಗುವುದಕ್ಕೆ ಅವಕಾಶವನ್ನು ನೀವುಗಳು ಮಾಡಿಕೊಡಬೇಡಿ. ಈ ವಿಷಯದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಹಾಗೂ ಎಚ್ಚರಿಕೆಯನ್ನು ಕೂಡ ಕೊಡಬಯಸುತ್ತೇನೆ. ಯಾವ ಆಸ್ತಿಗಳು ಪ್ರಾಥಮಿಕ ಸಹಕಾರಿ ಸಂಘಗಳಲ್ಲಾಗಲೀ, ಪಿ.ಎಲ್.ಡಿ. ಬ್ಯಾಂಕ್‌ಗಳಲ್ಲಾಗಲೀ ಅಥವಾ ಇತರ ಕಡೆಗಳಲ್ಲಿಯೋ ಆಗಲಿ ಇರುವ ಸಾಲಗಳ ಬಗ್ಗೆ ಹರಾಜಿಗೆ ಏನು ಹಾಕಿದ್ದೀರಿ, ಆ ಜನಗಳು ಕೂಲಿಗಾಗಿ, ಹೊಟ್ಟೆಪಾಡಿಗಾಗಿ ಬೇರೆ ಊರುಗಳಿಗೆ ಹೋಗಿದ್ದಾರೆ.ಅಂತ ವರು ಇಲ್ಲದಿದ್ದಾಗ ಅಂತಹವರ ಆಸ್ತಿಯನ್ನು ನೀವು ಹರಾಜಿಗೆ ಹಾಕಿದರೆ ಹೇಗೆ?

ಊರಿನಲ್ಲಿ ಅವರ್ಯಾರೂ ಇಲ್ಲ. ಅವರ ಆಸ್ತಿ ಹರಾಜು ಮಾಡುತ್ತೇವೆಂದರೆ ಇನ್ನೇನಾಗುತ್ತದ? ಯಾರಾದರೂ ಹರಾಜಿನಲ್ಲಿ ಭಾಗವಹಿಸದಿದ್ದರೆ ಅಂಥ ಆಸ್ತಿಗಳನ್ನು ಡಿ.ಸಿ. ಯವರೇ ತೆಗೆದು ಕೊಳ್ಳುತ್ತಾರೆಂದು ಬೇರೆ ಅಮೆಂಡ್‌ಮೆಂಟ್ ಮಾಡಿಬಿಟ್ಟಿದ್ದೀರಿ. ಈ ಪರಿಸ್ಥಿತಿಯ ದುರ್ಲಾಭ ಪಡೆದು ಡಿ.ಸಿ. ಮುಂದೆ ಹೆಜ್ಜೆ ಇಟ್ಟರೆ ಕಿರೀಟ ಇಲ್ಲ, ಏನೂ ಇಲ್ಲ ಆದರೂ ನಾನೇ ರಾಜ ಎಂದ ಹಾಗೆ ಅವರ ವರ್ತನೆಯಾಗುತ್ತದೆ. ನಿಮಗೇನಾದರೂ ರೈತರ ಬಗ್ಗೆ ಅನುಕಂಪ ಇದೆಯೋ? ರೈತರ ಮಾಸ್ತಿಗಳನ್ನು ಹರಾಜು ಹಾಕುವ ಪ್ರಯತ್ನವನ್ನು ಮೊದಲು ಕೈಬಿಡಿ ಎಂದು ನಿಮ್ಮ ಅಧಿಕಾರಿಗಳಿಗೆ ಮೊದಲು ಆದೇಶ ಕೊಡಿ ನೀರಾವರಿ ಕ್ಷೇತ್ರ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲ ಬೇಕಾದರೆ ನೀವು ಹರಾಜು ಹಾಕಿಕೊಳ್ಳಿ ನಾವು ಅಬ್ಜೆಕ್ಟ್ ಮಾಡುವುದಿಲ್ಲ, ಆದರೆ ಮುಂಡರ್ಗಿ, ಗದುಗಿನ ಕೆಲವು ಭಾಗಗಳು ಬರಗಾಲಕ್ಕೆ ತುತ್ತಾಗಿವೆ, ಅಧ್ಯಕ್ಷರೇ, ನಿಮ್ಮ ತಾಲ್ಲೂಕು ನನ್ನ ತಾಲ್ಲೂಕು ಬರುತ್ತವೆ. ನಾನು ಹಿಂದೆಂದೂ ನನ್ನ ತಾಲ್ಲೂಕಿನ ಆ ಸ್ಥಿತಿ ನೋಡಿರಲಿಲ್ಲ ಮಲೆನಾಡು ಎಂದರೆ ಸದಾ ಹಸಿರು ಎನ್ನುವುದು ಹೊರಟುಹೋಯಿತು. ಅಲ್ಲಿ ನಾಟಿ ಮಾಡಿದ್ದ ಬತ್ತದ ಸಸಿಗಳೆಲ್ಲಾ ಒಣಗಿಹೋಗಿಬಿಟ್ಟವು. ಇಷ್ಟೊಂದು ಮಳೆ ಕಡಿಮೆಯಿರುವಾಗ ನೀವು ಭೀಕರ ಕಾರ್ಯಕ್ರಮ ಹಾಕಿಕೊಂಡು ಆಸ್ತಿಯನ್ನು ಹರಾಜು ಹಾಕುತ್ತೇವೆಂಬ ಕಾರ್ಯಕ್ರಮ ಹಾಕಿಕೊಂಡರೆ ಅರ್ಥ ಏನು ಬರುತ್ತದೆ? ಈಗಲಾದರೂ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟು ಮಳೆ ಬೆಳೆ ಚೆನ್ನಾಗಿರುವ ಕಡೆ ಮಾತ್ರ ಹರಾಜು ಹಾಕಿ ಬರಗಾಲದ ಪ್ರದೇಶಗಳಲ್ಲಿ ವಸೂಲಾತಿ ಮಾಡಬೇಡಿ ಎಂದರೆ ಕರ್ನಾಟಕದ ಜನತೆ ಉಸಿರು ಆಡಲು ಅನುಕೂಲ ಆಗುತ್ತದೆ.

ಇನ್ನು ಗೇಣಿದಾರರ ಬಗ್ಗೆ ಒಂದು ಮಾತೂ ಆಡಿಲ್ಲ. ಇದರ ಬಗ್ಗೆ ಹಿಂದೆಯೆಲ್ಲ ಪದೇಪದೇ ಹೇಳಿದ್ದೇವೆ. ಒಂದು ಸಲ ನಮಗೂ ಜಾಲಪ್ಪನವರಿಗೂ ಇಲ್ಲೇ ಗಲಾಟೆ ಕೂಡ ಆಯಿತು. ನೀವು ಎನ್‌ಎಸ್‌ಸಿ ಮೂಲಕವೋ ಡೈರೆಕ್ಟಾಗಿ ಕ್ಯಾಷಿನ ಮೂಲಕವೋ ಯಾರು ಯಾರು ಬಡ ಸಣ್ಣ ಹಿಡುವಳಿದಾರರಿದ್ದಾರೋ ಅವರ ಬಾಬ್ತನ್ನು ಮಾಲೀಕರಿಗೆ ಕೊಡಿ. ಪಿಎಲ್‌ಡಿ ಬ್ಯಾಂಕ್ ಮೂಲಕವಾದರೂ ಕೊಡಿ ಪಾಪ ಬಡ ಗೇಣಿದಾರನಿಗೆ ಕಂತು ಕಟ್ಟುವ ಶಕ್ತಿ ಇಲ್ಲ. You please forget that aspect of the portion of money which is already paid by the tenants. But, those who have not paid and who do not have the capacity to pay, why are you recovering from them. ಮಾನ್ಯ ಮುಖ್ಯಮಂತ್ರಿಗಳು ನೀವು ಹಿಂದೆ ಬಡ ಗೇಣಿದಾರನಿಗೆ ಕಂತು ಕಟ್ಟುವ ಶಕ್ತಿ ಇಲ್ಲದಿದ್ದರೆ ನಾವು ಕೊಡುತ್ತೇವೆಂದು ಹೇಳಿದ್ದೀರಿ. ಬೇಕಾದರೆ ತಾವು ರೆಕಾರ್ಡ್ಸ್ ತೆಗೆದುನೋಡಿ. ಯಾರು ಕಟ್ಟಿದ್ದಾರೋ ಅದರ ಬಗ್ಗೆ ನಾವು ಕೇಳುವುದಿಲ್ಲ ಅದು ಸರಿ ಆದರೆ ಯಾರು ಕಟ್ಟಲಾರದವರಿದ್ದಾರೋ ಅವರದನ್ನು ಕಟ್ಟಿಸುವ ಸರ್ಕಾರದ ವ್ಯವಸ್ಥೆ ಮಾಡಿ, ಆದರೆ ಇವತ್ತಿನವರೆಗೂ ನೀವು ಆಜ್ಞೆ ಹೊರಡಿಸಿಲ್ಲ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದರೆ ಬಡ ಗೇಣಿದಾರರನ್ನು ಕಂತಿಗೋಸ್ಕರ ಪೀಡಿಸುತ್ತಿದ್ದು ಈಗ ಹರಾಜು ಹಾಕಿಸುತ್ತೇವೆ ಎನ್ನುತ್ತಿದ್ದಾರೆ. ನಮ್ಮ ಸಿದ್ದಾಪುರ ಸೊರಬ ತಾಲೂಕುಗಳಲ್ಲೇ ನೂರಾರು ಹರಾಜು ಹಾಕುವ ಪ್ರಕರಣಗಳನ್ನು ಕೈಗೆತ್ತಿಕೊಂಡಿದ್ದಾರೆ. ಹರಾಜು ನೋಟಿಸು ಅಂಟಿಸುತ್ತಿದ್ದಾರೆ. ಮತ್ತು ಮುಂದೆ ಯಾವ್ಯಾವನ್ನು ಹರಾಜು ಹಾಕಬೇಕೆಂಬ ಪಟ್ಟಿಯನ್ನೂ ಸಿದ್ಧಪಡಿಸಿಕೊಂಡಿದ್ದಾರೆ.

೩-೦೦ ಪಿ.ಎಂ.

ಈಗಲಾದರೂ ಕೂಡ ನಿಮ್ಮ ಮಾತನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಸರಕಾರೀ ಆಜ್ಞೆಯನ್ನು ಹೊರಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಕೈಗಾರಿಕೆಯ ಬಗ್ಗೆ ಹೇಳುವುದಾದರೆ ಅದರ ಬಗ್ಗೆ ಒಂದು ಹೊಸ ವಾದವನ್ನು ಮಂಡನೆ ಮಾಡಿದ್ದಾರೆ ಅದು ಏನೆಂದರೆ ಯಾವ್ಯಾವ ಸಿಕ್

ಇಂಡಸ್ಟ್ರೀಗಳಿಧೆ, ಇನ್‌ಕ್ಲೂಡಿಂಗ್ ಭದ್ರಾವತಿ ಅದನ್ನು ಮಾರಾಟ ಮಾಡುವುದಕ್ಕೆ ಕೇಂದ್ರ ಸರಕಾರಕ್ಕೆ ಬರೆದಿರಿ ಅದನ್ನು ನಾವು ವಿರೋಧ ಮಾಡಿದ್ದೇವೆ ಭದ್ರಾವತಿಯ ಕಾರ್ಖಾನೆಯಲ್ಲಿ ನಮ್ಮ ಷೇರ್ ೫೧ ಪರ್ಸೆಂಟ್ ಇದೆ. ನೀವು ಈ ರೀತಿ ಹೊಸ ನೀತಿಯನ್ನು ಪ್ರತಿಪಾದನೆ ಮಾಡಿದ್ದೀರಿ. ಸರ್ ಎಂ. ವಿಶ್ವೇಶ್ವರಯ್ಯನವರು ಹಿಂದೆ ಹಳೆ ಮೈಸೂರು ರಾಜ್ಯದಲ್ಲಿ ಪ್ರಾರಂಭ ಮಾಡಿರತಕ್ಕಂತಹ ಕಾರ್ಖಾನೆಗಳು ಅವು ಬಹಳ ಹೆಸರು ಗಳಿಸಿರತಕ್ಕಂತಹ ಕೈಗಾರಿಕೆಗಳು ಅವು ಹೋಗತಕ್ಕಂತಹ ಸಂದರ್ಭ ಇವತ್ತು ನಮಗೆ ಕಾಣುತ್ತಿದೆ. ಲಾಸ್‌ನಲ್ಲಿರತಕ್ಕಂತಹ ಇಂಡಸ್ಟ್ರೀಗಳ ಒಂದು ದೊಡ್ಡ ಪಟ್ಟಿಯೇ ಇದೆ ಅದನ್ನೆಲ್ಲಾ ಮಾರಾಟ ಮಾಡುವುದಕ್ಕೆ ಹೋದರೆ ಸರಕಾರೀ ಕ್ಷೇತ್ರಕ್ಕೆ ಬೆಂಬಲ ಕೊಡುವುದಕ್ಕೆ ಬದಲು ಪ್ರೈವೇಟ್ ಸೆಕ್ಟಾರ್‌ಗೆ ಬೆಂಬಲ ಕೊಡತಕ್ಕಂತಹ ವಿಚಾರವನ್ನು ನೀವು ಇಟ್ಟುಕೊಂಡರೆ ನಿಮ್ಮ ಸಮಾಜವಾದದ ನೀತಿ ಏನಿತ್ತು ಅದು ಎಲ್ಲಿ ಹೋಯಿತು ಎಂದು ತಮ್ಮನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ ಅದನ್ನು ಕೈ ಬಿಡಿ ಮಾರಾಟ ಮಾಡುವುದಿಲ್ಲ ಎಂಬ ಅಭಿಪ್ರಾಯವನ್ನು ತಾವು ವ್ಯಕ್ತಪಡಿಸಬೇಕೆಂದು ನಾನು ವಿನಂತಿಸುತ್ತೇನೆ. ನಮ್ಮಲ್ಲಿ ಪವರ್ ಕಟ್ ನಿಜ ಅದನ್ನು ನಾವೂ ಕೂಡ ಒಪ್ಪುತ್ತೇವೆ, ಥರ್ಮಲ್ ಪವರ್ ಜನರೇಟರ್ ಇದೆ, ಹೈಡ್ರೋ ಎಲೆಕ್ಟ್ರಿಕ್ ಇದೆ, ಕಾಳಿ, ಶರಾವತಿ ಯೋಜನೆಗಳು ಇವೆ ಇವೆಲ್ಲಾ ಇದ್ದರೂ ಕೂಡ ಸಾಕಾಗುತ್ತಿಲ್ಲ ಗ್ಯಾಸ್ ಮುಂತಾದವನ್ನು ಮಾಡುವುದಕ್ಕೆ ಯೋಜನೆ ಹಾಕಿಕೊಂಡಿದ್ದೀರಿ ಕೇಂದ್ರ ಸರಕಾರ ಕೂಡ ಅದಕ್ಕೆ ಇತ್ತೀಚೆಗೆ ಅನುಮತಿ ಕೊಟ್ಟಿದೆ, ಪವರ್ ಲಾಸ್ ಆಗದ ಹಾಗೆ ನೋಡಿಕೊಳ್ಳಬೇಕು. ಇದನ್ನು ಮಾರಿದರೆ ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಕೂಡ ಜಾಸ್ತಿಯಾಗುತ್ತದೆ, ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಬಡ್ಜೆಟ್ ಬಗ್ಗೆ ಇರಬೇಕಾಗಿತ್ತು ಅದನ್ನು ಇಟ್ಟಿಲ್ಲ ಫೈನಾನ್ಸಿಯಲ್ ಡಿಸಿಪ್ಲಿನ್ ಎನ್ನುವ ಮಾತನ್ನು ಏನು ಹೇಳುತ್ತೇವೆ ನನಗೆ ಗೊತ್ತಿರುವ ಹಾಗೆ ಅದು ಎಲ್ಲಿಯೂ ಕೂಡ ಕಾಣುತ್ತಿಲ್ಲ ಚುನಾವಣೆ ಕಾಲದಲ್ಲಿ ಹೇಳಿದ್ದೀರಿ ಮನೆಗೆ ಒಬ್ಬೊಬ್ಬ ಹೆಣ್ಣು ಮಗಳಿಗೆ ಒಂದು ಜೊತೆ ಸೀರೆ, ಕುಪ್ಪಸ, ಗಂಡಸರಿಗೆ ಪಂಚೆ. ಷರ್ಟ್ ಕೊಡುತ್ತೇವೆಂದು ಅದೆಲ್ಲಾ ಎಲ್ಲಿ ಹೋಯಿತು? ಬಡ್ಜೆಟ್‌ನಲ್ಲಿ ಏಕೆ ಅದನ್ನೆಲ್ಲಾ ಪ್ರಸ್ತಾಪ ಮಾಡಿಲ್ಲ? ಏಕೆ ಅದಕ್ಕೆ ಹಣವನ್ನು ತೆಗೆದಿಟ್ಟಿಲ್ಲಾ ನಗರ ಪ್ರದೇಶಗಳಲ್ಲಿರತಕ್ಕಂತಹ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂತಹ ಜನಗಳಿಗೆ ಕೊಡುತ್ತೇವೆಂದು ಹೇಳಿದ್ದಿರಿ ನಂತರ ನಗರ ಪ್ರದೇಶಗಳಲ್ಲಿರತಕ್ಕಂತಹವರಿಗೆ ಇಲ್ಲ ಗ್ರಾಮೀಣ ಪ್ರದೇಶದ ಜನರಿಗೆ ಕೊಡುತ್ತೇವೆಂದು ಹೇಳಿದಿರಿ ಈ ರೀತಿ ಮಾಡಿದರೇ ವಚನ ಭಂಗವಾಗುತ್ತದೆಂದು ಆಗದೇ ಹೇಳಿದೆವು. ಹಳ್ಳಿಗಳಿಗೆ ಮೊದಲು ಈ ಸೌಲಭವನ್ನು ಕೊಡುತ್ತೇವೆಂದು ಹೇಳಿದಿರಿ ಜಿಲ್ಲೆಗೆ ಒಂದೊಂದು ತಾಲ್ಲೂಕಿನಂತೆ ಆರಿಸಿದ್ದೀರಿ ಉಳಿದ ತಾಲ್ಲೂಕುಗಳು ಎಲ್ಲಿ ಹೋಯಿತು? ಬಡ್ಜೆಟ್ಟಿನಲ್ಲಿ ಹೇಳಿಲ್ಲ ಇವೆಲ್ಲಾ ಎಲ್ಲಿ ಹೋಯಿತು. ಎಸ್ ಸಿ, ಎಸ್ ಟಿ ಮೈನಾರಿಟೀಸ್ ಕಾರ್ಪೋರೇಷನ್‌ಗಳಿಗೆ ಕಳೆದ ವರ್ಷ, ಈ ವರ್ಷ ಎಷ್ಟು ಹಣವನ್ನು ಒದಗಿಸಿದ್ದೀರಿ, ಅಲ್ಪ ಸಂಖ್ಯಾತರ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕಾಗುತ್ತದೆ. ಕೊನೆಯ ವಿಷಯವನ್ನು ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡತಕ್ಕಂತಹ ವಿಚಾರದಲ್ಲಿ ಸರಕಾರ ಯಾವ ರೀತಿಯಾಗಿ ಆರ್ಥಿಕ ಮಟ್ಟವನ್ನು ಹೇಗೆ ಹತೋಟಿಯಲ್ಲಿಡಬೇಕು ಆರ್ಥಿಕ ಬೆಳವಣಿಗೆಯನ್ನು ಹೇಗೆ ಮಾಡಿಕೊಳ್ಳಬೇಕು ತನ್ಮೂಲಕ ಪರ್ ಕ್ಯಾಪಿಟಾ ಇನ್‌ಕಂ ಹೇಗೆ ಜಾಸ್ತಿ ಮಾಡಿಕೊಳ್ಳಬೇಕು ಇಂಡಸ್ಟ್ರಿಯಲ್ ಗ್ರೋತ್, ಅಗ್ರಿಕಲ್ಚರ್ ಗ್ರೋತ್ ಮುಖಾಂತರವಾಗಿ ನಾವು ನಮ್ಮ ಆರ್ಥಿಕ ಬೆಳವಣಿಗೆಯನ್ನು ಯಾವ ರೀತಿ ಕಾಣಬಹುದು ಎಂಬ ವಿಚಾರದಲ್ಲಿ ನಾವು ಹೆಚ್ಚು ಆಸ್ಥೆಯನ್ನು ವಹಿಸಬೇಕಾಗುತ್ತದೆ. ಇನ್ನು ಮೈಸೂರು ಮಿನರಲ್ಸ್ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಇದು ಅದಕ್ಕೆ ಸಂಬಂಧಪಟ್ಟಿರತಕ್ಕಂತಹ ವಿಷಯ. ನಮ್ಮ ರಾಜ್ಯದ ಕೆಲವು ಕಡೆಗಳಲ್ಲಿ ಕಪ್ಪು ಕಲ್ಲು, ಕೆಂಪು ಕಲ್ಲು ಮತ್ತು ವಿವಿಧ ವರ್ಣದ ಶಿಲೆಗಳು ಬಹಳವಾಗಿ ಸಿಕ್ಕುತ್ತಿವೆ, ಮಂಡ್ಯ ಜಿಲ್ಲೆ. ಕನಕಪುರ ತಾಲ್ಲೂಕಿನಲ್ಲಿ, ಬಳ್ಳಾರಿ ಜಿಲ್ಲೆ ಹಾಗೂ ಬಿಜಾಪುರ ತಾಲ್ಲೂಕಿನಲ್ಲಿ ಇಳಕಲ್ ಎನ್ನತಕ್ಕಂತಹ ಜಾಗದಲ್ಲಿ ಇದು ಸಿಗುತ್ತದೆ.

ಇಳಕಲ್ಲು ಎನ್ನತಕ್ಕಂಥ ಜಾಗದಲ್ಲೂ ಸಿಗುತ್ತಿತ್ತು. ಇನ್ನೂ ಕೂಡಾ ಅನೇಕ ಜಾಗಗಳಲ್ಲಿ ಸಿಗುತ್ತಿದೆ. ಇದರಲ್ಲಿ ಗುಲ್ಬರ್ಗ ಬಹಳ ಹೆಸರುವಾಸಿಯಾಗಿದೆ. ಸೇಡಂ ಭಾಗದಲ್ಲೂ ಬಹಳ ಸಿಗುತ್ತದೆ. ಈ ಕಲ್ಲನ್ನು ತೆಗೆಯಬೇಕು ಎಂದು ಹೇಳಿದರೆ ಸರ್ಕಾರದ ಪರವಾನಿಗೆ ಪಡೆದು ಈ ಕಲ್ಲನ್ನು ತೆಗೆಯಬೇಕು, ಸರ್ಕಾರದ ಪರವಾನಿಗೆ ಇಲ್ಲದೆ ಈ ಕಲ್ಲನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಖಾಸಗಿ ಜಾಗದಲ್ಲಿ ಇದ್ದರೂ ಸಹಾ ಇದಕ್ಕೆ ಲೈಸೆನ್ಸ್ ತೆಗೆದುಕೊಂಡು ಇದನ್ನು ತೆಗೆಯಬೇಕಾಗುತ್ತದೆ. ಈ ಕಲ್ಲನ್ನು ನಮ್ಮಲ್ಲಿ ಎಕ್ಸ್‌ಪೋರ್ಟ್ ಮಾಡುತ್ತಾರೆ; ಮಂಗಳೂರು ಬಂದರಿನಿಂದ ಜಪಾನ್, ಇಟಲಿ ಮುಂತಾದ ಅನೇಕ ರಾಷ್ಟ್ರಗಳಿಗೆ ಇದನ್ನು ನಾವು ರಫ್ತು ಮಾಡುತ್ತೇವೆ. ಇದು ನೈಸರ್ಗಿಕ ಸಂಪತ್ತು.

ನಾವು ಈ ಸಂಪತ್ತನ್ನು ತೆಗೆದು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಕಾಂಗ್ರೆಸ್ (ಐ) ಪಕ್ಷದ ಸರ್ಕಾರ ಇದ್ದಾಗ ನನಗೆ ನೆನಪಿರುವ ಹಾಗೆ ೭೮ರಲ್ಲಿ ಕಪ್ಪು ಕಲ್ಲು ಎಲ್ಲೆಲ್ಲಿ ಇದೆ, ಅದನ್ನು ತೆಗೆಯಲಿಕ್ಕೆ ಯಾರಿಗೂ ಕೂಡಾ ಲೈಸೆನ್ಸ್ ಕೊಡಬಾರದು ಎಂದು ಮಾಡಿದ್ದರು, ಈ ಮೈಸೂರು ಮಿನರಲ್ಸ್ ಕಂಪನಿ ಏನು ಇದೆ, ಈ ಸಂಸ್ಥೆಯನ್ನು ಬೆಳೆಸಬೇಕು, ನಷ್ಟವಾದರೆ ಏನು ಉಪಯೋಗವಾಗುತ್ತದೆ. ಇದು ನಮ್ಮ ಸರ್ಕಾರಿ ಕ್ಷೇತ್ರದಲ್ಲಿರತಕ್ಕಂಥ ಒಂದು ಉದ್ಯಮ. ಈ ಮೈನಿಂಗ್ ಆಪರೇಷನ್ಸ್ ಎಲ್ಲೆಲ್ಲಿ ಸಾಧ್ಯ ಇದೆ, ಅದೆಲ್ಲವನ್ನು ಎಂ.ಎಂ.ಎಲ್ ನವರಿಗೇ ಇಟ್ಟಿದ್ದೆವು. ಕಪ್ಪು ಕಲ್ಲನ್ನು ಕಾಂಗ್ರೆಸ್ ಸರ್ಕಾರ ಇದ್ದಾಗ ಖಾಸಗಿ ಜನರಿಗೂ ಕೊಡಬಾರದು, ಏನು ಇದ್ದರೂ ಕೂಡಾ ಸರ್ಕಾರವೇ ಮಾಡಬೇಕು ಎನ್ನುವ ದೃಷ್ಟಿಯಿಂದ ಲೈಸೆನ್ಸ್ ಕೊಡುವುದನ್ನು ನಿಲ್ಲಿಸಿಬಿಟ್ಟರು. ಲೈಸೆನ್ಸ್ ಕೊಡಬಾರದು ಮತ್ತು ಲೈಸೆನ್ಸ್ ರಿನ್ಯೂ ಮಾಡಬಾರದು ಎಂದು ಎರಡು ವಿಚಾರದಲ್ಲಿಯೂ ರಾಷ್ಟ್ರೀಕರಣ ಮಾಡಿಬಿಟ್ಟರು. ಇದರಲ್ಲಿ ನುರಿತ ಕೆಲಸಗಾರರು ಜನರಲ್ಲಿ ಯಾರ್‍ಯಾರು ಇದ್ದಾರೆ ಅವರಿಗೆ ಮಾತ್ರ ಬೇಕಾದರೆ ಲೈಸೆನ್ಸ್ ಕೊಡಬಹುದು ಎಂದು ಮಾಡಿದರು. ಅನಂತರ ೧೯೭೮ರಲ್ಲಿ ಕಪ್ಪು ಕಲ್ಲು ರಾಷ್ಟ್ರೀಕರಣ ಆಯಿತು. ಬೇರೆಯವರಿಗೆ ಲೈಸೆನ್ಸ್ ಕೊಡಬಾರದು, ರಿನ್ಯೂ ಮಾಡಬಾರದು ಎಂದು ಆಯಿತು. ೧೯೮೧ರಲ್ಲಿ ಕೆಂಪು ಕಲ್ಲು ಇದರ ಬಗ್ಗೆ ಮಾಡಿದರು. ಇದರಿಂದಾಗಿ ರೈತರು ಸಣ್ಣ ಚಳುವಳಿಯನ್ನೇ ಮಾಡಿದರು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಮೂರು ತಿಂಗಳಲ್ಲಿಯೇ ಹನ್ನೊಂದು ಲಕ್ಷ ರೂಪಾಯಿಗಳನ್ನು ಜಮಾ ಮಾಡಿದರು. ಯಾರುಯಾರು ಕಲ್ಲುಗಳ ಮಾಲೀಕರು ಇದ್ದಾರೆ, ಯಾವ ಯಾವ ಕಂಪನಿಗಳು ಇವೆ. ಅವುಗಳಿಂದ ಸರ್ಕಾರಕ್ಕೆ ಬರಬೇಕಾದಂಥ ಸಾಲ ಸುಮಾರು ೩೦ರಿಂದ ೫೦ ಕೋಟಿ ರೂಪಾಯಿಗಳು ಇದೆ. ಇಷ್ಟು ಲಾಸ್ ಮಾಡಿ ಇಟ್ಟಿದ್ದಾರೆ. ಇದಕ್ಕೆ ಅಧಿಕಾರಿಗಳು ಶಾಮೀಲು ಮತ್ತು ಅವರಿಗೆ ಬೆಂಬಲ ಕೊಡತಕ್ಕಂಥ ಸರ್ಕಾರಿ ಮಟ್ಟದಲ್ಲಿರತಕ್ಕಂಥವರು ಶಾಮೀಲಾಗಿಲ್ಲದೇ ಇದ್ದರೆ ಈ ರೀತಿ ಎಂದೂ ನಡೆಯುವುದಕ್ಕೆ ಆಗುವುದಿಲ್ಲ. ಲೈಸೆನ್ಸ್‌ನ ಅವಧಿ ಇವತ್ತು ೧೯೮೩ಕ್ಕೆ ಮುಗಿದರೂ ಕೂಡಾ ಇದರ ಬಗ್ಗೆ ಹೈಕೋರ್ಟ್ ಜಡ್ಜ್‌ಮೆಂಟ್ ಕೂಡ ಆಗಿದೆ. ಇದನ್ನು ಮುಂದುವರಿಸಬಾರದು, ಎಂದು ಕಾಂಗ್ರೆಸ್ ಗೌರ್ನಮೆಂಟ್ ರಾಷ್ಟ್ರೀಕರಣ ಮಾಡಿದೆ. ೧೯೭೮ರಲ್ಲಿ ಕಪ್ಪು ಕಲ್ಲು, ೮೧ರಲ್ಲಿ ಕೆಂಪು ಕಲ್ಲುಗಳ ಬಗ್ಗೆ ರಾಷ್ಟ್ರೀಕರಣ ಮಾಡಿದೆ ಎಂದು ತಿಳಿಸಿದರೂ ಕೂಡಾ ಇದನ್ನು ಮುಂದುವರಿಸಿದ್ದಾರೆ. ಈ ಕೇಸನ್ನು ಹೈಕೋರ್ಟಿಗೆ ತೆಗೆದುಕೊಂಡು ಹೋಗಿದ್ದರೂ, ಹೈಕೋರ್ಟ್ ಲೈಸೆನ್ಸನ್ನು ಮುಂದುವರಿಸಬಾರದು ಎಂದು ಸರ್ಕಾರದ ತೀರ್ಮಾನವನ್ನು ಎತ್ತಿ ಹಿಡಿಯಿತು The decision of the Government was upheld by the High Court. ಯಾರು ಈ ಸಣ್ಣ ಜಮೀನುಗಳಲ್ಲಿ ಸ್ಟೋನ್ ಕ್ವೈರೀಸ್ ಇಟ್ಟುಕೊಂಡಿದ್ದಾರೋ ಅವರು ಮಾತ್ರ ತೆಗೆದುಕೊಳ್ಳಬಹುದು ಎಂದು ಪುನಃ ಹೇಳಿದಾಗ ಆ ರೀತಿ ಇಟ್ಟುಕೊಂಡರು.

MR. CHAIRMAN.— You have taken the maximum time of seventy one minutes. It is a record break. Please conclude.

ಶ್ರೀ ಎಸ್. ಬಂಗಾರಪ್ಪ.— ಅದಕ್ಕೂ ಕೂಡ, ಡೆಪ್ಯೂಟಿ ಕಮಿಶನರ್‌ರವರು, ತಹಶೀಲ್ದಾರರು, ಇತ್ಯಾದಿ...

ಅಧ್ಯಕ್ಷರು.— ನಿಮ್ಮ ಪಕ್ಷದವರ ಭಾಷಣದಲ್ಲಿ ನಿಮ್ಮ ಭಾಷಣವೇ ಹೆಚ್ಚಿಗೆ ಆಯಿತು. ೭೧ ನಿಮಿಷಗಳು ಆಗಿವೆ, ಇದು ನಿಮ್ಮ ರೆಕಾರ್ಡ್‌ಬ್ರೇಕ್. ದಯಮಾಡಿ ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.— ೫-೧೦ ನಿಮಿಷಗಳಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು.— ಎಷ್ಟು ನಿಮಿಷಗಳಲ್ಲಿ ಅಂದಿರಿ ? ದಯ ಮಾಡಿ ಬೇಗನೆ ಮುಕ್ತಾಯ ಮಾಡಬೇಕು....

ಶ್ರೀ ಎಸ್. ಬಂಗಾರಪ್ಪ.— ಯಾರುಯಾರು ಸ್ವಂತ ಜಮೀನಿನಲ್ಲಿ ಕಲ್ಲುಗಳು, ಬಂಡೆಗಳು ಇವೆ, ಅದಕ್ಕೆ ಡೆಪ್ಯುಟಿ ಕಮಿಶನರ್‌ರವರು, ತಹಶೀಲ್ದಾರ್‌ರವರು ಹೋಗಿ ಸ್ಥಳ ಪರಿಶೀಲನೆ ಮಾಡಿ, ಇಂಥ ಭೂಮಿ ಅಂತಹವರ ಸ್ವಾಧೀನದಲ್ಲಿದ್ದರೆ, ಅವರಿಗೆ ಮಾತ್ರ ಲೈಸೆನ್ಸ್ ಕೊಡಬಹುದು, ಎನ್ನುವ ದೃಷ್ಟಿಯಿಂದ, ಹೈಕೋರ್ಟ್‌ನವರು ಆರ್ಡರ್ ಮಾಡಿದರು. ಯಾವಾಗ ಸ್ವಂತ ಜಮೀನಿನಲ್ಲಿ ಮಾತ್ರ ಕೊಡಬೇಕು, ಬೇರೆಯವರಿಗೆ ಕೊಡಬಾರದು ಎಂದು ಮಾಡಿಬಿಟ್ಟರೋ ಆಗ ಏನಾಯಿತು ಎಂದರೆ, ಉದಾಹರಣೆಗಾಗಿ ಒಂದು ಸರ್ವೆ ನಂಬರ್‌ನ್ನು ಕೋಟ್ ಮಾಡುತ್ತೇನೆ. ಅದರ ಪರಿಸ್ಥಿತಿ ಏನಿದೆ

ಎಂದರೆ, ಕೆಲವರು ಸರ್ವೇಯರುಗಳಿಗೆ ೧೦-೧೫ ಸಾವಿರ ರೂಪಾಯಿಗಳವರೆಗೆ ಲಂಚವನ್ನು ಕೊಟ್ಟು ಬಿಟ್ಟರು. ಈ ಪ್ರೋಪರ್ಟಿನಲ್ಲಿರತಕ್ಕಂಥ ಸರ್ವೆ ನಂಬರ್ ಒಂದು ಗ್ರಾಮದಲ್ಲಿದೆ. ಕನಕಪುರ ತಾಲ್ಲೂಕು, ಕೊಡಹಳ್ಳಿ ಹೋಬಳಿ, ಕಳಗೊಂಡನಹಳ್ಳಿ ಅದರಲ್ಲಿನ ಸರ್ವೆ ನಂಬರ್ ೭೬. ಮುಂದ್ದೀಶ್ವರ ಮೈನಿಂಗ್ ಇಂಡಸ್ಟ್ರೀಸ್ ಎನ್ನತಕ್ಕಂಥವರು ಸರ್ವೆ ನಂಬರ್ ೭೬ರ ಜಮೀನನ್ನು ಖರೀದಿ ಮಾಡಿದರು. ಆ ಜಮೀನನ್ನು ಪಡೆದ ನಂತರ ಅವರಿಗೆ ಗೊತ್ತಾಯಿತು, ಅದರಲ್ಲಿ ಕಲ್ಲು ಇಲ್ಲ ಎಂದು ಏಕೆಂದರೆ ಕಲ್ಲು ಇರುವುದು ಮೊದಲು ತಿಳಿಯುವುದಿಲ್ಲ. ಅದು ಲಕ್ ಇರುವ ಹಾಗೆ ಇರುತ್ತದೆ. ಆಗ ಅವರು ಏನು ಮಾಡಿದರು ? ಅವರೆಲ್ಲ ಒಟ್ಟಾಗಿ ಪಕ್ಕದಲ್ಲಿರುವ ಸರ್ವೆ ನಂಬರ್ ೭೫ರ ಸರ್ವೆ ಮಾಡಿಸಿ ನಕ್ಷೆಯನ್ನು ತಯಾರು ಮಾಡಿದರು. ಏಕೆಂದರೆ ೭೫ರಲ್ಲಿ ಕಲ್ಲು ಇತ್ತು ಅದು ಗೊತ್ತಾಗಿತ್ತು. ಅದು ಸರಕಾರಿ ಜಾಗ. ಗೋಮಾಳವಾಗಿ ಇತ್ತು ಅವಕ್ಕೆ ಇವರುಗಳು ಏನು ಮಾಡಿದರು ಅಂದರೆ. ಸರ್ವೆ ನಂಬರ್ ೭೫ರಲ್ಲಿನ ಜಾಗದಲ್ಲಿ ೭೬ ನಂಬರಿನ ಬಹಳ ಪ್ರದೇಶವನ್ನು ಒಳಗೊಂಡಿದೆ ಎನ್ನತಕ್ಕಂಥ ದೃಷ್ಟಿಯಿಂದ ಒಂದು ಮ್ಯಾಪನ್ನು ತಯಾರು ಮಾಡಿದರು. ಹೈಕೋರ್ಟಿನ ಜಡ್ಜ್‌ಮೆಂಟ್ ಪ್ರಕಾರ ಏನು ೭೬ಕ್ಕೆ ಲೈಸನ್ಸ್‌ನ್ನು ತೆಗೆದುಕೊಂಡಿದ್ದರು, ಅದನ್ನು ಉಪಯೋಗಿಸಿ, ೭೫ನೇ ಸರ್ವೆ ನಂಬರ್‌ನ ಜಾಗವು ಸರ್ಕಾರಿ ಜಾಗವಾಗಿದ್ದರೂ ಕೂಡ. ಅವಕ್ಕೆ ಮೈನಿಂಗ್ ಆಪರೇಶನ್ ಮಾಡಿಬಿಟ್ಟರು. ಅದರ ಬಗ್ಗೆ ಪುನಃ ಹೈಕೋರ್ಟಿಗೆ ಕೇಸ್ ಹಾಕಿದರು ಎಂ.ಎಂ.ಎಲ್. ನವರಿಗೂ ಇದನ್ನು ತಿಳಿಸಿದರು. ಇಲ್ಲಿ ಡೈರೆಕ್ಟರ್‌ಗಳ ಹತ್ತಿರವೂ ಹೇಳಿದರು. ಮೈನಿಂಗ್ ವಿಚಾರದಲ್ಲಿ ಎಕ್ಸ್‌ಪರ್ಟ್ಸ್ ಯಾರಿದ್ದಾರೆ ಅವರಿಗೂ ಅರ್ಜಿ ಕೊಟ್ಟರು. ಹೀಗೆ ಎಲ್ಲಾ ಮಾಡಿದರು. ಅಷ್ಟೆ ಅಲ್ಲ. ಜನತಾ ಪಕ್ಷದ ಒಬ್ಬ ಮಾನ್ಯ ಸದಸ್ಯರು ಸಾತನೂರು ಕ್ಷೇತ್ರದವರು ಮಾನ್ಯ ಮಂತ್ರಿಯವರಾದ ದೇಶ್‌ಮುಖ್‌ರವರಿಗೆ ಒಂದು ಪತ್ರವನ್ನು ಬರೆದು ತಿಳಿಸಿದರು. ಮಂತ್ರಿಗಳವರು ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಆ ಪತ್ರದ ದಿನಾಂಕ ೧-೧೦-೧೯೮೫. ಶಾಸಕರ ಹೆಸರು ಕಾಲಳ್ಳಿ ಲಂಗೇಗೌಡ ಶಿವಲಿಂಗೇಗೌಡರು. ಅದರ ಪ್ರತಿಯನ್ನು ಜಿಲ್ಲಾಧಿಕಾರಿಯವರಿಗೆ, ಡೈರೆಕ್ಟರ್ ಮೈನಿಂಗ್ ಅಂಡ್ ಜಿಯಾಲಜಿಯವರಿಗೆ, ಸೀನಿಯರ್ ಜಿಯಾಲಜಿಸ್ಟ್‌ರವರಿಗೆ, (ಬೆಂಗಳೂರು ವಿಭಾಗ) ಇವರಿಗೆ ಹೀಗೆ ಇಷ್ಟು ಉಗ್ರವಾಗಿ ಮಾನ್ಯ ಸದಸ್ಯರು ಪತ್ರವನ್ನು ಬರೆದಿದ್ದಾರೆ. ಅದರ ಕೆಲವು ಲೈನ್ಸ್‌ನ್ನು ಓದುತ್ತೇನೆ.

"ಕನಕಪುರ ತಾಲೂಕು, ಕೊಡಳ್ಳಿ ಹೋಬಳಿ, ಗಟ್ಟಿಗುಂದ ಗ್ರಾಮ, ಸರ್ವೆ ನಂಬರ್ ೫೦ ಈ ಸರ್ಕಾರಿ ಜಮೀನಿನಲ್ಲಿ ಬಹಳ ಬೆಲೆ ಬಾಳುವ ಉತ್ಕೃಷ್ಟವಾದ ಕರಿಕಲ್ಲು ಇರುತ್ತದೆ. ಈ ಸರ್ವೆ ನಂಬರ್ ಸರ್ಕಾರಿ ಜಮೀನು ಆಗಿರುತ್ತದೆ. ಇದರಲ್ಲಿ ಬೆಂಗಳೂರಿನ ಕೃಷ್ಣಮೂರ್ತಿ ಕಾಲೋನಿಯ ಗುಟ್ಟೆಪಾಳ್ಯ, ಸಿದ್ದಾಪುರ, ಮನೆ ನಂಬರ್ ೨೨೯, ಇಲ್ಲಿ ವಾಸ ಆಗಿರುವ ಶ್ರೀ ಸೈಯದ್ ಹುಸೇನ್ ಎಂಬುವರು ಮತ್ತು ಕೊಳಗೊಂಡನಹಳ್ಳಿ ಗ್ರಾಮದ ಮಾಜಿ ಚೇರ್ಮನ್ ಕೆ. ಜಿ. ಬೋರೇಗೌಡ ಎಂಬವರು, ಮತ್ತು ಬೆಂಗಳೂರಿನ ವಿಲ್ಸನ್‌ಗಾರ್ಡನ್ ನಿವಾಸಿ, ರಾಜು ಎಂಬವರು, ಜೊತೆಗೂಡಿ ಒಂದೂವರೆ ಲೋಡು ಅಕ್ರಮವಾಗಿ ಕಪ್ಪು ಕಲ್ಲುಗಳನ್ನು ಹೊಡೆದು ಹೊರಗೆ ಮಾರಾಟ ಮಾಡಿರುತ್ತಾರೆ. ಈ ಬಗ್ಗೆ ಗಟ್ಟಿಗುಂದ ಗ್ರಾಮಸ್ಥರು ಮತ್ತು ಕೊಳಗೊಂಡನಹಳ್ಳಿ ಗ್ರಾಮಸ್ಥರು ಇದಕ್ಕೆ ಸಂಬಂಧಪಟ್ಟ ಅಂದರೆ ಭೂಗರ್ಭ ಇಲಾಖೆಯವರಿಗೆ, ದೂರು ಕೊಟ್ಟರು. ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಬಂದು ಕಪ್ಪು ಕಲ್ಲುಗಳ ಸುಮಾರು ೧೦ ಲೋಡುಗಳಷ್ಟು, ಕಲ್ಲನ್ನು ಅಮಾನತ್ತು ಮಾಡಿದರು. ಇಲಾಖಾ ಅಧಿಕಾರಿಗಳು ಪೋಲೀಸರು ಬಂದು ಹಿಡಿದು ಹಾಕಿದರು. ಮತ್ತೂ ಗಣಿ ಇಲಾಖೆಯವರು ಅಲ್ಲಿಯ ಪೋಲೀಸ್ ಅಧಿಕಾರಿಗಳ ವಶಕ್ಕೆ ಕೊಟ್ಟಿದ್ದಾಗ್ಯೂ ಮೇಲ್ಕಂಡ ಮೂರು ಜನರು ಸೇರಿ ಅರ್ಧ ರಾತ್ರಿ ಸಮಯದಲ್ಲಿ ಲಾರಿ ತುಂಬಿ ತಂದು ಕಳ್ಳದಾರಿಯಲ್ಲಿ ಕಲ್ಲನ್ನು ಸಾಗಾಣಿಕೆ ಮಾಡಿದರು. ಪೋಲಿಸರು ಹಿಡಿದಿಟ್ಟದ್ದನ್ನು ಇವರು ಬಂದು ತೆಗೆದುಕೊಂಡು ಹೋದರು, ಪೋಲೀಸರು ಬಿಟ್ಟರು. ಇದರಲ್ಲಿ ಗ್ರಾಮಸ್ಥರು ನಕಾಶೆ ಕಾಪಿಗಳನ್ನು ಲಗತ್ತಿಸಿರುತ್ತಾರೆ. ಊರಿನಲ್ಲಿ ಅಕ್ರಮವಾಗಿ ಹಿಡಿದು ಇಟ್ಟಿರುವ ಕಲ್ಲುಗಳನ್ನು ಅಮಾನತುಗೊಳಿಸಿ, ಅವರ ಮೇಲೆ ಜರೂರು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶಿವಲಿಂಗೇಗೌಡ (ಸಾತನೂರು ಕ್ಷೇತ್ರ).— ಪತ್ರದ ಜೊತೆಗೆ ಮ್ಯಾಪ್ ಕಾಪಿ, ಇತ್ಯಾದಿಯಾಗಿ ಇಟ್ಟಿದ್ದಾರೆ. ಇದೇ ರೀತಿಯಾಗಿ ಕಂಪನಿಗಳು ಬಹಳಷ್ಟು ಇವೆ. ಅವರು ಸರಕಾರಿ ಜಮೀನಿನಲ್ಲಿರುವ ಕಲ್ಲುಗಳನ್ನು ಲೂಟಿ ಮಾಡುತ್ತಿದ್ದಾರೆ. ಅವುಗಳಲ್ಲಿ, ೧) ಜಿಮ್ ಗ್ರಾನೈಟ್ ಕಂಪನಿ,

೨) ಮಂಜುನಾಥೇಶ್ವರ ಮೈನಿಂಗ್ ಇಂಡಸ್ಟ್ರೀಸ್ ೩) ಓರಿಯಂಟಲ್ ಗ್ರೈನೇಟ್ಸ್ ಇವರು ಸುಶೀಲ್ ಎನ್ನತಕ್ಕಂಥವರು, ಇವರು ಗಂಭೀರವಾದಂತಹ ಕೆಂಪು-ಕರಿ ಕಲ್ಲುಗಳನ್ನು ಲೂಟಿ ಮಾಡಿರತಕ್ಕಂಥವರು ೪) ಓರಿಯಂಟೆಡ್ ಸೆಲೆಕ್ಟ್ ಗ್ರೈನೇಟ್ಸ್ ೫) ಪ್ರಸಾದ್ ಗ್ರೈನೇಟ್ಸ್ ೬) ರಾಘವೇಂದ್ರ ಗ್ರೈನೇಟ್ಸ್, ೭) ಕೇದಾರ್ ಗ್ರೈನೇಟ್ಸ್ ಇತ್ಯಾದಿ.

ಈ ಅಮೂಲ್ಯವಾದಂತಹ ಕಲ್ಲುಗಳು ಮೈಸೂರು ಜಿಲ್ಲೆಯಲ್ಲಿ, ಬೆಂಗಳೂರು ಜಿಲ್ಲೆಯಲ್ಲಿ ಚಾಮರಾಜ ನಗರದಲ್ಲಿ ಸಿಗುತ್ತವೆ ಇದು ತಮ್ಮ ಗಮನಕ್ಕೂ ಬಂದಿದೆ.

ಹಾಗೆಯೇ ಬಿಜಾಪುರ ಬಳ್ಳಾರಿ ರಾಯಚೂರಿನಲ್ಲಿ ಎಷ್ಟೆಷ್ಟು ಆಗಿರಬಹುದು ಎಂದು ನಾನು ಕೇಳುತ್ತೇನೆ: ಈಗ ನನ್ನ ಡಿಮ್ಯಾಂಡ್ ಇಷ್ಟೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಇದ್ದಾರೆ ಕಾನೂನು ವಿರುದ್ಧವಾಗಿ ಅವರು ಏನು ನಡೆಯುತ್ತಾ ಇದ್ದಾರೆ ಅವರ ಮೇಲೆ ಕ್ರಮ ತೆಗೆದು ಕೊಳ್ಳಬೇಕು. ಲೈಸನ್ಸ್ ಇಲ್ಲದೆ ಸರ್ಕಾರೀ ಜಮೀನಿನಲ್ಲಿ ಉದಾಹರಣೆ ಹೇಳುವುದಾದರೆ ಬಿಜಾಪುರ ಜಿಲ್ಲೆಯಲ್ಲಿ ಒಂದು ಮಠಕ್ಕೆ ಸೇರಿದ ಜಮೀನಿನಲ್ಲಿ ಮತ್ತು ಇಳಕಲ್‌ನಲ್ಲಿ, ಈ ಜಿಮ್ ಗ್ರೈನೇಟ್ ಕಂಪನಿಯವರಿಗೆ ೬೦ ಲಕ್ಷಕ್ಕೆ ಮಾರಾಟ ಮಾಡಿದ್ದಾರೆ. ಇದನ್ನು ಡಿಪಾರ್ಟ್‌ಮೆಂಟಿನವರು ಹೇಗೆ ಕೊಟ್ಟರು? ಎನ್ನುವುದು ಮುಖ್ಯವಾದ ವಿಚಾರ. ಇದರ ಬಗ್ಗೆ ಸಂಪೂರ್ಣವಾಗಿ ತನಿಖೆಯಾಗಬೇಕು. ಈ ಬಗ್ಗೆ ಅಧಿಕಾರಿಗಳು ಎಲ್ಲರೂ ಶಾಮೀಲಾಗಿದ್ದಾರೆ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಏನು ಇದ್ದಾರೆ ಅವರಿಗೆ ಶುಭ ಆಶೀರ್ವಾದ ಇದೆ. ಇದರಲ್ಲಿ ಕೋಟ್ಯಾಂತರ ರೂಪಾಯಿಯಷ್ಟು ದುರ್ವ್ಯವಹಾರ ನಡೆದಿದೆ.

ಅಧ್ಯಕ್ಷರು.--ತನಿಖೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.--ಇದರ ಬಗ್ಗೆ ಸಂಪೂರ್ಣವಾಗಿ ಸಿಐಬಿ ತನಿಖೆಗೆ ಕೊಡಬೇಕು ಎಂದು ಹೇಳುತ್ತೇನೆ.

ಹಾಗೇ ಮಾಡದೇ ಹೋದರೆ ಇದು ಇನ್ನೂ ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈ ದೃಷ್ಟಿಯಿಂದ ನಾನು ಇವೊತ್ತು ಈ ಸದನದಲ್ಲಿ ಮಂಡನೆಯಾಗಿರ ತಕ್ಕಂಥ ಬಡ್ಜೆಟ್ ಏನು ಇದೆ ಇದರ ಬಗ್ಗೆ ರಿಸೋರ್ಸಸ್ ಮಾಡುವುದಕ್ಕೆ ಮೊಬಲೈಸೇಷನ್ ರೂಪಿಸುವ ಸಂದರ್ಭದಲ್ಲಿ ಟ್ಯಾಕ್ಸ್ ಹಾಕತಕ್ಕಂಥದ್ದಾಗಲಿ, ಹಣದುಬ್ಬರವನ್ನು ಮಾಡತಕ್ಕಂಥ ಸಂದರ್ಭ ವಾಗಲಿ ಡೆಫಿಸಿಟ್ ಜಾಸ್ತಿ ತೋರಿಸಿ ಜನತೆಯ ಮೇಲೆ ಭಾರ ಹಾಕತಕ್ಕಂಥಾ ವಿಚಾರದಲ್ಲಿಯಾಗಲಿ ಮತ್ತು ಆರ್ಥಿಕ ಪ್ರಗತಿಗೆ ಇದು ಪೆ'ಗೊಡುವ ಬಡ್ಜೆಟ್ ಅಲ್ಲ ಎಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) --ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿ ಗಳು ಹಾಗೂ ಹಣಕಾಸಿನ ಮಂತ್ರಿಗಳು ಮಂಡಿಸಿದಂಥ ಈ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತಾ ಇದರ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮಾನ್ಯ ಉಪಾಧ್ಯಕ್ಷರು ಪ್ರಥಮದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಡ್ಜೆಟ್ಟನ್ನು ಮಂಡಿಸುವ ಸಂದರ್ಭದಲ್ಲಿ ಮೊಟ್ಟ ಮೊದಲನೆಯದಾಗಿ ಕೆಲವು ಮಾತುಗಳನ್ನು ಹೇಳಿದರು. ಅದು ಏನೆಂದರೆ ಜನತೆಯ ಕೈಗೆ ಅಧಿಕಾರ ಕೊಟ್ಟಿದ್ದೇವೆ ಅಷ್ಟೇ ಅಲ್ಲ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಆರ್ಥಿಕ ವಿಕೇಂದ್ರೀಕರಣ ಮಾಡಿದಂಥ ಶ್ರೇಯಸ್ಸು ಸಂದರ್ಭವೂ ಅವರಿಗೆ ಇದೆ ಎಂದು ಹೇಳಿದರು. ಕೆಲವರು ಕೇಳಿದರು ಮೊದಲು ಪಂಚಾಯಿತಿ ಇರಲಿಲ್ಲವೇ ಎಂದು. ಅವೊತ್ತು ಇತ್ತು. ಅದು ಹೇಗೆ ಇತ್ತು ಎಂದರೆ ಹೆಸರಿಗೆ ಹಾಲಪ್ಪ ಆದರೆ ಮನೆಯಲ್ಲಿ ಒಂದು ಹನಿಯೂ ಹಾಲು ಇರಲಿಲ್ಲ. ಹಾಗೆ ಇತ್ತು. ಅಲ್ಲದೆ ಆಗ ವರ್ಷಕ್ಕೆ ೯ ಕೋಟಿ ರೂಪಾಯಿಗಳು ಇದಕ್ಕೆ ಅಂದಾಜು ಇದ್ದರೆ ಈ ಸಲ ಅದಕ್ಕೆ ೯೦೦ ಕೋಟಿ ರೂಪಾಯಿಗಳಷ್ಟು ಅಳವಡಿಸಿದ್ದಾರೆ ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು ಜನತಾ ಪ್ರತಿನಿಧಿ ಗಳೆಲ್ಲರನ್ನೂ ಕೂಡ ರಾಜಧಾನಿಗೆ ಪಾದಾರ್ಪಣೆ ಮಾಡಿಸಿ ಈ ನವೋದಯ ರಾಜ್ಯದ ಹೊಂಬೆಳಕಿನಲ್ಲಿ ಈ

ಬಡ್ಜೆಟ್ಟನ್ನು ಮಂಡಿಸಿದ್ದಾರೆ. ತೆರಿಗೆ ಮುಕ್ತ ಹಾಗೂ ಶೋಷಣೆ ರಹಿತ ಸಮಾಜ ರಚನೆ ಮಾಡುತ್ತೇವೆ ಎನ್ನುವುದು ಒಂದು ಸುಂದರ ಘೋಷಣೆ ಮಾನ್ಯ ಅಡಿಗರವರು ಏನು ಒಂದು ಕವಿತೆಯನ್ನು ಬರೆದಿದ್ದಾರೆ ಅದು ನೆನಪಾಗುತ್ತದೆ. ಆ ಕವಿತೆಯನ್ನು ತಮ್ಮ ಮುಂದೆ ಹೇಳಬಯಸುತ್ತೇನೆ. ಅದು ಈ ರೀತಿ ಇದೆ :

ಎಡವು ಅಲ್ಲ, ಬಲವು ಅಲ್ಲ,
ಗಾಂಧಿ ಅಲ್ಲ, ಮಾರ್ಕ್ಸ್ ಅಲ್ಲ,
ಅಹಿಂಸೆಯಲ್ಲ, ಹಿಂಸೆಯಲ್ಲ,
ಇಹವಿಲ್ಲದ ಪರವಲ್ಲದ
ಅನುಕೂಲ ಸಿಂಧು ರಚಿಸುತ್ತಿರುವ
ಅವರ್ಣ ರೂಪಭೂಪರು

ನಂತರ ಏನು ಹೇಳಿದ್ದಾರೆಂದರೆ

ಬಲ್ಲಿದರನ್ನೊತ್ತಿ ತುಳಿದು ಬಡವಗೆ ಕೈಕೊಡುವವರು
ಚಿಂತಕರನ್ನೊರಸಲಿಕ್ಕೆ ಬೀದಿಕೂಗ ಮಸೆದವರು,
ಮೂರು ಬಾರಿ ನಾಡ ಸೋಸ್ ಮರಳಿ ಪಟ್ಟವೇರಿದವರು
ಆಹಾ ಮಹಾಪುರುಷರು—ಎಂದು ಹೇಳಿದರು.

ಆದ್ದರಿಂದ ಶೋಷಣೆರಹಿತ ಹಾಗೂ ಕರಮುಕ್ತರಹಿತ ಸಮಾಜವನ್ನು ರಚನೆ ಮಾಡುವುದು ಕನಸಿನ ಮಾತಾಗುತ್ತದೆ, ನಮ್ಮ ಹಳೆಯ ಶಾಸನಗಳನ್ನು ತೆಗೆದು ನೋಡಿದಾಗ ಈ ತೆರಿಗೆ ಭಾರ ಬಹಳ ಪ್ರಾಚೀನ ಕಾಲದಿಂದಲೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಇತ್ತು ಎಂಬುದು ನಮಗೆ ತಿಳಿದು ಬರುತ್ತದೆ. ಆ ಕಾಲದಲ್ಲಿ ವ್ಯಾಪಾರ ಸಾಮಗ್ರಿಗಳ ಮೇಲಿನ ತೆರಿಗೆಗೆ ತಳಭಂಡದ ಸುಂಕ ಎಂದು ವಿವಿಧ ವೃತ್ತಿಯ ಮೇಲೆ ಹಾಕುತ್ತಿದ್ದ ತೆರಿಗೆ ಅಂದರೆ ಕುರುಬರು ಕೊಡಬೇಕಾದ ತೆರಿಗೆಗೆ ಕುರುಂಬದೆರೆ ಸುಂಕ ಎಂದು, ಬಿದಿರಿನ ಕೆಲಸದವರು ಕೊಡಬೇಕಾದ ತೆರಿಗೆಗೆ ಮಾದಾರದೆರೆ ಎಂದು, ಅಕ್ಕಸಾಲಿಗರು ಕೊಡಬೇಕಾದ ತೆರಿಗೆಗೆ ಕೊಡತಿವಣ ಎಂದು, ರೈತರ ಮೇಲೆ ವಿಧಿಸುತ್ತಿದ್ದ ತೆರಿಗೆಗೆ ಒಕ್ಕಲುದೆರೆ ಎಂದು, ಎತ್ತುಗಳ ಮೇಲಿನ ತೆರಿಗೆಗೆ ಬಾಲವಣ ಎಂದು, ಬಂಡಿಗಳ ಮೇಲಿನ ತೆರಿಗೆಗೆ ಬಂಡಿದೆರೆ ಎಂದು, ಗಾಣದ ಮೇಲಿನ ಸುಂಕಕ್ಕೆ ಅಲೆಯ ಸುಂಕ ಎಂದು, ಸಂಪಿಗರ ಮೇಲಿನ ತೆರಿಗೆಗೆ ಕತ್ತರಿವಣ ಎಂದು. ತೋಟದ ಕೆಲಸ ಮಾಡುವವರಿಗೆ ಹಾಕುತ್ತಿರುವ ಸುಂಕಕ್ಕೆ ಕುಳಿಯ ಸುಂಕ ಎಂದು, ಹಾಲು ಕೊಡುತ್ತಿದ್ದ ಪಶುವಿನ ಮೇಲೆ ಹಾಕುತ್ತಿದ್ದ ಸುಂಕಕ್ಕೆ 'ಹಾಲಾವು' ಎಂದು ಕರೆಯುತ್ತಿದ್ದರು, ಹಾಗೂ ಆ ಕಾಲದಲ್ಲಿ ಎಪ್ಪೆ ಸುಂಕ ಎಂದು ಸಹ ಹಾಕುತ್ತಿದ್ದರು. ಇದನ್ನು ನೋಡಿದಾಗ ಯಾವ ಕಾಲದಲ್ಲಿಯೂ ಜನರು ಈ ಸುಂಕದ ಭಾರದಿಂದ ತಪ್ಪಿಸಿಕೊಂಡಿಲ್ಲ ಎಂದು ಅರ್ಥವಾಗುತ್ತದೆ. ಆ ಕಾಲದಲ್ಲಿಯೂ ಸಹ ಸುಂಕ ಜಾಸ್ತಿ ಎಂದು ಜನರು ರಾಜರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದರು. ಜನರಿಂದ ಈ ಸುಂಕವನ್ನು ಯಾವ ರೀತಿ ಎತ್ತಬೇಕು ಎಂಬ ಬಗ್ಗೆ ಒಂದು ಕಡೆ ಈ ರೀತಿ ಹೇಳಿದ್ದಾರೆ;—

> "ದೇಶವು ಹಸುವಿದ್ದಂತೆ, ಪ್ರಜೆಗಳು ಕರುಗಳು ಇದ್ದಂತೆ. ಎಲ್ಲ ಹಾಲನ್ನು ಸ್ವಂತಕ್ಕೆ ಕರೆದುಕೊಂಡರೆ ಕರುಗಳು ಬಡವಾಗಿ ಮುಂದೆ ಭಾರವನ್ನು ಹೊರಲು ಅಸಮರ್ಥವಾಗುತ್ತದೆ. ಹೂವಿಗೆ ನೋವಾಗದಂತೆ ದುಂಬಿಯು ಜೇನನ್ನು ಸ್ವೀಕರಿಸುವ ರೀತಿಯಲ್ಲಿ ಜನರಿಂದ ತೆರಿಗೆಗಳನ್ನು ಎತ್ತಬೇಕು. ಸರಿಯಾದ ದೇಶ, ಕಾಲ ರೀತಿಗಳಲ್ಲಿ ತೆರಿಗೆ ಪಡೆಯಬೇಕು ಹಾಲನ್ನು ಕರೆಯಲಿ, ಕೆಚ್ಚಲಿಗೆ ನೋವಾಗದಿರಲಿ."

ಇದು ತೆರಿಗೆ ಹಾಕುವವರಿಗೆ ಒಂದು ಸೂಚನೆ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಈ ಸಲದ ಬಡ್ಜೆಟ್ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂಡಿಸುವ ರೀತಿಯಲ್ಲಿ ಇದೆ ಎಂದು ಇಲ್ಲಿ ಕೆಲವರು ವಾದನೆ ಮಾಡಿದ್ದಾರೆ. ಆದರೆ ನನಗೆ ಆ ರೀತಿ ಅನಿಸುವುದಿಲ್ಲ. ಏಕೆಂದರೆ, ನಮ್ಮ ಕರ್ನಾಟಕ ರಾಜ್ಯ ಬಹುತೇಕವಾಗಿ ನಮ್ಮ ಭಾರತ ದೇಶದ ಒಂದು ಅಂಗವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಈ ಕಾರಣದಿಂದ ನಮ್ಮ ರಾಜ್ಯದ ಮೇಲೆ ಬೀಳುವಂತಹ ಆರ್ಥಿಕ ಭಾರ ಇಡೀ ಭಾರತ ದೇಶಕ್ಕೆ ಅನ್ವಯವಾಗುತ್ತದೆ ಮತ್ತು ಭಾರತ ದೇಶದ ಮೇಲೆ ಬೀಳುವಂತಹ ತೆರಿಗೆಯ ಹೊರೆ ನಮ್ಮ ರಾಜ್ಯ ಸರ್ಕಾರದ ಮೇಲೆ ಬೀಳುತ್ತದೆ ಎಂದು ನಾವು ತಿಳಿದುಕೊಳ್ಳಬಹುದು. ಒಟ್ಟಿನಲ್ಲಿ ಇದು ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ. ಮತ್ತೆ ಹಣದುಬ್ಬರದ ಬಗ್ಗೆ ಕೆಲವು ಮಾತುಗಳು ಕೇಳಿ ಬರುತ್ತಿದೆ. ಇದು ರಾಜ್ಯ ಸರ್ಕಾರಗಳ ಕೊಡುಗೆ ಎಂದು ಕೆಲವರು ಹೇಳುತ್ತಾರೆ. ಈ ಬಗ್ಗೆ ಮಾನ್ಯ

ಮುಖ್ಯಮಂತ್ರಿಗಳು ಕೆಲವು ಮಾತುಗಳನ್ನು ತಮ್ಮ ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ. ಏನೆಂದರೆ, "ಓವರ್ ಡ್ರಾಫ್ಟ್‌ಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿನ ನಿಯಮಗಳನ್ನು ಕಠಿಣವಾಗಿ ಜಾರಿಗೊಳಿಸುತ್ತಿರುವುದರಿಂದ ಕೊರತೆ ಹಣಕಾಸಿನ ಈ ಹೆಚ್ಚಳಕ್ಕೆ ರಾಜ್ಯ ಸರ್ಕಾರಗಳನ್ನು ದೂರುವುದು ಸಾಧ್ಯವಿಲ್ಲ. ಕೇಂದ್ರದ ಯೋಜನೇತರ ವೆಚ್ಚದ ಮೇಲೆ ಕಡಿವಾಣ ಹಾಕದಿದ್ದರೆ ಕೊರತೆ ಹಣಕಾಸಿನ ಹೆಚ್ಚಳದಿಂದ ಹಣದುಬ್ಬರ ಇನ್ನಷ್ಟು ಹೆಚ್ಚಾಗಬಹುದು.' ಎಂದು. ಇದೇ ವಿಚಾರದಲ್ಲಿ ಮುಂದೆ ಈ ರೀತಿ ಹೇಳಿದ್ದಾರೆ.—

"ಇತ್ತೀಚೆಗೆ ಕೇಂದ್ರ ಸರಕಾರವು ಸಂಪನ್ಮೂಲಗಳ ಸಂಗ್ರಹಣೆಗಾಗಿ ಆಕರ್ಷಕ ಸವಲತ್ತುಗಳೊಂದಿಗೆ ಬಾಂಡುಗಳ ಮೇಲೆ ಹಣ ಎತ್ತಲು ಕೇಂದ್ರ ಸರ್ಕಾರದ ಔದ್ಯಮಿಕ ಸಂಸ್ಥೆಗಳಿಗೆ ಅನುಮತಿ ನೀಡುತ್ತಿದೆ. ಆದರೆ ಇದೇ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದ ಔದ್ಯಮಿಕ ಸಂಸ್ಥೆಗಳಿಗೆ ಅನುಮತಿ ನೀಡಲಾಗುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಇದು ಬಹಳ ಅನ್ಯಾಯ. ಇದರ ಪರಿಣಾಮವೇದರೆ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಗತ್ಯ ಇರುವ ಸಂಪನ್ಮೂಲಗಳ ಲಭ್ಯತೆಯ ಮೇಲೆ ಇನ್ನಷ್ಟು ನಿರ್ಬಂಧ, ಈಗ ತಾನೆ ಪ್ರಕಟವಾಗಿರುವ ಆರ್ಥಿಕ ಸಮೀಕ್ಷೆಯು ಬಂಡವಾಳ ಮಾರುಕಟ್ಟೆಯಲ್ಲಿ ಆಗಿರುವ ವೃದ್ಧಿಯನ್ನು ಎತ್ತಿ ತೋರಿದೆ. ಇದರ ಪ್ರಯೋಜನವನ್ನು ಕೇಂದ್ರ ಮತ್ತು ರಾಜ್ಯಗಳು ಸಮಾನವಾಗಿಯೇ ಹಂಚಿಕೊಳ್ಳಬೇಕು."

ಆಮೇಲೆ,

"ಎಲ್ಲಿಯವರೆಗೆ ಕೇಂದ್ರಸರ್ಕಾರವು ತನ್ನ ಯೋಜನೇತರ ವೆಚ್ಚದ ಬೆಳವಣಿಗೆಯನ್ನು ಮತ್ತು ಹಣದುಬ್ಬರದ ಗತಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದಿಲ್ಲವೋ ಅಲ್ಲಿಯವರೆಗೆ ನಾವು ಈ ವಿರೋಧಭ್ಯಾಸ ಪರಿಸ್ಥಿತಿಯನ್ನು ಎದುರಿಸುತ್ತಲೆ ಇರಬೇಕಾಗುತ್ತದೆ."

ಎಂದು ಹೇಳಿದ್ದಾರೆ. ಆಮೇಲೆ ಹಣದುಬ್ಬರದ ಬಗ್ಗೆ ಇನ್ನೂ ಒಂದು ವಿಚಾರ ಹೇಳಿದ್ದಾರೆ. ಅದೇನೆಂದರೆ,

"ವೇತನ ಶ್ರೇಣಿಗಳ ಪರಿಷ್ಕರಣ ಮತ್ತು ಭತ್ಯಗಳ ಪರಿಷ್ಕರಣದಿಂದಾಗಿ ಒಂದು ಪೂರ್ಣ ವರ್ಷದಲ್ಲಿ ೧೦೦ ಕೋಟಿ ರೂಪಾಯಿಗಳ ಹೆಚ್ಚಿನ ವೆಚ್ಚ ಆಗಬಹುದೆಂದು ಅಂದಾಜು ಮಾಡಲಾಗಿದೆ. ಇದೊಂದು ದೊಡ್ಡ ಆರ್ಥಿಕ ಭಾರ. ಈ ಭಾರ ಜನತೆಯ ಮೇಲೆ ಬೀಳುತ್ತದೆ ಎಂಬುದನ್ನೂ ಮತ್ತು ಸಂಬಳ ಸಾರಿಗೆಯ ಮೇಲೆ ಇಷ್ಟು ಹೆಚ್ಚುವರಿ ಖರ್ಚು ಮಾಡಬೇಕಾದ್ದರಿಂದ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗುವುವು ಎಂಬುದನ್ನೂ ಪ್ರತಿಯೊಬ್ಬ ಸರ್ಕಾರಿ ನೌಕರನೂ ಗಮನಿಸಬೇಕು. ಸರ್ಕಾರಿ ನೌಕರರು ದಕ್ಷತೆಯಿಂದ ಪ್ರಜ್ಞಾಪೂರ್ವಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಜನತೆಯ ಸೇವೆಯನ್ನು ಮಾಡುವರೆಂದು ನಾನು ಹಾರೈಸುತ್ತೇನೆ."

ಎಂದು ಉಪದೇಶ ಮಾಡಿದ್ದಾರೆ. ತಿಳುವಳಿಕೆ ಕೊಟ್ಟಿದ್ದಾರೆ. ಇಷ್ಟೆಲ್ಲಾ ಹಣದುಬ್ಬರ ಏಕೆ ಆಯಿತು ? ಆಮೇಲೆ ಈ ಹಣದುಬ್ಬರದ ಬಗ್ಗೆ ಕೇಂದ್ರಸರ್ಕಾರಕ್ಕೆ ಏನು ಒಂದು ಮನವಿಯನ್ನು ಕೊಟ್ಟಿದ್ದರೆ ಆ ಮನವಿಯನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದ್ದರೆ ಈ ಹಣದುಬ್ಬರ. ಈ ನಮ್ಮ ಹೆಚ್ಚಿನ ತೆರಿಗೆಗಳು ನಮಗೆ ಬೀಳುತ್ತಾ ಇರಲಿಲ್ಲ ಎಂದು ನನಗೆ ಅನ್ನಿಸುತ್ತದೆ. ಇದು ಕೇಂದ್ರಸರ್ಕಾರದ ಮೇಲೆ ರಾಜ್ಯ ಸರ್ಕಾರ ಘರ್ಷಣೆಗೆ ಇಳಿದಿದೆ ಎಂದು ಅಲ್ಲ. ಆದರೆ ರಾಜ್ಯ ಸರ್ಕಾರ ಏನು ತನ್ನ ಆರ್ಥಿಕ ಬೇಡಿಕೆಯನ್ನು ಇಟ್ಟಿದೆಯೋ ಅದನ್ನು ಆಲೋಚನೆ ಮಾಡಿದಾಗ ಈ ಮಾತು ಆಡಬೇಕಾಗುತ್ತದೆ, ಆಮೇಲೆ 'ಸರ್ಕಾರದ ನಾಲ್ಕು ವರ್ಷಗಳ ಸಾಧನೆ' ಎಂಬ ಪುಸ್ತಕದಲ್ಲಿ ಏನು ಹೇಳಿದ್ದಾರೆಂದರೆ ;

"ಪರಿಮಿತ ಸಂಪನ್ಮೂಲ ಹೊಂದಿರುವ ರಾಜ್ಯಸರ್ಕಾರಗಳಿಗೆ ಭಾರಿ ವೆಚ್ಚದ ಅನಿರೀಕ್ಷಿತ ಹೊರೆಗಳಿಂದ ಸಹಿಸಲು ಸಾಧ್ಯವಾಗದ ಹೊರೆಯಾಗುತ್ತದೆ. ಪ್ರವಾಹ ಪರಿಹಾರಕ್ಕಾಗಿ ನೀಡುವ ನೆರವನ್ನು ಪೂರ್ಣವಾಗಿ ಅನುದಾನವೆಂದು ಕೇಂದ್ರಸರ್ಕಾರ ಪರಿಗಣಿಸಬೇಕು ; ಹಾಗೇ ಅಭಾವ ಪರಿಹಾರಕ್ಕಾಗಿ ನೀಡುವ ಹಣದ ಅರ್ಧ ಭಾಗವನ್ನು ಅನುದಾನವನ್ನಾಗಿ ಪರಿಗಣಿಸಿ ಉಳಿದ ಅರ್ಧವನ್ನು ಸುಲಭದರ ಸಾಲವೆಂದು ಪರಿಗಣಿಸಬೇಕು. ಇದು ರಾಜ್ಯ

ಸರ್ಕಾರದ ಮೊತ." ಆದಗೆ ಅಭಾವ ಪರಿಹಾರ ನೆರವಿಗೆ ಮಿತಿಯನ್ನು ಗೊತ್ತು ಮಾಡುವ ಕೇಂದ್ರಸರ್ಕಾರ ಆ 'ಮಿತಿ'ಗೊಳಪಟ್ಟ ಹಣವನ್ನೂ 'ಸಾಲ'ದ ರೂಪದಲ್ಲೇ ನೀಡುತ್ತದೆ."

ಅವರು ಕೆಲವು ಬೇಡಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ಇಟ್ಟಿದ್ದಾರೆ. ಆಮೇಲೆ,

"ಕೇಂದ್ರದ ನೆರವು ಒದಗುವುದು ತುಂಬ ವಿಳಂಬವಾಗಿ, ಆ ವೇಳೆಗೆ ರಾಜ್ಯದಲ್ಲಿ ಪರಿಸ್ಥಿತಿಯು ಮತ್ತಷ್ಟು ಹದಗೆಟ್ಟಿರುತ್ತದೆ. ಜೊತೆಗೆ ಕೇಂದ್ರ ಪ್ರತಿ ಬಾಬಿಗಿಷ್ಟು ಎಂಬ ಕಟ್ಟನ್ನೂ ವಿಧಿಸಿರುವುದರಿಂದ ಕೆಲವೊಮ್ಮೆ ದೊರೆತ ನೆರವೂ ಅವಾಸ್ತವಿಕವಾಗುತ್ತದೆ."

ಎಂದು ಕೆಲವು ಸೂಚನೆಗಳನ್ನು ಅವರು ಮಾಡಿದ್ದಾರೆ. ಆಮೇಲೆ,

"ಸ್ಥಳೀಯ ಅಗತ್ಯಕ್ಕೆ ಅನುಗುಣವಾಗಿ ಗೊತ್ತುಪಡಿಸಲಾದ ಬಾಬುಗಳ ಗರಿಷ್ಠ ಮಿತಿ ಸಡಿಲವಾಗಿರಬೇಕು. ಕೇಂದ್ರದ ನೆರವನ್ನು ರಾಜ್ಯದ ಯೋಜನಾ ವೆಚ್ಚಕ್ಕೆ ಗಂಟುಹಾಕ ಬಾರದು. ಹೀಗೆ ಮಾಡಿದರೆ ಯೋಜನಾವೆಚ್ಚ ತಗ್ಗುತ್ತದೆ. ನೆರವು ವಾಸ್ತವಿಕವಾಗಿ ನೆರ ವಾಗಿರಬೇಕೇ ಹೊರತು ಉತ್ಸಾರ ಹಾಕಿಕೊಳ್ಳುವ ಮುಂಗಡವಾಗಬಾರದು. ಗರಿಷ್ಠ ಮಿತಿಗಳನ್ನು ಬಾಬುಗಳಿಗೆ ಗೊತ್ತು ಮಾಡುವ ಸೂತ್ರ ಮತ್ತು ಅದರ ಆಧಾರದ ಸ್ಪಷ್ಟ ತಿಳುವಳಿಕೆ ರಾಜ್ಯಕ್ಕೆ ಇರಬೇಕು ಆಳವಾಗಿ ಕೊರೆಯುವ ರಿಗ್, ನೀರಿನ ಟ್ಯಾಂಕರ್‌ಗಳಿ ಗಾಗಿ ಮಾಡಿದ ವೆಚ್ಚವನ್ನು ಬಂಡವಾಳದ ವೆಚ್ಚವನ್ನಾಗಿ ಪರಿಗಣಿಸಿ, ಕೇಂದ್ರ ಸರ್ಕಾರ ಭರಿಸ ಬೇಕು, ಖುಷ್ಕಿ ಬೇಸಾಯದ ಅಭಿವೃದ್ಧಿ ತುಂತುರು ನೀರಾವರಿಯಂಥ ದೀರ್ಘಾವಧಿ ಬರ ನಿವಾರಣೆ ಕಾರ್ಯಗಳೂ ಬರಪೀಡಿತ ರಾಜ್ಯಗಳಿಗೆ ಯೋಜನಾ ವೆಚ್ಚದಲ್ಲಿ ಅಡಕಗೊಳ್ಳ ಬೇಕು."

ಎಂದು ಇದೆ. ಇದು ಕೇವಲ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿಲ್ಲ. ಬಹುತೇಕ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆ. ಇದರಲ್ಲಿ ಆರ್ಥಿಕ ವಿಕೇಂದ್ರೀಕರಣದ ಮಾತು ಕೂಡ ಇದೆ. ಅಧಿಕಾರ ವಿಕೇಂದ್ರೀ ಕರಣ ಮತ್ತು ಆರ್ಥಿಕ ವಿಕೇಂದ್ರೀಕರಣ ಕೂಡ ಇದೆ. ಈಗ ಏನಾಗಿದೆಯೆಂದರೆ ನಾವು ಇಷ್ಟೆಲ್ಲಾ ಮೊರೆ ಇಟ್ಟರೂ ಕೂಡ ನಮ್ಮ ಸ್ಥಿತಿ ಹೇಗಿದೆಯೆಂದರೆ ಒಂದು ಕಥೆ ಹೇಳುತ್ತಿದ್ದರು. ಅದು ಈಗ ಜ್ಞಾಪಕಕ್ಕೆ ಬರುತ್ತಿದೆ. ಏನು ಗುಬ್ಬಕ್ಕ ಬಾಗಿಲು ತೆಗಿ ಎಂದು. ಅದು ಬಹಳ ಅರ್ಥಗರ್ಭಿತವಾಗಿದೆ, ನಮ್ಮ ಊರಿ ನವರಾದ ಎಲ್.ವಿ. ಪಾಟೀಲರು ಬರೆದಿದ್ದಾರೆ. ಆ ಕಥೆ ಸ್ವಲ್ಪ ಪದ್ಯರೂಪದಲ್ಲಿದೆ.

೩–೩೦ ಪಿ. ಎಂ.

ಅಜ್ಜಿ ಹೇಳಿದ ಕಥೆಯಲ್ಲಿಯೂ ಕೂಡ ಸಮಾಜ ಕುರಿತು ಅಂಶ ಇದೆ.

"ಕಾರೆಂಬ ಕತ್ತಲು, ಘೋರೆಂಬ ಸುರಿಮಳೆ ಸುರಿದು ಕಾಗಕ್ಕನ ಸಗಣಿ ಮನೆ ನೆಲಸಮ ನಾಗಿ ಗುಬ್ಬಕ್ಕನ ಕಲ್ಮನೆಯ ತಲೆಬಾಗಿಲಿಗೆ ಬಂದು ಗುಬ್ಬಕ್ಕಾ, ಗುಬ್ಬಕ್ಕಾ ಬಾಗಿಲ ತೆಗೆಯೆ...

ಉಪಾಧ್ಯಕ್ಷರು.— ಬಡ್ಜೆಟ್ಟಿಗೆ ಹೋಲಿಸಿ ಹೇಳಬೇಕು. ಬರೀ ಅದನ್ನೇ ಹೇಳಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕವಿ ಸಮ್ಮೇಳನ ಮಾಡಿಸೋಣ. ಆ ಕಡೆ ಅವರಿದ್ದಾರೆ. ನಮ್ಮ ಕಡೆ ಇಬ್ಬರು ಇದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.— ಕಾಗಕ್ಕನ ಸ್ಥಾನದಲ್ಲಿ ನಾವಿದ್ದೇವೆ, ಗುಬ್ಬಕ್ಕ ಅವರು, ನೀವು ಏತಕ್ಕೆ ಹೇಳುತ್ತೀರಿ ?

ಶ್ರೀ ಜಿ. ಎಸ್. ದೊಡ್ಡಮೇಟಿ.— ಈ ಕಥೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೂ ಅನ್ವಯ ವಾಗುತ್ತದೆ.

"ಕಾಗಕ್ಕನ ಮನೆ ನೆಲಸಮವಾಗಿ—
ಗುಬ್ಬಕ್ಕನ ಕಲ್ಮನೆಯ ತಲೆ ಬಾಗಿಲಿಗೆ ಬಂದು
ಗುಬ್ಬಕ್ಕಾ, ಗುಬ್ಬಕ್ಕಾ, ಬಾಗಿಲ ತೆಗೆಯೇ
ಗುಬ್ಬಕ್ಕಾ, ಗುಬ್ಬಕ್ಕಾ, ಬಾಗಿಲ ತೆಗೆಯೇ"

ಎಂದು ಕಾಗೆಕ್ಕ ಕಂತ ಕಂಗ್ಗುವವರಿಗೂ ಕೂಗಿದರೂ ಗಂಡನ ಪಕ್ಕದಲ್ಲಿ ಬೆಚ್ಚಗೆ ಮಲಗಿದ ಗುಬ್ಬಕ್ಕನಿಗೆ ಕೇಳಿಸಲಿಲ್ಲ. ಕೇಳಿಸಿದರೂ ಬಡಿದ ಕದ ತೆಗೆಯಲಿಲ್ಲ, ನಮ್ಮ ಹಣೇ ಬರಹ ಕೂಡ ಹಾಗೇ ಆಗಿದೆ. ಎಷ್ಟು ಮೊರೆ ಇಟ್ಟರೂ ಕೇಂದ್ರದವರು ಕದ ಮಾತ್ರ ತೆಗೆಯಲಿಲ್ಲ. ಮಾನ್ಯ ಪ್ರಧಾನಮಂತ್ರಿಯವರು ಕರ್ನಾಟಕದ ಬಗ್ಗೆ ಅಭಿಮಾನ ಇಟ್ಟುಕೊಂಡಿಲ್ಲ ಎಂದು ನಾನು ಹೇಳುವುದಿಲ್ಲ, ಇಟ್ಟುಕೊಂಡಿದ್ದಾರೆ. ವಿಶ್ವಕನ್ನಡ ಸಮ್ಮೇಳನಕ್ಕೆ ಬಂದಾಗ, ಕರ್ನಾಟಕದ ವೈಭವ ಮತ್ತು ಪರಂಪರೆಯ ಬಗ್ಗೆ ಬಹಳ ಹೆಮ್ಮೆಯಿಂದ ಹೇಳಿದ್ದಾರೆ. ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ತಾಳಿಲ್ಲ. ಅವರ ಮಾತಿನಲ್ಲಿಯೇ ಹೇಳುವುದಾದರೆ ಅಷ್ಟೊಂದು ಅಭಿಮಾನದಿಂದ ಹೇಳಿದ್ದಾರೆ. ಅದರ ಜೊತೆಗೆ ಸ್ವಲ್ಪ ಹಣಕಾಸಿನ ನೆರವನ್ನೂ ಕೊಟ್ಟರೆ, ನಾವು ಕೃತಜ್ಞತೆಯನ್ನು ಕೂಡ ಸಲ್ಲಿಸುವುದಕ್ಕೆ ಬರುತ್ತದೆ. ಬಹಳ ಚೆನ್ನಾಗಿ ಹೇಳಿದ್ದಾರೆ.

> "ಕರ್ನಾಟಕದ ಇತಿಹಾಸ ಬಹಳ ಪುರಾತನವಾದುದು, ನಮ್ಮ ನಾಡಿನ ಸುಂದರವಾದ ಮಂಗಳೂರು, ಕೊಡಗಿನ ಗಿರಿಗಳು, ಉತ್ತರದ ಗಂಡುನೆಲ, ಕೋಲಾರದ ಚಿನ್ನ, ಬೆಂಗಳೂರಿನ ರೇಷ್ಮೆ, ಚಿಕ್ಕಮಂಗಳೂರಿನ ಕಾಫಿ..."

ಶ್ರೀ ಬಿ. ಎಸ್. ಯಡಿಯೂರಪ್ಪ.— ಇದು ಸುಂದರವಾದಂಥ ನಾಡು, ಈ ನಾಡಿನಲ್ಲಿ ಇಷ್ಟೆಲ್ಲಾ ಇದ್ದರೂ ಅದನ್ನು ಉಪಯೋಗ ಮಾಡಿಕೊಂಡು ಆಡಳಿತ ನಡೆಸುತ್ತಿಲ್ಲ, ಅದನ್ನು ಉಪಯೋಗಿಸಿಕೊಳ್ಳಿ ಎಂದು ಹೇಳಿದ್ದಾರೆ.

ಕೇಂದ್ರದ ಮಾನ್ಯ ಶಂಕರಾನಂದ ಅವರು ಈ ಬಗ್ಗೆ ಪರಿಶೀಲಿಸುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಅದು ಇನ್ನೂ ಪರಿಶೀಲನೆಯ ಹಂತದಲ್ಲಿಯೇ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ತಮ್ಮ ತಂದೆಯವರು ಈಗ ಇಲ್ಲ. ಅವರು ಮೇಲೆ ಇದ್ದು ನೋಡುತ್ತಿದ್ದಾರೆ. ಅವರು ಇದ್ದಾಗ ಏನೇನು ಕೊಡುತ್ತಿದ್ದರು ಅದಕ್ಕಿಂತಲೂ ಏನೂ ಕಡಿಮೆ ಕೊಟ್ಟಿಲ್ಲ. ಈಗ ಏನಾಗಿದೆ, ಯಾವುದೇ ರೀತಿಯಿಂದ ಕೊಟ್ಟಿದ್ದನ್ನು ಸದ್ವಿನಿಯೋಗ ಮಾಡಿಕೊಂಡು, ಅದರಿಂದ ಜನರಿಗೆ ಸದುಪಯೋಗ ಮಾಡುವುದು ನಮ್ಮದು ನಿಮ್ಮದು ಕೂಡಾ ಇದೆ. ಈಗ ಇಲ್ಲಿ ಗುಬ್ಬವ್ವ, ಕಾಗವ್ವನ ಕಥೆ ಬೇಡ.

ಶ್ರೀ ಜೆ ಎಸ್. ದೊಡ್ಡಮೇಟಿ.—ಇನ್ನು ಸಮಗ್ರ ಗ್ರಾಮೀಣ ಅಭಿವೃದ್ಧಿ ವಿಷಯವನ್ನು ಹೇಳಬೇಕೆಂದರೆ ಇಲ್ಲಿ ಅಧಿಕಾರಿಶಾಹಿ ಬಹಳ ಕೆಟ್ಟ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ಜನರ ಬಗ್ಗೆ ಅನುಕಂಪ ಇಲ್ಲ ಎನ್ನುವ ಮಾತನ್ನು ನಾವು ಹೇಳಬೇಕಾಗಿದೆ. ಈಗ ಒಂದೇ ಒಂದು ಉದಾಹರಣೆ ತೆಗೆದುಕೊಂಡರೆ ಯಾವುದೇ ತಾಲ್ಲೂಕಿನಲ್ಲಿ ಕೃಷಿ ಹಾಗೂ ಭೂ ಅಭಿವೃದ್ಧಿ ಬ್ಯಾಂಕ್ ಇರುತ್ತದೆ ಇದು ರೈತರಿಗೆ ಮೀಸಲಾಗಿರುವ ಬ್ಯಾಂಕ್. ಆದರೆ ಅದು ಈಗ ಏನಾಗಿದೆ, ಎಂದರೆ ನಬಾರ್ಡ್‌ನ ಅಂಕಿತದೊಳಗೆ ಕೇಂದ್ರೀಕೃತ ಎನ್ನುವ ಮಾತು ಬರುತ್ತದೆ, ವಸೂಲಾತಿ ಕಡಿಮೆ ಮಾಡಿದ್ದರೆ ಅಲ್ಲಿ ರೈತರಿಗೆ ಸಾಲ ಕೊಡುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಯಾರು ಸರಿಯಾಗಿ ಸಾಲವನ್ನು ವಸೂಲು ಮಾಡಿಲ್ಲವೋ ಆ ಬ್ಯಾಂಕುಗಳಿಗೆ ಹಣಕಾಸಿನ ನೆರವನ್ನು ಕೊಟ್ಟಿಲ್ಲ. ಸಾಲ ಉಳಿಸಿದವನಿಗೆ ಸಾಲ ಕೊಡಬೇಡಿ, ಅದು ಬೇರೆ ವಿಚಾರ. ಹೊಸದಾಗಿ ನೀರಾವರಿ ಬಾವಿಗಳಿಗೆ, ಪಂಪುಸೆಟ್ಟುಗಳಿಗೆ, ಹಣಕಾಸಿನ ನೆರವು ಕೊಟ್ಟರೆ ಅದರ ಬಗ್ಗೆ ನಬಾರ್ಡ್‌ನವರು ಆತಂಕ ಒಡ್ಡುತ್ತಾರೆಯೋ ಹೇಗೆ ಎನ್ನುವುದನ್ನು ವಿಚಾರ ಮಾಡಬೇಕು. ಆ ಒಂದು ವಿಷಯದ ಬಗ್ಗೆ, ಆ ಸಾಲಗಳನ್ನು ಕೊಡತಕ್ಕದ್ದರ ಬಗ್ಗೆ ಮೇಲುಕು ಹಾಕಿ ನೋಡಿದಾಗ ಅಧಿಕಾರಿಶಾಹಿ ಹೇಗೆ ಇದೆ, ಎನ್ನುವುದನ್ನು ಅವರದೇ ಭಾಷೆಯಲ್ಲಿ ಇಲ್ಲಿ ಹೇಳಿದರೆ ತಪ್ಪಾಗುವುದಿಲ್ಲ. ವಿಕೇಂದ್ರೀಕರಣ ಮತ್ತು ದಾರಿದ್ರ್ಯ ನಿವಾರಣೆ, ಇದರಲ್ಲಿ "ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ" ಎಂದು ಹೇಳುತ್ತಾ ಮುಂದೆ ಏನು ಹೇಳಿದ್ದಾರೆ ಎಂದರೆ.

> "ದಾರಿದ್ರ್ಯ ನಿವಾರಕ ಕಾರ್ಯಕ್ರಮಗಳು ಉದ್ದೇಶಿತ ಫಲ ನೀಡದಿರಲು ಕಾರಣವೇನೆಂದರೆ ಭ್ರಷ್ಟಾಚಾರಭರಿತ ಕೆಳಹಂತದ ಅಧಿಕಾರಿಶಾಹಿ ಮತ್ತು ಗ್ರಾಮೀಣ ಅಧಿಕಾರ ವ್ಯವಸ್ಥೆಯ ನಡುವಣ ಸಂಬಂಧ. ಬಡತನವು ಒಂದು ಸಾಮಾಜಿಕ ಸಮಸ್ಯೆಯೂ ಹೌದು. ರಾಜಕೀಯ ಸಮಸ್ಯೆಯೂ ಹೌದು. ಮತ್ತು ಆರ್ಥಿಕ ಸಮಸ್ಯೆಯೂ ಹೌದು, ಈ

ವಿಚಾರವನ್ನು ಒಪ್ಪಿಕೊಂಡಮೇಲೆ ದಾರಿದ್ರ್ಯನಿವಾರಕ ಕಾರ್ಯಕ್ರಮಗಳನ್ನು ತಾಂತ್ರಿಕಶಾಹಿ ದೃಷ್ಟಿಯಿಂದ ನೋಡಬಾರದೆನ್ನುವುದು ಸ್ಪಷ್ಟವಾಗುತ್ತದೆ.''

ಇನ್ನು ನಬಾರ್ಡ್‌ಗೆ ಸೇರಿದಂತೆ ಇನ್ನೊಂದು ವಿಚಾರ ಬರೆದಿದ್ದಾರೆ. ಅದೇನೆಂದರೆ,

''ನಬಾರ್ಡ್(ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು) ಸೇರಿದಂತೆ ಅನೇಕ ಕೇಂದ್ರೀಕೃತ ಸಂಸ್ಥೆಗಳು ಮತ್ತು ಇಡೀ ಹಣಕಾಸು ವ್ಯವಸ್ಥೆ ಹಾಗೂ ಕೆಲವು ಸರ್ಕಾರಿ ಇಲಾಖೆಗಳ ಧೋರಣೆಯು ಅಧಿಕಾರಿಶಾಹಿ ತಾಂತ್ರಿಕಶಾಹಿ ರೀತಿಯದು, ಅವುಗಳಿಗೆ ಸಾಮಾಜಿಕ ಬದಲಾವಣೆಯು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಚಲನಶೀಲತೆಯು ಅರಿವಿಲ್ಲ. ಅದಕ್ಕಿಂತ ಹೆಚ್ಚಾಗಿ, ಅವು ಗ್ರಾಮ ಪರಿಸರಕ್ಕೆ ''ಹೊರಗಿನವುಗಳಾದ'' ನಗರಜಾತವ್ಯವಸ್ಥೆಗಳು. ಈ ಸಂಸ್ಥೆಗಳ ವಿಧಿವಿಧಾನಗಳೇ ಈ ಬದಲಾವಣೆಗೆ ವಿರುದ್ಧವಾದವುಗಳು. ಅವು ತಮ್ಮ ಅರ್ಜಿಪತ್ರಗಳು ಮತ್ತು ಕಾರ್ಯ ವಿಧಾನಗಳಿಂದಲೇ, ಹಳ್ಳಿಗರನ್ನು ಬೆದರಿಸಿಬಿಡುತ್ತವೆ. ಅಧಿಕಾರಿಶಾಹಿ ಸಂಸ್ಥೆಗಳಾಗಿರುವುದರಿಂದ ಅವುಗಳ ಸಿಬ್ಬಂದಿ ವರ್ಗದಲ್ಲಿನೇಕರು ತಮ್ಮ ಜೀವನದಲ್ಲಿ ಸಂಬಳದ ಹೊರತಾಗಿ ಇನ್ನಾವುದಕ್ಕೂ ಬದ್ಧರಾಗಿರುವುದಿಲ್ಲ. ಸಂವೇದನಾ ಶೀಲ, ಸಹೃದಯಿಗಳು, ಸಹಾಯಕ ಮನೋಭಾವವುಳ್ಳವರು ಮತ್ತು ಸ್ಥಳೀಯ ಜನತೆಯನ್ನರಿತವರು ಮಾತ್ರ ಮಾರ್ಪಾಡನ್ನು ಮಾಡಬಲ್ಲರು. ಕೆಲವು ಅಧಿಕಾರಿಶಾಹಿ ಸಂಸ್ಥೆಗಳು ಅನಿವಾರ್ಯವಾಗಿರಬಹುದೇನೋ.''

ಇದು ಬಹಳ ನೆಟ್ಟಗೆ ಎನ್ನುವ ಮಾತು ಬರುತ್ತದೆ. ಕರ್ನಾಟಕದ ಅಧಿಕಾರಶಾಹಿ ಅಲ್ಲ,

''ಇಡೀ ಭಾರತದ ಅಧಿಕಾರಿಶಾಹಿಯು ಕೆಳಹಂತದಲ್ಲಿನ ಅನೇಕರು ಹಾಜರಾತಿಗಾಗಿ ಸರ್ಕಾರದ ವೇತನ ಪಡೆಯುವ, ಕೆಲಸ ಮಾಡದ ಪರಾವಲಂಬಿಗಳು. ಅವರಲ್ಲಿ ಅನೇಕರು ತಮ್ಮ ತುಟ್ಟಿಭತ್ಯೆಯ ಪ್ರಶ್ನೆಯನ್ನು ಬಿಟ್ಟರೆ ಇನ್ನಾವುದಕ್ಕೂ ಒಟ್ಟಾರೆ ಸ್ಪಂದಿಸದೆ ಇರುವಂತಹವರು.''

ಇದು ಅಕ್ಷರಶ: ಸತ್ಯ. ಅಲ್ಲದೆ ಕೃಷಿಕರಮೇಲೆ ಕೂಡ ತೆರಿಗೆಗಳಿವೆ. ಇವೊತ್ತು ಈ ಒಕ್ಕಲುತನ ಏನಿದೆ ಇದು ಲಾಭ ದಾಯಕ ಉದ್ದಿಮೆಯೋ ? ಹೇಗೆ ? ಎಂಬುದನ್ನೂ ಕೂಡ ನಾವು ವಿಚಾರಮಾಡಿನೋಡಬೇಕಾದ ಪರಿಸ್ಥಿತಿ ಬಂದಿದೆ. ಒಬ್ಬ ಸರ್ಕಾರೀ ನೌಕರದಾರನಿಗೆ, ಅಂದರೆ ಒಬ್ಬ ಸಿಪಾಯಿಗೂ ಕೂಡ ಒಂದು ವರ್ಷಕ್ಕೆ ಕನಿಷ್ಟ ೧೨ ಸಾವಿರ ರೂಪಾಯಿ ಇನ್ನುಮೇಲೆ ಬರುತ್ತದೆ. ಅದೇ ಒಕ್ಕಲುತನ ಮಾಡುವವನು ತನ್ನ ಭೂಮಿಯನ್ನು ಉತ್ತು, ಬಿತ್ತಿ, ಬೇಸಾಯ ಮಾಡಿದರೂ ಕೂಡ ೧೨ ಸಾವಿರ ರೂಪಾಯಿಯ ಉತ್ಪತ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಚೆನ್ನಾಗಿ ಮಳೆ ಬಿದ್ದರೆ ಪರವಾಗಿಲ್ಲ. ಆದರೂ ಕೂಡ ತನ್ನ ಎಲ್ಲಾ ಜಮೀನಿನಲ್ಲೂ ಬೆಳೆಯನ್ನು ತೆಗೆದು ಖರ್ಚನ್ನು ಕಳೆದಾಗ ವರ್ಷಕ್ಕೆ ೧೨ ಸಾವಿರ ರೂಪಾಯಿಗಳ ನಿವ್ವಳ ಆದಾಯ ಬರುತ್ತದೆಯೆ ? ಅಷ್ಟು ಬರಬೇಕಾದರೆ ಅವನಿಗೆ ಜಮೀನು ಎಷ್ಟಿರಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಬಹುತೇಕ ಜನರು ಏನಾದರೂ ಮಾಡಿ ನಾವೂ ಕೂಡ ನೌಕರದಾರರಾಗಬೇಕೆಂದು ಆಸೆಪಡುತ್ತಿದ್ದಾರೆ. ಇದಕ್ಕೆ ಕಾರಣ ಒಕ್ಕಲುತನಕ್ಕಿಂತ ನೌಕರಿ ಲಾಭದಾಯಕ ಎಂಬುದನ್ನು ತಿಳಿದುಕೊಂಡು ನೇಗಿಲನ್ನು ಹೆಗಲಮೇಲಿನಿಂದ ತೆಗೆದು ಒಂದು ಮೂಲೆಯಲ್ಲಿಟ್ಟು ನೌಕರಿಗೋಸ್ಕರ ೮-೧೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ನೌಕರಿಗೆ ಸೇರಿಕೊಳ್ಳಲು ಹೋಗುತ್ತಿದ್ದಾರೆ. ಒಕ್ಕಲುತನವನ್ನು ಬಿಟ್ಟು ನೌಕರಿಗಾಗಿ ಬಡಿದಾಡಿಕೊಂಡು ಹೋಗುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ, ನಮ್ಮ ಊರಿನಲ್ಲಿ ಒಬ್ಬ ವ್ಯಕ್ತಿ ೧ ಕೂರಿಗೆ ಹೊಲವನ್ನು ಮಾರಾಟ ಮಾಡಿ ಸುಮಾರು ೩೪ ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿ ಕೊಟ್ಟು ಈಗ್ಗೆ ೫-೬ ವರ್ಷಗಳ ಹಿಂದೆ ಸಿಪಾಯಿ ಕೆಲಸಕ್ಕೆ ಸೇರಿಕೊಂಡ. ಆತ ಹಾಗೇಕೆ ಮಾಡಿದ ಎಂದು ತಾವು ಕೇಳಬಹುದು. ಇವೊತ್ತಿನ ಪರಿಸ್ಥಿತಿಯಲ್ಲಿ ಒಕ್ಕಲುತನಕ್ಕಿಂತ ಹೆಚ್ಚಿನ ಉತ್ಪನ್ನವನ್ನು ಕೊಡತಕ್ಕದ್ದು ಎಂದರೆ ನೌಕರಿ. ಅದೇ ಉತ್ತಮ ಭೂಮಿ, ಎಂದು ತಿಳಿದುಕೊಂಡು ತನ್ನ ಭೂಮಿಯನ್ನು ಮಾರಾಟಮಾಡಿ ನೌಕರಿಗೆ ಸೇರಿಕೊಂಡ. ನಾವು ಬೆವರು ಸುರಿಸಿ ಒಕ್ಕಲುತನವನ್ನು ಮಾಡಿದರೆ ಲಾಭ ಬರುವುದಿಲ್ಲ ಎನ್ನುವ ಮಾತನ್ನು ಇಲ್ಲಿ ನಾನು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಮೇವು ಅಭಿವೃದ್ಧಿಗೋಸ್ಕರ ಸ್ವಲ್ಪ ಮಟ್ಟಿನ ಹಣವನ್ನು ಇಟ್ಟಿದ್ದಾರೆ. ಮೇವು ಅಭಿವೃದ್ಧಿಯಾದರೆ ಅದನ್ನು ತಿನ್ನುವುಕ್ಕೆ ನಮ್ಮ ಪಶುಗಳೂ ಕೂಡ ಇರಬೇಕು. ಆದರೆ ಬರುಬರುತ್ತಾ ಪಶುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಪಶುಗಳು ಖಾಯಿಲೆಯಿಂದ ಕ್ಷೀಣಿಸಿ ಸಾಯುವುದನ್ನು ತಡೆಗಟ್ಟಬೇಕಾದರೆ ಪಶುಗಳ ದವಾಖಾನೆಯನ್ನು ಅವಶ್ಯವಿರುವ ಕಡೆಗಳಲ್ಲೆಲ್ಲಾ ತೆರೆಯಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಪಶುಗಳನ್ನೇ ತಿಂದುಹಾಕಿದರೆ ನೀವು ಮೇವನ್ನು ಏನು ಮಾಡುತ್ತೀರಿ?

ಶ್ರೀ ಜ್ಞಾನದೇವ್ ದೊಡ್ಡಮೇಟಿ.— ಹಳ್ಳಿಗಳ ಕಡೆ ತಾವು ಹೋದಾಗ ನೋಡಬಹುದು. ಮನುಷ್ಯರ ದವಾಖಾನೆಯನ್ನು ಒತ್ತಟ್ಟಿಗೆ ಒಗೆಯಿರಿ, ನಮಗಿಂತ ಮುಖ್ಯವಾಗಿ ಪಶುಗಳು ಬದುಕಬೇಕು. ಆದ್ದರಿಂದ ಪಶುಗಳ ದವಾಖಾನೆಗಳನ್ನು ತೆರೆಯಿರಿ ಎಂದು ಹೇಳುತ್ತಾರೆ. ಮಾನವೀಯ ಗುಣ ಅವರಲ್ಲಿದೆ. ನಾವು ಹೋದ ಕಡೆಗಳಲ್ಲೆಲ್ಲಾ ಜನಗಳಿಂದ ಈ ಮಾತನ್ನು ಕೇಳಿದ್ದೇವೆ. ನಮ್ಮ ಬಜೆಟ್‌ನಲ್ಲಿ ಪಶುಗಳ ದವಾಖಾನೆಗಳನ್ನು ತೆರೆಯಲು ಹಣವನ್ನು ಇಟ್ಟಿಲ್ಲ. ಆದರೆ ಮೇವನ್ನು ಬೆಳೆಯುವುದಕ್ಕೆ ಹಣವನ್ನು ಈ ಬಜೆಟ್‌ನಲ್ಲಿ ತೋರಿಸಿದ್ದಾರೆ.

ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತರುವುದು ಏನೆಂದರೆ ಮನುಷ್ಯರ ದವಾಖಾನೆಗಳನ್ನು ತೆರೆಯುವುದಕ್ಕಿಂತಲೂ ಪಶುಗಳ ದವಾಖಾನೆಗಳನ್ನು ತೆಗೆಯಲು ಬಜೆಟ್‌ನಲ್ಲಿ ಹಣವನ್ನು ಇಡಬೇಕು. ಇನ್ನು ಸರ್ಕಾರದವರು ಸಹಕಾರಿ ಸಂಘಗಳ ಮೂಲಕ ಸಾರಾಯಿ ಮಾರಾಟ ಮಾಡುವುದು ಎಂದರೆ ಸ್ವಲ್ಪ ತಪ್ಪಾಗುತ್ತದೆ ಸಹಕಾರಿ ಸಂಘಗಳು ಸ್ವಲ್ಪಮಟ್ಟಿಗೆ ಸರಿಯಾಗಿ ನಡೆಯುತ್ತಿದೆ. ಅದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ಇದರಿಂದ ಬಹುತೇಕ ಮಕ್ಕಳು ದಾರಿ ತಪ್ಪಿ ನಡೆಯಲಿಕ್ಕೆ ಸಾಧ್ಯವಾಗುತ್ತದೆ. ಪ್ರತಿಯೊಂದು ಹಳ್ಳಿಗಳಲ್ಲಿಯೂ ಈಗಾಗಲೇ ಸಾರಾಯಿಅಂಗಡಿಗಳನ್ನು ಖಾಸಗಿಯವರು ತೆಗೆದಿದ್ದಾರೆ. ನಮಗೆ ಹಣವನ್ನು ರೂಢಿಸುವುದು ಒಂದು ಮುಖ್ಯ ಉದ್ಯೋಗವಾಗಿದೆ ಎಂದರೆ ಇನ್ನು ನಾವು ಏನು ಮಾಡಬೇಕು. ಯಾವ ರೀತಿ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು. ಎನ್ನುವಬಗ್ಗೆಯೂ ಕೂಡ ನಾವು ಚಿಂತನೆಯನ್ನು ಮಾಡಬೇಕು. ಒಮ್ಮೊಮ್ಮೆ ಅನಿಸುತ್ತದೆ ಇದುಒಂದು ರೀತಿ ಪಾಪದ ಹಣವೆಂದು. ಸೆರೆ ಅಂಗಡಿಗಳ ಅನುಭವ ಪಡೆದವರು ಇರುತ್ತಾರೆ. ಅದು ನನಗೆ ಗೊತ್ತಿಲ್ಲ.

ಮತ್ತೊಂದು ವಿಚಾರವೇನೆಂದರೆ ಕೆಲವೊಂದು ಹಣವನ್ನು ವೃದ್ಧಾಪ್ಯವೇತನ ಮತ್ತು ವಿಧವೆಯರಿಗೆ ಮಾಶಾಸನದ ಮೂಲಕ ಕೊಡುತ್ತಿರುತ್ತಾರೆ. ವೃದ್ಧಾಪ್ಯವೇತನ ಕೊಡುವುದರಲ್ಲಿ ಬಹಳಷ್ಟು ಅಪವ್ಯಯವಾಗುತ್ತಿದೆ. ಅದರ ಬಗ್ಗೆಯೂ ಕೂಡ ನಾವು ಆಲೋಚನೆ ಮಾಡಬೇಕು. ಆರೋಗ್ಯವಾಗಿರತಕ್ಕಂಥವರು, ಗಟ್ಟಿಯಾಗಿರುವವರೂ ಕೂಡ ಒಮ್ಮೊಮ್ಮೆ ಇದನ್ನು ಪಡೆದುಕೊಳ್ಳುತ್ತಿರುತ್ತಾರೆ. ವೃದ್ಧಾಪ್ಯವೇತನವನ್ನು ಕೊಡುವುದಕ್ಕೆ ಬದಲಾಗಿ ತಾಲ್ಲೂಕಿಗೆ ಒಂದೆರಡು ವೃದ್ಧಾಶ್ರಮವೆಂದು ತೆಗೆದರೆ ಯಾರ ಪರಿಸ್ಥಿತಿ ಕೆಟ್ಟದು ಇರುತ್ತದೆಯೋ ಅವರು ಬಂದು ಅಲ್ಲಿ ಸೇರಿಕೊಳ್ಳುತ್ತಾರೆ, ಬಹುಶಃ ಗಟ್ಟಿಯಾಗಿರುವವರು ಅಲ್ಲಿಗೆ ಬರಲಿಕ್ಕೆ ಸಾಧ್ಯವೇ ಆಗುವುದಿಲ್ಲ. ಏತಕ್ಕೆಂದರೆ ಅವರುಗಳು ತಮ್ಮ ಮೊಮ್ಮಕ್ಕಳನ್ನು ಬಿಟ್ಟು ಬರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅದನ್ನು ಕೂಡ ವಿಚಾರಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಗಣಿ ಇಲಾಖೆಯವರನ್ನು ತೆಗೆದುಕೊಂಡರೆ ಇದರಲ್ಲಿ ಬಹುತೇಕ ಹಣ ಸೋರಿ ಹೋಗುತ್ತಿದೆ ಬಹುತೇಕ ಇನ್ನೊಂದು ದಶಕದೊಳಗೆ ಗುಡ್ಡಗಳು ಉಳಿಯುತ್ತವೋ ಇಲ್ಲವೋ ಎನ್ನುವ ಸಮಸ್ಯೆ ಬರುತ್ತಿದೆ. ಮೋಡಗಳನ್ನು ತಡೆಗಟ್ಟಲು ಗುಡ್ಡಗಳು ಇಲ್ಲದಿದ್ದರೆ ನಾಳೆ ನಮ್ಮ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ ದುಡ್ಡು ಬರುತ್ತದೆಂಬ ದೃಷ್ಟಿಯಿಂದ ಗುಡ್ಡಗಳನ್ನು ಕಡೆಯುತ್ತಿದ್ದರೆ ನೈಸರ್ಗಿಕ ಸಮತೋಲನ ತಪ್ಪಿ ರಾಜ್ಯಕ್ಕೆ ಭೀಕರ ಬರಗಾಲ ಬರುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳಿ, ಮಾನ್ಯ ಅಧ್ಯಕ್ಷರು ಹಾಗೂ ಹೀಗೂ ಇಷ್ಟು ಅವಕಾಶವನ್ನು ಕೊಟ್ಟದ್ದಕ್ಕೆ ಮತ್ತೆ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇವೆ.

ಉಪಾಧ್ಯಕ್ಷರು.— ಮಾನ್ಯ ಎಚ್.ಡಿ. ಚೌಡಯ್ಯನವರು ಅನಾರೋಗ್ಯದ ನಿಮಿತ್ತವಾಗಿ ಕುಳಿತುಕೊಂಡು ಮಾತನಾಡಲು ಅವಕಾಶವನ್ನು ಕೋರಿರುತ್ತಾರೆ. ಆದ್ದರಿಂದ ಅವರಿಗೆ ಮಾನ್ಯ ಸಭೆಯು ಕುಳಿತುಕೊಂಡು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಂಡು ಅವರು ಕುಳಿತುಕೊಂಡು ಮಾತನಾಡಲು ಅವಕಾಶವನ್ನುಕೊಟ್ಟಿರುತ್ತೇನೆ.

† ಶ್ರೀ ಎಚ್. ಡಿ. ಚೌಡಯ್ಯ (ಕೆರಗೋಡು).— ಸನ್ಮಾನ್ಯ ಅಧ್ಯಕ್ಷರ ಮೊಟ್ಟಮೊದಲನೆಯದಾಗಿ ನನ್ನ ಅನಾರೋಗ್ಯದ ಕಾರಣವಾಗಿ ತಾವು ದಯವಿಟ್ಟು ಕುಳಿತುಕೊಂಡು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ೧೯೮೭–೮೮ರ ಬಜೆಟ್ ಏನಿದೆ ಅದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಹೀಗೆ ವಿರೋಧಿಸತಕ್ಕಂಥ ಸಂದರ್ಭದಲ್ಲಿ ಈ ಆಯವ್ಯಯ ಪತ್ರ ರೈತರ ವಿರುದ್ಧವಾದ ಆಯವ್ಯಯ ಪತ್ರ ಎನ್ನುವ ಮಾತನ್ನು ಒತ್ತುಕೊಟ್ಟು ಹೇಳಬಯಸುತ್ತೇನೆ. ಪ್ರಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಆಯವ್ಯಯ ಪತ್ರದ ಮೊದಲನೆಯ ಪೇಜಿನಲ್ಲಿ ಒಂದು ಮಾತನ್ನು ಹೇಳಿದ್ದಾರೆ.

"೧೯೪೭ರಲ್ಲಿ ಬ್ರಿಟೀಷರಿಂದ ಭಾರತ ಸರ್ಕಾರಕ್ಕೆ ಮೊದಲ ಬಾರಿಗೆ ಅಧಿಕಾರವು ವರ್ಗಾವಣೆಯಾದ ನಂತರ ಅಧಿಕಾರದ ಬಹುಭಾಗ ನ್ಯಾಯಬದ್ಧವಾಗಿ ಯಾರಿಗೆ ಸೇರಬೇಕಾಗಿತ್ತೋ ಆ ಜನತೆಗೆ ಅಧಿಕಾರವನ್ನು ವರ್ಗಾಯಿಸಲು ಸುಮಾರು ನಾಲ್ಕು ದಶಕಗಳೇ ಬೇಕಾದವು, ಈ ದೇಶದಲ್ಲಿ ಈ ವರ್ಗಾವಣೆಯಾಗಿರುವ ಏಕೈಕ ರಾಜ್ಯವೆಂದರೆ ಕರ್ನಾಟಕ ಮಾತ್ರ."

ಎನ್ನುವ ಮಾತನ್ನು ಹೇಳಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ಹೊರಗಡೆ ಹೋಗಿದ್ದಾರೆ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಅವರ ಬಾಯಿಂದ ಈ ಮಾತು ಬರಬಾರದಾಗಿತ್ತು. ಇದು ಸತ್ಯಕ್ಕೆ ದೂರವಾದ ಮಾತು. ತಮಗೆ ಗೊತ್ತಿರುವ ಹಾಗೆ ೧೯೪೭ ರಿಂದೀಚೆಗೆ, ಅಂದರೆ ಸ್ವಾತಂತ್ರ್ಯ ಬಂದಮೇಲೆ ಬಹುಶಃ ನಮ್ಮ ಜೀವಿತ ಕಾಲದಲ್ಲಿ ಪಂಚಾಯಿತ ರಾಜ್ಯ ವ್ಯವಸ್ಥೆಯಲ್ಲಿ ಮೂರು ವ್ಯವಸ್ಥೆಗಳನ್ನು ಕಂಡಿದ್ದೇವೆ. ೧೯೪೭ರಲ್ಲಿ ಸ್ವಾತಂತ್ರ್ಯ ಬಂದಾಗ ಹಳೇ ಮೈಸೂರಿನಲ್ಲಿ ಜಿಲ್ಲಾ ಬೋರ್ಡುಗಳು, ಗ್ರಾಮ ಪಂಚಾಯಿತಿಗಳು ಇದ್ದವು. ತದನಂತರ ೧೯೫೯ರಲ್ಲಿ ನಮ್ಮ ಕರ್ನಾಟಕದಲ್ಲಿ ಹೊಸ ಗ್ರಾಮ ಪಂಚಾಯಿತಿ ಹಾಗೂ ಸ್ಥಳಿಯ ಸಂಸ್ಥೆಗಳ ಕಾಯಿದೆ ಆಯಿತು. ದಿವಂಗತ ಬಲವಂತರಾವ್ ಮೆಹತಾರವರ ವರದಿಯನ್ನು ಆದರಿಸಿ ೧೯೫೯ರಲ್ಲಿ ಕಾಯಿದೆಯಾಗಿ ೧೯೬೦ರಲ್ಲಿ ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಬೋರ್ಡುಗಳ ಚುನಾವಣೆಯಾಯಿತು. ಅದು ಅಧಿಕಾರ ವರ್ಗಾವಣೆ ಅಲ್ಲವೇ ಎಂದು ಸರ್ಕಾರವನ್ನು ಕೇಳಬೇಕಾಗಿದೆ. ಅನಂತರ ೩ ಬಾರಿ ತಾಲ್ಲೂಕು ಬೋರ್ಡುಗಳಿಗೆ ಚುನಾವಣೆಯಾಯಿತು, ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ಆಯಿತು. ಅದಾದ ಮೇಲೆ ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆಯಾಗಿದೆ. ಇದು ೩ನೇ ವ್ಯವಸ್ಥೆ ಆದ್ದರಿಂದ ನಮ್ಮ ಜನತಾ ಸರ್ಕಾರದವರು ಹಾಗೂ ಮುಖ್ಯಮಂತ್ರಿಗಳು, ಸ್ವಾತಂತ್ರ್ಯ ಬಂದ ದಿವಸದಿಂದ ಯಾರೋ ಬಚ್ಚಿಟ್ಟುಕೊಂಡ ಅಧಿಕಾರವನ್ನು ಹೊಸದಾಗಿ ತಂದು ಇಲ್ಲಿ ಜನರ ಕೈಗೆ ಕೊಟ್ಟಿದ್ದೇವೆಂಬ ಅರ್ಥ ಬರುವ ರೀತಿಯಲ್ಲಿ ಹೇಳಿರುವುದು ವಿಷಾದದ ಸಂಗತಿ. ಮುಂದಾದರೂ ಇಂಥ ಸತ್ಯಕ್ಕೆ ದೂರವಾದ ಮಾತು ಅವರ ಬಾಯಿಂದ ಬರಬಾರದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ದೇಶದಲ್ಲಿ ಅಧಿಕಾರ ವರ್ಗಾವಣೆ ಆಗಿರತಕ್ಕ ರಾಜ್ಯ ಕರ್ನಾಟಕ ಮಾತ್ರ ಎಂದು ಹೇಳಿದ್ದಾರೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ತಮಗೆ ಗೊತ್ತಿರುವ ಹಾಗೆ ಈ ಸದನದ ಜಂಟೀ ಸಲಹಾ ಸಮಿತಿಯ ಮಾನ್ಯ ಸದಸ್ಯರುಗಳು ಈ ಒಂದು ಕಾಯಿದೆಯನ್ನು ಮಾಡುವುದಕ್ಕೆ ಪೂರ್ವಭಾವಿಯಾಗಿ ಈ ದೇಶದ ೪-೫ ರಾಜ್ಯಗಳಿಗೆ ಹೋಗಿ, ಪಶ್ಚಿಮ ಬಂಗಾಳ, ರಾಜಾಸ್ಥಾನ, ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರವಾಸ ಮಾಡಿ ಅಧ್ಯಯನ ಮಾಡಿ ಮಸೂದೆಯ ಕರಡನ್ನು ತಯಾರು ಮಾಡಿರುವುದು. ಅಂದಮೇಲೆ ಇದೇನು ಹೊಸದಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯಮಂತ್ರಿಗಳು ಈ ಆಯವ್ಯಯ ಪತ್ರದಲ್ಲಿ ಯೋಜನೆ ಹಾಗೂ ಯೋಜನೇತರ ಬಾಬುಗಳಿಗೆ ೯೫೧ ಕೋಟಿ ರೂಪಾಯಿಗಳನ್ನು ವರ್ಗಾವಣೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂಥ ಕಾಗದ ಪತ್ರಗಳನ್ನು ಈಗಾಗಲೇ ನಮಗೆಲ್ಲ ಕಳುಹಿಸಿ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಬಹಳ ಕಳಕಳಿಯಿಂದ ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸುವುದು ಏನೆಂದರೆ ಈ ಒಂದು ವರ್ಗಾವಣೆ ಏನಿದೆ ಇದು ಕೇವಲ ಕಾಗದದ ಮೇಲೆ ಇರಬಾರದು, ನಿಜವಾಗಿ ವರ್ಗಾವಣೆ ಆಗಬೇಕು. ಇಲ್ಲದೇ ಹೋದರೆ ಬಹುಶಃ ಹೊಸದಾಗಿ ಚುನಾವಣೆಯಾಗಿ ಅಸ್ತಿತ್ವಕ್ಕೆ ಬಂದಿರತಕ್ಕ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಏನಿವೆ ಅವುಗಳು ಪ್ರಾರಂಭದಲ್ಲೇ ಒಂದೆರಡು ವರ್ಷ ಕೆಲಸ ಇಲ್ಲದೆ, ಅಭಿವೃದ್ಧಿ ಕಾರ್ಯಗಳನ್ನು ಮಾಡದೆ ಇರಬೇಕಾದ ಪರಿಸ್ಥಿತಿ ಬಂದೀತೆಂಬ ಎಚ್ಚರಿಕೆಯ ಮಾತನ್ನು ಸರ್ಕಾರಕ್ಕೆ ತಮ್ಮ ಮೂಲಕ ಕೊಡಲಿಚ್ಛಿಸುತ್ತೇನೆ.

ಈಗ ಲೋಕೋಪಯೋಗಿ ಮಂತ್ರಿಗಳು ಇದ್ದಾರೆ. ಅವರೇ ಹೇಳಲಿ. ಅವರ ಖಾತೆಗೆ ಸಂಬಂಧಪಟ್ಟಂತೆ ಈ ರಾಜ್ಯದಲ್ಲಿ ೧೯ ಜಿಲ್ಲೆಗಳಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಕಂಟ್ರಾಕ್ಟರಿಗೆ ಪಾವತಿ ಮಾಡಬೇಕಾಗಿದೆ ಎಂಬುದನ್ನು ಹೇಳಲಿ. ಮಂಡ್ಯದಲ್ಲಿ ಹೇಳುವುದಾದರೆ ಇರತಕ್ಕ ಎರಡು ವಿಭಾಗದಲ್ಲಿ ಎರಡೂವರೆ ಕೋಟಿ ರೂಪಾಯಿ ಕಂಟ್ರಾಕ್ಟರಿಗೆ ಪಾವತಿ ಆಗದೆ ಉಳಿದಿದೆ. ಕೇಳಿದರೆ ಎಲ್. ಒ. ಸಿ. ಬಂದಿಲ್ಲವೆಂದು ಹೇಳುತ್ತಾರೆ. ವಿವಿಧ ಬಾಬುಗಳಲ್ಲಿ, ಯೋಜನೆ ಹಾಗೂ ಯೋಜನೇತರ ವಿಭಾಗಗಳಲ್ಲಿ ಏನು ವರ್ಗಾವಣೆ ಮಾಡುತ್ತಿದ್ದಾರೆ ಇದರಲ್ಲಿ ಸಂಪನ್ಮೂಲವನ್ನು ವರ್ಗಾವಣೆ ಮಾಡದೆ ಹೋದರೆ ಈ ಒಂದು ಪಂಚಾಯಿತಿ ಸಂಸ್ಥೆಗಳು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಕೂಡ ಎಂಟು ವರ್ಷಗಳ ಕಾಲ ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ ಇದರ ಕಹಿ ಅನುಭವವನ್ನು ಅನುಭವಿಸಿದ್ದೇನೆ. ಆದ್ದರಿಂದ ಸಕಾಲದಲ್ಲಿ ಈ ಸಂಪನ್ಮೂಲದ ವರ್ಗಾವಣೆ ಆಗಲೇಬೇಕು. ಮತ್ತು ಸಿಬ್ಬಂದಿ ನೇಮಕ ಕೂಡ ಆಗಬೇಕು. ಅದೂ ಕೂಡ ಪರಿಪೂರ್ಣವಾಗಿ ಆಗಬೇಕಾದರೆ ಆರು ತಿಂಗಳು, ೧ ವರ್ಷ ೨ ವರ್ಷ ಆಗಬಹುದು. ಆ ರೀತಿ ಮಾಡದೆ ಸಕಾಲದಲ್ಲಿ ಪ್ರಾರಂಭದಲ್ಲೇ ಸಿಬ್ಬಂದಿ ನೇಮಕ ಮಾಡಬೇಕು. ಸಂಪನ್ಮೂಲದ ವರ್ಗಾವಣೆ ತ್ವರಿತವಾಗಿ ಆಗಬೇಕು ಆ ರೀತಿ ಆದರೆ ಮಾತ್ರ ಪಂಚಾಯಿತಿ ರಾಜ್ಯ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂದು ನನ್ನ ಅನಾರೋಗ್ಯ ಇದ್ದಾಗ್ಯೂ ಕೂಡ ಮಾತನಾಡಬೇಕೆಂಬ ಮನಸ್ಸು ಮಾಡಿದ ಉದ್ದೇಶ ಅದಕ್ಕೆ ಪ್ರಮುಖವಾದ ಕಾರಣ ಇದೆ, ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಆಯವ್ಯಯ ಪತ್ರದ ೧೪ನೇ ಪುಟದ ೩೮ನೇ ಪ್ಯಾರಾದಲ್ಲಿ ವಾಟರ್‌ರೇಟ್ ಮತ್ತು ವಾಟರ್ ಸೆಸ್ ೫೦ ಪರ್ಸೆಂಟ್ ಜಾಸ್ತಿ ಹಾಕಿದ್ದೇವೆ ಎಂಬ ಪ್ರಸ್ತಾವನೆಯನ್ನು ಮಾಡಿದ್ದಾರೆ. ಮತ್ತು ನಿರ್ವಹಣಾ ವೆಚ್ಚ ೪ ರೂಪಾಯಿ ಇದ್ದುದನ್ನು ೧೦ ರೂಪಾಯಿ ಮಾಡಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಇದರಿಂದ ಹದಿನಾಲ್ಕುವರೆ ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆಂಬ ಅಂಕಿಅಂಶವನ್ನೂ ಕೂಡ ನಮಗೆ ಕೊಟ್ಟಿದ್ದಾರೆ. ಈಗತಾನೆ ಸನ್ಮಾನ್ಯ ದೊಡ್ಡಮೆಟಿಯವರು ಹೇಳುತ್ತಿದ್ದರು, ವ್ಯವಸಾಯ ಎಂಬ ಉದ್ಯಮದಿಂದ ರೈತನಿಗೆ ಲಾಭ ಇದೆಯೋ ಇಲ್ಲವೋ ಎಂದು. ರೈತ ಇವತ್ತು ಕಂಗಾಲಾಗಿದ್ದಾನೆ ಎಂಬುದು ಎಲ್ಲರೂ ಒಪ್ಪತಕ್ಕ ವಿಷಯ. ನೀರಿನ ದರ ಅಥವಾ ನಿರ್ವಹಣಾ ವೆಚ್ಚವನ್ನು ಈಗ ಏನು ರೈತ ಕೊಡುತ್ತಿದ್ದಾನೆ ಅದನ್ನು ಕೊಡತಕ್ಕದ್ದೇ ಬಹಳ ಕಷ್ಟವಾಗಿದೆ. ೧೯೭೮–೭೯ರಲ್ಲಿ ಸನ್ಮಾನ್ಯ ದಿವಂಗತ ದೇವರಾಜ ಅರಸು ಅವರು ಸರ್ಕಾರ ಇದ್ದಾಗ ನೀರಿನ ದರವನ್ನು ಹೆಚ್ಚಿಸಿದ್ದರು. ಎಲ್ಲಾ ನೀರಾವರಿ ಬೆಳೆಗಳ ಮೇಲೆ ಹೆಚ್ಚಿಸಿದ್ದರು. ತದನಂತರ ಪ್ರತಿಭಟನೆ ಬಂತು, ರೈತರು ಅದನ್ನು ಕೊಡಲಿಲ್ಲ. ಸನ್ಮಾನ್ಯ ಗುಂಡೂರಾವ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಸದನದಲ್ಲಿ ನಾನು ಹಾಗೂ ಅನೇಕ ಸನ್ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ನಿಲುವಳಿ ಸೂಚನೆ ಮೂಲಕ ಈ ವಿಷಯವನ್ನು ತಂದಂಥ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಗುಂಡೂರಾವ್ ಅವರು ಎರಡು ಸದನಗಳ ಸಮಿತಿ ಮಾಡಿ ಆ ಸಮಿತಿಯ ವರದಿಯನ್ನು ಪಡೆದು ಸರ್ಕಾರ ಪರಿಶೀಲನೆ ಮಾಡಿ ಈ ಸದನದಲ್ಲಿ ಒಂದು ಹೇಳಿಕೆಯನ್ನು ನೀಡಿ ಎಲ್ಲಾ ನೀರಾವರಿ ಬೆಳೆಗಳ ದರವನ್ನು ಗೊತ್ತುಪಡಿಸಿದರು. ಈಗ ಸುಮಾರು ಆರು ವರ್ಷಗಳಾಗುತ್ತಾ ಬಂತು. ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾಯಿತು. ಸನ್ಮಾನ್ಯ ಸಭಾಧ್ಯಕ್ಷರೆ, ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಪ್ರಶ್ನೆ ಹಾಕುತ್ತಿದ್ದೇನೆ ಕೇವಲ ಐದಾರು ವರ್ಷಗಳಲ್ಲಿ ರೈತನಿಗೆ ಒಂದು ಇದ್ದುದನ್ನು ಒಂದೂವರೆಯಷ್ಟು ಹೆಚ್ಚಿಸಬೇಕಾದರೆ ಸಕಾರಣಗಳು ಏನು ? ಸಕಾರಣಗಳು ಇರಬೇಕಾಗಿತ್ತು. ರೈತರ ಆದಾಯ ಜಾಸ್ತಿಯಾಗಿದೆಯೆ ? ಅಥವಾ ರೈತ ಕೊಳ್ಳತಕ್ಕ ಶಕ್ತಿ ಜಾಸ್ತಿಯಾಗಿದೆಯೆ ? ಯಾವ ಕಾರಣದಿಂದ ಇದನ್ನು ಹೆಚ್ಚಿಸಿದ್ದೀರಿ ? ಒಂದು ಕಾರಣ ಇದೆ. ಮುಖ್ಯಮಂತ್ರಿಗಳು ಅದನ್ನು ಹೇಳಿದ್ದಾರೆ. ''ಸಕಾಲದಲ್ಲಿ ನೀರಿನ ತೆರಿಗೆಯ ಮೇಲೆ ಉಪಕರವನ್ನು ವಿಧಿಸುತ್ತೇನೆಂದೂ ಈ ಉಪಕರದಿಂದ ಬರುವ ಆದಾಯವನ್ನು ಖುಷ್ಕಿ ಭೂಮಿ ಅಭಿವೃದ್ಧಿಗಾಗಿ ಬಳಸಲಾಗುವುದೆಂದೂ ನಾನು ನನ್ನ ಹಿಂದಿನ ವರ್ಷದ ಬಜೆಟ್ ಭಾಷಣದಲ್ಲಿ ಹೇಳಿದ್ದುದು ಮಾನ್ಯ ಸದಸ್ಯರಿಗೆ ನೆನಪಿರಬಹುದು'' ಎಂದು ಹೇಳಿದ್ದಾರೆ. ಇವರು ಅಧಿಕಾರಕ್ಕೆ ಬಂದು ನಾಲ್ಕು ವರ್ಷ ಆಯಿತು ೧೯೮೩ರಲ್ಲಿ ಚುನಾವಣೆಯಾಯಿತು. ಅಧಿಕಾರಕ್ಕೆ ಬಂದಿರಿ ೧೯೮೫ರಲ್ಲಿ ಚುನಾವಣೆಯಾಯಿತು, ಅಧಿಕಾರಕ್ಕೆ ಬಂದಿರಿ. ಆದರೆ ಹೋದವರ್ಷ ಈ ಕರವನ್ನು ವಿಧಿಸಬೇಕಾಗಿತ್ತು, ಏಕೆ ವಿಧಿಸಲಿಲ್ಲ ? ಧೈರ್ಯ ಇರಲಿಲ್ಲ. ಹೋದವರ್ಷ ವಿಧಿಸಿದ್ದರೆ ಜಿಲ್ಲಾ ಪರಿಷತ್ತು ಮಂಡಲ ಪಂಚಾಯಿತಿಯಲ್ಲಿ ಒಂದರಲ್ಲೂ ನೀವು ಗೆದ್ದು ಬರುವುದಕ್ಕೆ ಸಾಧ್ಯವಾಗು

ತ್ತಿರಲಿಲ್ಲ. ಜನ ತಿರುಗಿ ಬೀಳುತ್ತಿದ್ದರು. ಅದಕ್ಕೋಸ್ಕರ ಚುನಾವಣೆ ಮುಗಿಯಲಿ, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆ ಆಗಲಿ ಎಂದು ಕಾದಿದ್ದು ಈಗ ಮುಖ್ಯಮಂತ್ರಿಗಳು ಇದನ್ನು ತಂದಿದ್ದಾರೆ. ಇನ್ನು ೧೯೯೦ಕ್ಕೆ ತಾನೆ ಚುನಾವಣೆ ನೋಡಿಕೊಳ್ಳೋಣ, ಇನ್ನು ಮೂರು ವರ್ಷಕ್ಕೆ ಏನಾಗುತ್ತದೆಯೋ, ಜನರು ಅಷ್ಟು ಹೊತ್ತಿಗೆ ಮರೆಯುಬಹುದು ಎಂಬ ದೃಷ್ಟಿಯಿಂದ ಈಗ ತಂದಿದ್ದಾರೆ. ಈ ಸರ್ಕಾರಕ್ಕೆ ನಾನು ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ದರ ಏನು ಹೆಚ್ಚಿಸಿದ್ದಾರೆ ಇದನ್ನು ಮುಖ್ಯಮಂತ್ರಿಗಳು ಕೂಡಲೇ ವಾಪಸ್ ಪಡೆಯಬೇಕು. ಇಲ್ಲದೇಹೋದರೆ ರಾಜ್ಯಾದ್ಯಂತ ರೈತರ ಹೋರಾಟ ಶುರುವಾಗುತ್ತದೆ. ಈಗ್ಗೆ ನಾಲ್ಕೈದು ತಿಂಗಳ ಹಿಂದೆ ವೆಂಕಟಸ್ವಾಮಿ ಆಯೋಗದ ವರದಿಯ ಮೇಲೆ ಏನು ಹೋರಾಟ ನಡೆಯಿತು ಅದರ ಕಹಿ ಅನುಭವವನ್ನು ನೋಡಿದ್ದೀರಿ.

೪-೦೦ ಪಿ. ಎಂ.

ಆದರ ಮೂರು ಪಟ್ಟು, ೨೦ ಪಟ್ಟು ಈ ರೀತಿಯಲ್ಲಿ ಒಂದು ದೊಡ್ಡ ಚಳುವಳಿ ನಡೆದಂತಹ ಸಂದರ್ಭದಲ್ಲಿ ಬಹುಶಃ ಅದರ ಬಗ್ಗೆ ಈ ಸದನದಲ್ಲಿರತಕ್ಕ ಸದಸ್ಯರೆಲ್ಲರೂ, ಆ ಕಡೆ ಇರತಕ್ಕವರು, ಈ ಕಡೆ ಇರತಕ್ಕವರು ಎಲ್ಲರೂ ರಾಜೀನಾಮೆ ಕೊಡತಕ್ಕಂತಹ ಪರಿಸ್ಥಿತಿ ಬರಬಹುದು. ನಾವು ನೀವೂ ಎಲ್ಲರೂ ರಾಜೀನಾಮೆ ಕೊಟ್ಟ ಮೇಲೆ ಸರ್ಕಾರವೇ ಅಸ್ತಿತ್ವದಲ್ಲಿ ಇರುವುದಕ್ಕೆ ಸಾಧ್ಯವೇ ಇಲ್ಲ. ಅದರಲ್ಲೂ ಸನ್ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಖಾತೆಯನ್ನು ಹೊಂದಿರತಕ್ಕಂತಹವರಿಗೆ ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಕರಭಾರವನ್ನು ಏನು ಹಾಕಿದ್ದೀರಿ ಇದು ರೈತನಿಗೆ ಬಹಳ ಹೊರೆಯಾಗುತ್ತದೆ. ನಿಮ್ಮ ಬಾಕಿ ಪಟ್ಟಿಯನ್ನು ನೋಡಿದರೆ ಗೊತ್ತಾಗುತ್ತದೆ. ಕೋಟ್ಯಾಂತರ ರೂಪಾಯಿಗಳ ಬಾಕಿ ಇದೆ. ಇರತಕ್ಕ ಕರವನ್ನೇ ಕೊಡುವುದಕ್ಕೆ ರೈತನಿಗೆ ಶಕ್ತಿ ಇಲ್ಲದೇ ಇರುವಂತಹ ಈ ಸಂದರ್ಭದಲ್ಲಿ ಅವನ ಬೆನ್ನು ಮೂಳೆ ಮುರಿದು ಬಿದ್ದಿರುವಾಗ ಹೊಸ ಕರವನ್ನು ಹಾಕತಕ್ಕಂತಹದ್ದು ಸಾಧುವಾದುದಲ್ಲ, ನ್ಯಾಯವಾದುದಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ನೀವು ಯಾರೂ ರಾಜೀನಾಮೆಯನ್ನು ಕೊಡುವುದು ಬೇಡ. ಆದರೆ ಹಣವನ್ನು ಎಲ್ಲಿಂದ ತರಬೇಕು? ಖರ್ಚನ್ನು ಹೇಗೆ ಕಡಿಮೆ ಮಾಡಬೇಕೆಂಬುದರ ಬಗ್ಗೆ ಸಲಹೆಯನ್ನು ಕೊಡಿ.

ಶ್ರೀ ಎಚ್. ಡಿ. ಚೌಡಯ್ಯ.—ಅದನ್ನು ಸರ್ಕಾರ ಯೋಚನೆ ಮಾಡಬೇಕು. ಈ ಬಾಬಿನಿಂದ ಹದಿನಾಲ್ಕೂವರೆ ಕೋಟಿ ರೂಪಾಯಿಗಳು ಏನು ಬರುತ್ತದೆ, ಅದನ್ನು ಬೇರೆ ಬಾಬುಗಳಿಂದ ಪಡೆಯುವುದಕ್ಕೆ ಸಾಧ್ಯ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧಿಕಾರವನ್ನು ಬಿಟ್ಟು ತೋರಿಸಿ. ಹೇಗೆ ಮಾಡಬೇಕೆಂಬುದನ್ನು ಮಾಡಿ ತೋರಿಸುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—೩೫ ವರ್ಷಗಳಿಂದ ನೀವೇ ಅಧಿಕಾರದಲ್ಲಿ ಇರಲಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೫ ವರ್ಷಗಳಿಂದ ನೀವು ಬಿಟ್ಟಿರಬಹುದು. ಅವರು ಮೊದಲಿನಿಂದಲೂ ಅಧಿಕಾರದಲ್ಲೇ ಇದ್ದವರು. ನಮಗೆ ಬಿಟ್ಟು ಕೊಡಿ. ಹೇಗೆ ಮಾಡಬೇಕೆಂಬುದು ಗೊತ್ತಿದೆ ಖರ್ಚನ್ನು ಹೇಗೆ ಮಾಡಬೇಕು ? ಹಣವನ್ನು ಎಲ್ಲಿಂದ ತರಬೇಕು ಎಂಬುದನ್ನು ಹೇಳಿ ಕೊಡುತ್ತೇವೆ.

ಶ್ರೀ ಎಚ್. ಡಿ. ಚೌಡಯ್ಯ.—ನಮ್ಮ ಉಪ ನಾಯಕರು ಚೆನ್ನಾಗಿ ಹೇಳಿದ್ದಾರೆ. ಬಿಟ್ಟು ಕೊಡಿ ನಿಮಗೆ ಅಧಿಕಾರವನ್ನು ವಹಿಸಿಕೊಟ್ಟರೆ ನಾವು ಅದನ್ನು ಚೆನ್ನಾಗಿ ನಿರ್ವಹಿಸುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಶ್ರೀಮಾನ್ ಚೌಡಯ್ಯನವರು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದಾರೆ. ನಾನು ಅವರಿಗೆ ಒಂದು ವಿಷಯವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಸಲೀಸಾಗಿ ನೀರು ಸಿಕ್ಕುತ್ತಿದೆ. ಒಂದು ಎಕರೆಗೆ ಒಂದು ವರ್ಷಕ್ಕೆ ೨೫೦–೩೦೦ ರೂಪಾಯಿಗಳನ್ನು ವಾಟರ್ ರೇಟನ್ನು ಏನು ಕೊಡುತ್ತಿದ್ದೀರಿ, ಅದು ಮೇಂಟಿನೆನ್ಸ್‌ಗೂ ಸಾಲುವುದಿಲ್ಲ. ಆದರೆ ಅದೇ ಕೋಲಾರ ಜಿಲ್ಲೆಯಲ್ಲಿ, ಬೆಂಗಳೂರು ಜಿಲ್ಲೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ಚಿತ್ರದುರ್ಗ

ಜಿಲ್ಲೆಯಲ್ಲಿ ಒಂದೊಂದು ಕೊಳವೆ ಬಾವಿಯನ್ನು ತೋಡಬೇಕಾದರೆ ೪೦-೫೦ ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಬೇಕು. ಅದಕ್ಕೆ ಹನ್ನೆರಡೂವರೆ ಪರ್ಸೆಂಟ್ ಬಡ್ಡಿಯನ್ನು ಕೊಡಬೇಕು, ವರ್ಷಕ್ಕೆ ೩-೪ ಸಾವಿರ ಪಂಪು ಸುಟ್ಟು ಹೋಗುತ್ತಿರುತ್ತದೆ ಇದರ ಜೊತೆಗೆ ರೈತ ರಾತ್ರಿ ಹೊತ್ತು ನೀರನ್ನು ಕಟ್ಟಬೇಕು. ಬೆಳಗ್ಗೆ ಸಮಯದಲ್ಲಿ ಪವರ್ ಇರುವುದಿಲ್ಲ. ಇದರಿಂದಾಗಿ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳವರೆಗೆ ಒಂದು ವರ್ಷಕ್ಕೆ ಖರ್ಚು ಮಾಡಬೇಕಾಗುತ್ತದೆ. ಬೆಟರ್‌ಮೆಂಟ್ ಲೆವಿಯನ್ನು ತೆಗೆದಿದ್ದೇವೆ. ಈಗ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೇಜರ್ ಪ್ರಾಜೆಕ್ಟ್‌ಗಳನ್ನು ಮಾಡಿದ್ದೇವೆ. ಆ ಹಣವನ್ನು ತೀರಿಸಬೇಕಾದರೆ ರಾಜ್ಯದ ಕನ್‌ಸಾಲಿಡೇಟೆಡ್ ಫಂಡ್ ನಿಂದಲೇ ತೀರಿಸಬೇಕು. ಮೈದಾನ ಪ್ರದೇಶದಲ್ಲಿ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳನ್ನು ಒಂದು ವರ್ಷಕ್ಕೆ ಖರ್ಚು ಮಾಡುತ್ತಿರಬೇಕಾದರೆ, ಅದೇ ನೀರಾವರಿ ಪ್ರದೇಶದಲ್ಲಿ ೨೫೦--೩೦೦ ರೂಪಾಯಿಗಳನ್ನು ಒಂದು ಎಕರೆಗೆ ಒಂದು ವರ್ಷಕ್ಕೆ ಕೊಡಬೇಕಾಗುತ್ತದೆ.

ಶ್ರೀ ಎಚ್. ಡಿ. ಚೌಡಯ್ಯ.—ಬೆಟರ್‌ಮೆಂಟ್ ಲೆವಿಯನ್ನು ತೆಗೆದವರು ನೀವಲ್ಲ. ಹಿಂದಿನ ಸರ್ಕಾರ ತೆಗೆದಿದ್ದುದು.

ಶ್ರೀ ಆರ್. ಎಲ್. ಜಾಲಪ್ಪ.—ನೀವೇ ತೆಗೆದು ಪಾಪರ್ ಮಾಡಿ ಹೋದಿರಿ. ಅವರು ಬಹಳ ಅನುಭವಸ್ಥರು ಒಂದು ಕಡೆ ಒಂದು ಎಕರೆಗೆ ಒಂದು ವರ್ಷಕ್ಕೆ ೧ ಸಾವಿರ ರೂಪಾಯಿಗಳನ್ನು ವಾಟರ್ ರೇಟ್ ಎಂಬುದಾಗಿ ಕೊಡುತ್ತಿರಬೇಕಾದರೆ, ಇನ್ನೊಂದು ಕಡೆ ಒಂದು ಎಕರೆಗೆ ಒಂದು ವರ್ಷಕ್ಕೆ ೨೫೦-೩೦೦ ರೂಪಾಯಿಗಳನ್ನು ಕೊಡಿ ಎಂದರೆ, ಅದು ಕಿರುಕುಳವಾಗುತ್ತದೆಂದು ಹೇಳುತ್ತಿದ್ದೀರಿ. ಅದಕ್ಕೂ ಹಿಂದೆ ಮುಂದೆ ನೋಡಿದರೆ, ಆ ರೀತಿಯ ಅಭಿಪ್ರಾಯವನ್ನು ಕೊಟ್ಟರೆ ಸರ್ಕಾರವನ್ನು ನಡೆಸು ವುದಾದರೂ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ತಿಳಿದುಕೊಂಡೇ ಬೆಟರ್‌ಮೆಂಟ್ ಲೆವಿಯನ್ನು ತೆಗೆಯುವುದಕ್ಕೆ ಮುಂಚಿತವಾಗಿ ಅನೇಕ ವಾದ ವಿವಾದಗಳು ನಡೆದು ಶ್ರೀಮಾನ್ ದೇವರಾಜ ಅರಸು ರವರು ಮುಖ್ಯಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಅನೇಕ ಸಲ ಡಿಬೇಟ್ ಆಯಿತು. ಆಗ ಇಂದು ಸಚಿವರಾಗಿರತಕ್ಕಂತಹ ಶ್ರೀಮಾನ್ ದೇವೇಗೌಡರೇ ವಿರೋಧಪಕ್ಷದ ನಾಯಕರಾಗಿದ್ದರು. ಅವರು ಕೇಳಿದ ಮೇರೆಗೆ ಇದನ್ನು ಒಪ್ಪಿಕೊಳ್ಳಬಹುದು ಎಂದು ಹೇಳಿದ ಮೇಲೆ ಹೆಚ್ಚೋ ಕಡಿಮೆಯೋ ಒಪ್ಪಿ ಕೊಂಡಿದ್ದಾಯಿತು. ರೈತರನ್ನು ಎಬ್ಬರಿಸಿ, ಅವರ ಬೆನ್ನು ಮೇಲೆ ನಿಂತು ಅಧಿಕಾರಕ್ಕೆ ಬಂದಂಥ ನೀವು ಅಧಿಕಾರಕ್ಕೆ ಬಂದ ಮೇಲೆ ನೀವೂ ತಿರುಗಿ ಇದನ್ನೇ ಮಾಡಿದ್ದೀರಿ ಎನ್ನತಕ್ಕಂತಹ ಪ್ರಶ್ನೆ ಇದು. ಹೇಳು ವುದು ಸುಲಭ, ಮಾಡುವುದು ಕಷ್ಟ. ಅದನ್ನೇ ಈಗ ನೀವು ಅನುಭವಿಸುತ್ತಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ನರಗುಂದ-ನವಲಗುಂದದವರು ಬೆಟರ್‌ಮೆಂಟ್ ಲೆವಿಯನ್ನು ತೆಗೆದುಹಾಕಿ ಎಂದು ಹೇಳಲಿಲ್ಲ. ಇದನ್ನು ಹಾಕುವುದರಲ್ಲಿ ತಾರತಮ್ಯ ಇದೆ. ಅದನ್ನು ಸರಿಮಾಡಿ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ವಿಷಯವಾಗಿಯೇ ಅಲ್ಲಿ ದೊಡ್ಡ ಫೈರಿಂಗ್ ಎಲ್ಲಾ ಆ ಜನ ಅಸುನೀಗಿದರು. ಅದೆಲ್ಲಾ ಆದಮೇಲೆ ಸರ್ಕಾರ ಒಂದು ತೀರ್ಮಾನಕ್ಕೆ ಬಂತು. ಆ ಗಲಾಟೆಯ ಹೆಸರನ್ನು ಹೇಳಿಕೊಂಡು ನೀವು ಅಧಿಕಾರಕ್ಕೆ ಬಂದಿದ್ದೀರಿ. ಈಗ ಕಷ್ಟ ಎಷ್ಟು ಎಂಬುದನ್ನು ನೋಡಿ ಎಂದು ನಾವು ಹೇಳುತ್ತಿರುವುದು,

ಶ್ರೀ ಹೆಚ್. ಡಿ. ಚೌಡಯ್ಯ.—ವಾಟರ್ ರೇಟ್ ಜಾಸ್ತಿಯಾಯಿತು ಅದು ಬೇಡ ಎಂದು ಹೇಳಿದ ರೆಂದು ಮಾನ್ಯ ಜಾಲಪ್ಪನವರು ಹೇಳುತ್ತಿದ್ದಾರೆ. ವಾಟರ್ ರೇಟ್ ವಸೂಲಿ ಮಾಡುತ್ತಿದ್ದುದು ಕೇವಲ ಹದಿನಾಲ್ಕೂವರೆ ಕೋಟಿ ರೂಪಾಯಿಗಳು ಮಾತ್ರ. ಈಗಿನ ಆಯವ್ಯಯ ನೋಡಿದರೆ ಇದು ಬಹಳ ಕಡಿಮೆ ಆಗುತ್ತದೆ. ಇವೊತ್ತು ವ್ಯವಸಾಯ ಉತ್ಪನ್ನಗಳ ಮೇಲೆ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಸ್ವಲ್ಪಮಟ್ಟಿನ ತೆರಿಗೆ ಹಾಕಿ ವಸೂಲಿ ಮಾಡಬಹುದು. ಆದರೆ ಮಾನ್ಯ ಮುಖ್ಯಮಂತ್ರಿಗಳು ಫರ್ಟಿಲೈ ಸರ್ಸ್ ಮೇಲೆ ೧ ಪರ್ಸೆಂಟ್ ತೆರಿಗೆ ಹಾಕಿರುವುದು ಯಾವ ನ್ಯಾಯ ? ಇವತ್ತು ಇವುಗಳ ಬಳಕೆಯ ಬಗ್ಗೆ ಹೆಚ್ಚು ಗಮನ ಕೊಡಬೇಕೆನ್ನುವಾಗ ತೆರಿಗೆ ಹಾಕಿದರೆ ಇವುಗಳ ಬಳಕೆ ಹೆಚ್ಚಲು ಹೇಗೆ ಸಾಧ್ಯ ? ಇವತ್ತು ಫರ್ಟಿಲೈಸರ್ಸ್ ಬಗ್ಗೆ ಹೆಚ್ಚು ಉತ್ತೇಜನ ಕೊಡಬೇಕೇ ಹೊರತು ರೈತನ ಬಟ್ಟೆ ಹಿಡಿದು ಎಳೆ ಯುವುದು ಸರಿಯಲ್ಲ. ರೈತನು ಇವುಗಳನ್ನು ಜಾಸ್ತಿ ಉಪಯೋಗಿಸುವ ಬಗ್ಗೆ ಉತ್ತೇಜನ ಕೊಡ

ಬೇಕಾದುದರಿಂದ ಈ ಟ್ಯಾಕ್ಸನ್ನು ಪೂರ್ಣವಾಗಿ ಕೈ ಬಿಡಬೇಕೆಂದು ಒತ್ತಾಯ ಮಾಡುವುದಕ್ಕೆ ಇಷ್ಟ ಪಡುತ್ತೇನೆ ನಾನು ಮೊದಲೇ ಹೇಳಿದಹಾಗೆ ಈ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗಾ).— ಸನ್ಮಾನ್ಯ ಅಧ್ಯಕ್ಷರೇ. ೧೯೬೭-೬೮ನೇ ವರ್ಷಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ೨೭ನೇ ತಾರೀಖು ಆಯವ್ಯಯ ಪತ್ರವನ್ನು ಈ ಸದನದ ಮುಂದೆ ಇಟ್ಟಿರತಕ್ಕದ್ದನ್ನು ಬೆಂಬಲಿಸಿ ಎರಡು ಮಾತುಗಳನ್ನಾಡುವುದಕ್ಕೆ ಇಷ್ಟ ಪಡುತ್ತೇನೆ. ಈ ಒಂದು ಪತ್ರದಲ್ಲಿ ೬೭-೬೮ನೇ ಸಾಲಿಗೆ ಕೆಲವೊಂದು ಕರಭಾರಗಳನ್ನು ಹೆಚ್ಚು ಮಾಡಿರಬಹುದು, ಅದಕ್ಕೆ ಮುಖ್ಯ ಕಾರಣ ಏನೆಂದರೆ ಎಷ್ಟೋ ವರ್ಷಗಳ ಕಾಲದಿಂದ ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಯಾವ ರೀತಿ ಆಗಬೇಕಾಗಿತ್ತು. ನೀರಾವರಿಯಾಗಲೀ ಅಥವಾ ಕೈಗಾರಿಕಾ ಅಭಿವೃದ್ಧಿಯಾಗಲೀ ಸರಿಯಾದ ಪ್ರಮಾಣದಲ್ಲಿ ಆಗದೇ ಇರುವ ಕಾರಣದಿಂದ ಈ ೩-೪ ವರ್ಷಗಳ ಕಾಲದಲ್ಲಿ ನೀರಾವರಿ ಯೋಜನೆಗಳಿಗ ಮಾಡಿರತಕ್ಕ ಖರ್ಚಿಗಿಂತ ಈಗ ಇಟ್ಟಿರತಕ್ಕದ್ದು ಹೆಚ್ಚು ಇದೆ. ಇದು ಸಂತೋಷದ ಸಂಗತಿ. ಇದೇ ರೀತಿಯ ಖರ್ಚು ವಿದ್ಯಾಭ್ಯಾಸದ ಬಗ್ಗೆಯೂ ಆಗಿದೆ ಅಧ್ಯಕ್ಷರೇ, ತಮಗೆ ಗೊತ್ತಿದೆ. ಕಳೆದ ೩೫ ವರ್ಷಗಳಲ್ಲಿ ಹಳ್ಳಿಗಾಡಿನ ಕಡೆ ಅಷ್ಟು ಪ್ರಗತಿಯಾಗದೇ ಇದ್ದು ಕೇವಲ ೨-೩ ವರ್ಷಗಳಲ್ಲಿ ನಾವು ಹೈಸ್ಕೂಲುಗಳನ್ನು, ಜೂನಿಯರ್ ಕಾಲೇಜುಗಳನ್ನು, ಪಾಲಿಟೆಕ್ನಿಕ್‌ಗಳನ್ನು ತೆರೆದಿದ್ದೇವೆ. ಇದಕ್ಕೂ ಕೂಡಾ ಸಾಕಷ್ಟು ಹಣ ಬೇಕಾಗುತ್ತದೆ. ಇದರಿಂದ ಎಷ್ಟೋ ಜನರಿಗೆ ಹೊಸದಾಗಿ ನೌಕರಿಯನ್ನು ಕೊಡತಕ್ಕ ಕೆಲಸ ಕೂಡಾ ಆಗಿದೆ. ಹೈಸ್ಕೂಲು ಪ್ರೈಮರಿ ಶಾಲೆ, ಪಾಲಿಟೆಕ್ನಿಕ್‌ಗಳು, ಎಂಜಿನಿಯರಿಂಗ್ ಕಾಲೇಜುಗಳನ್ನು ತೆರೆದಿದ್ದರಿಂದ ಎಷ್ಟೋ ಜನರಿಗೆ ನೌಕರಿ ಸಿಕ್ಕಿದೆ. ಅದಕ್ಕಾಗಿ ಈ ಒಂದು ಕರಭಾರ ಇವೊತ್ತು ರಾಜ್ಯದ ಜನರ ಮೇಲೆ ಬಿದ್ದಿದೆ. ಈ ಕರವನ್ನು ಯಾರಿಂದ ವಸೂಲಿ ಮಾಡಬೇಕು ಯಾವರೀತಿ ವಸೂಲಿ ಮಾಡಬೇಕು ಎನ್ನುವ ವಿಚಾರ ಬೇರೆ. ಯಾವಾಗಲೂ ಯಾರಿಗೆ ಕರ ಹಾಕಿದರೂ ಅದರ ಭಾರ ಹಳ್ಳಿಯ ಜನರ ಮೇಲೆ ಬೀಳುವುದು ಸಹಜ ಆದರೆ ಇವತ್ತು ಹಳ್ಳಿಗರ ಮೇಲೆ ಏನಾಗಿದೆ? ಪಟ್ಟಣಗಳಲ್ಲಿರತಕ್ಕ ಜನ ಯಾವುದೇ ವ್ಯವಹಾರ ಮಾಡಲಿ ಅದು ಬಟ್ಟೆ ವ್ಯಾಪಾರ ಆಗಿರಬಹುದು, ಚಹ ಅಂಗಡಿ ವ್ಯಾಪಾರ ಆಗಿರಬಹುದು ಒಂದು ಫ್ಯಾಕ್ಟರಿ ಆಗಿರಬಹುದು ಯಾವುದೇ ವ್ಯವಹಾರ ಮಾಡಿದರೂ ಅವರು ವ್ಯಾಪಾರ ಮಾಡುವಾಗ ಎಲ್ಲಾ ಖರ್ಚನ್ನು ಹಾಕಿ ವಸೂಲಿ ಮಾಡತಕ್ಕದ್ದು ಇದೆ. ಹಳ್ಳಿಗಳಲ್ಲಿರತಕ್ಕ ಜನರ ವಿಚಾರದಲ್ಲಿ ನಾವು ನೋಡುವುದಾದರೆ ಕೆಲವೊಂದು ಭಾರ ಕೃಷಿ ಉತ್ಪಾದನೆಯ ಮೇಲೆ ಹಾಕಲಾಗಿದೆ. ಕೃಷಿ ಉತ್ಪಾದನೆಯ ಮೇಲೆ ಶೇಕಡ ೧ ಪರ್ಸೆಂಟ್ ರಸಗೊಬ್ಬರದ ಮೇಲೆ ಏನು ಜಾಸ್ತಿ ಮಾಡಲಾಗಿದೆ ಅದರ ಬಗ್ಗ ಪುನರ್ ಪರಿಶೀಲನೆ ಮಾಡಬೇಕು. ಇವೊತ್ತಿನ ದಿವಸ ನಮಗೆ ರೈತರ ಬಗ್ಗೆ ಸಾಕಷ್ಟು ಸಹಾನುಭೂತಿ ಇದೆ, ರೈತನಿಗೆ ಏನಾದರೂ ಒಂದು ರೀತಿಯ ಲಾಭವಾದರೆ, ರೈತಕಾರ್ಮಿಕರಿಗೆ ಕೂಲಿ ಕೊಡುವಾಗ ಹೆಚ್ಚಿಗೆ ಹಣವನ್ನು ಕೊಟ್ಟು ಅವರು ಅದರಿಂದ ಬದುಕಲಿಕ್ಕೆ ಸಾಧ್ಯತೆಯಿಂದೆ, ಇಲ್ಲದಿದ್ದರೆ ಕಷ್ಟವಾಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ, ಮತ್ತೊಂದು ವಿಚಾರದಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ, ಆ ಕಡೆಯುವರು ಹೇಳುತ್ತಿದ್ದರು ಕರಭಾರ ಜಾಸ್ತಿಗಿಯಾದೆ, ಇವರು ಒಳ್ಳೆಯ ರೀತಿಯಿಂದ ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ವೆಂದು ಹೇಳುತ್ತಿದ್ದರು. ಯೋಜನೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳದಿದ್ದರೆ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳದಿದ್ದರೆ ದೇಶವನ್ನು ಅಭಿವೃದ್ಧಿ ಪಡಿಸುವುದು ಹೇಗೆ ? ಯಾವುದಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಾಗ ಆ ಕಾರ್ಯಕ್ರಮ ಮುಗಿಯುವವರೆಗೆ ಕರಭಾರವನ್ನು ಹಾಕಿ, ಹಾಕಿಕೊಂಡಂತಹ ಕಾರ್ಯಕ್ರಮವನ್ನು ಮುಗಿಸಬೇಕಾಗುತ್ತದೆ. ನಾನು ಸಣ್ಣ ಮತ್ತು ಭಾರಿ ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ ೧೯೬೦-೬೧ ರಲ್ಲಿ ೯೭ ಕೋಟಿ ೯೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದರೆ, ೧೯೬೧-೬೨ ರಲ್ಲಿ ೧೦೫ ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ೧೯೬೨-೬೩ ರಲ್ಲಿ ೧೨೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ೧೯೬೩-೬೪ ರಲ್ಲಿ ೧೩೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ೧೯೬೪-೬೫ ರಲ್ಲಿ ೧೩೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ೧೯೬೫-೬೬ ರಲ್ಲಿ ೧೫೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ೧೯೬೭-೬೮ ರಲ್ಲಿ ೧೬೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಅದರಿಂದ ಫಲ ಬರಬೇಕಾದರೆ ಕೆಲವು ಕಾಲ ಬೇಕಾಗುತ್ತದೆ. ಈ ಒಂದು ಕಾರಣದಿಂದ ನಮ್ಮ ಸರ್ಕಾರ

ಸಾಧಾರಣವಾಗಿ ಯೋಜನೆಗಳನ್ನು ಹಾಕಿಕೊಂಡು ಸರಿಯಾಗಿ ಕೆಲಸ ಮಾಡುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ಮಾತು. ಇವತ್ತಿನ ದಿವಸ ಕಾವೇರಿ ಬೇಸಿನ್ ಯೋಜನೆ ಇದ್ದರೂ ಪ್ಲಾನಿಂಗ್‌ನಲ್ಲಿ ಇಲ್ಲದಿದ್ದರೂ ಕೂಡ ಅದಕ್ಕಾಗಿ ಹಣ ಖರ್ಚು ಮಾಡಬೇಕೆಂದು ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಅದೇರೀತಿ ಅಪ್ಪರ್‌ಕೃಷ್ಣ ಯೋಜನೆಗೆ ೨೦೦ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಯೋಜನೆ ಇರುವಾಗ ಹಣವನ್ನು ಎಲ್ಲಿಂದ ಒದಗಿಸಬೇಕು ಎನ್ನುವುದನ್ನು ವಿರೋಧ ಪಕ್ಷದವರು ಯೋಚನೆ ಮಾಡುವುದು ಅತೀ ಅವಶ್ಯಕವಿದೆ. ಈ ಕಾರಣಗಳಿಗಾಗಿ ಕೆಲವೊಂದು ಕರಭಾರ ಹಾಕಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೧೪೫ ಕೋಟಿ ರೂಪಾಯಿಗಳ ತೆರಿಗೆಯಲ್ಲಿ ೧೦೦ ಕೋಟಿ ರೂಪಾಯಿ ನೌಕರರ ಸಂಬಳಕ್ಕೆ ಹೋಗುತ್ತಿದೆ. ನೀವು ೧೪೫ ಕೋಟಿ ರೂಪಾಯಿ ತೆರಿಗೆ ಹಾಕುತ್ತೀರಿ, ಆದರೆ ೧೦೦ ಕೋಟಿ ರೂಪಾಯಿ ನೌಕರರ ಟಿ. ಎ. ಡಿ. ಎ ಸ್ಯಾಲರಿಗೆ ಹೋಗುತ್ತದೆ. ಈಗಾಗಲೇ ಪ್ರೈಸ್ ರೈಸ್ ಆಗುತ್ತಿದೆ. ೭.೫ ಅದಕ್ಕೆ ಲೆಕ್ಕ ಹಾಕಿದರೆ ನಿಮ್ಮ ಟೋಟಲ್ ಜಾಸ್ತಿಯಾಗುವುದಿಲ್ಲ. ಹೋದವರ್ಷ ಇದ್ದುದಕ್ಕಿಂತಲೂ ನಿಮ್ಮ ಡೆವಲಪ್‌ಮೆಂಟ್ಸ್ ಕಡಿಮೆಯಾಗುತ್ತದೆ,

ಅಧ್ಯಕ್ಷರು.— ಇದಲ್ಲದೆ ಕೇಂದ್ರದ ಟ್ಯಾಕ್ಸ್ ಬೀಳುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಅದನ್ನೆ ಹೇಳುತ್ತಿರುವುದು.

ಶ್ರೀ ಎಸ್. ಕೆ. ಕಾಂತ.— ತಾವು ಕೂಡ ಸರ್ಕಾರಿ ನೌಕರರಿಗೆ ಟಿ. ಎ. ಡಿ. ಎ. ಸಂಬಳವನ್ನು ಏರಿಸುತ್ತಾ ಬಂದಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಡೆವಲಪ್‌ಮೆಂಟ್ ಬಗ್ಗೆ ಹೇಳಿ.

ಶ್ರೀ ಎಸ್. ಕೆ. ಕಾಂತ.—ಖರ್ಚು ಮಾಡದೆ ಡೆವಲಪ್‌ಮೆಂಟ್ ಹೇಗಾಗುತ್ತದೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಕಡಿಮೆ ಸಂಬಳ ಕೊಟ್ಟು ಸರ್ಕಾರಿ ನೌಕರರಿಂದ ಪುಕಸಟ್ಟೆ ಕೆಲಸ ಮಾಡಿಸುತ್ತೇವೆ ಎಂದು ಹೇಳುವುದಾದರೆ ಅವರಿಗೇ ಸರ್ಕಾರವನ್ನು ಕೊಟ್ಟು ಬಿಡೋಣ. ದಯವಿಟ್ಟು ಸಹಕಾರ ಕೊಡಿ ಎಂದು ಅವರು ಹೇಳುತ್ತಿರುವುದು. ಸರ್ಕಾರಿ ನೌಕರರಿಗೆ ಖರ್ಚು ಮಾಡಬೇಕಾದ ದುಡ್ಡು, ಅವರಿದ್ದರೂ ಕೊಡಬೇಕು, ನಾವಿದ್ದರೂ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಾಕ್ಟರರು ಅವರ ಭಾಷಣವನ್ನು ಸರಿಯಾಗಿ ಕೇಳಿದರೋ ಇಲ್ಲವೋ ಗೊತ್ತಿಲ್ಲ. ಇಷ್ಟೆಲ್ಲಾ ಟ್ಯಾಕ್ಸನ್ನು ನಾವು ಹಾಕಿದ್ದುದು ಡೆವಲಪ್‌ಮೆಂಟ್‌ಗೋಸ್ಕರ, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬರಲಿ ಎನ್ನುವ ಮಾತನ್ನು ಅವರು ಹೇಳಿದರು. ಅದಕ್ಕೆ ನಾನು ಏನು ಹೇಳಿದೆ ಎಂದರೆ ೧೪೫ ಕೋಟಿಯಲ್ಲಿ ೧೦೦ ಕೋಟಿ ಸಂಬಳಕ್ಕೇ ಹೋಗುತ್ತದೆ. ಉಳಿದ ೪೫ ಕೋಟಿಯಲ್ಲಿ, ಈಗ ೭.೫ ಪ್ರೈಸ್ ರೈಸ್ ಇದೆ. ಈ ಲೆಕ್ಕವನ್ನು ತೆಗೆದುಕೊಂಡರೆ ಡೆವಲಪ್‌ಮೆಂಟ್ ವರ್ಕ್ಸ್ ಕಡಿಮೆಯಾಗಬೇಕೇ ಹೊರತು ಜಾಸ್ತಿಯಾಗುವುದಿಲ್ಲ. ಸಂಬಳ ಕೊಡಬೇಡಿ ಎಂದು ನಾನು ಹೇಳಿಲ್ಲ. ನಾವು ಎಲ್ಲಿ ಇದ್ದೇವೋ ಅಲ್ಲಿಯೇ ಇದ್ದೇವೆ ಎಂದು ಹೇಳಿದ್ದೇನೆ.

ಅಧ್ಯಕ್ಷರು.—ಶ್ರೀ ಕಾಂತರವರೇ ನೀವು ಮುಂದುವರೆಸಿ.

ಶ್ರೀ ಎಸ್. ಕೆ. ಕಾಂತ.—ಅದಕ್ಕೋಸ್ಕರ ಈಗ ಇಲ್ಲಿ ಉಲ್ಲೇಖ ಮಾಡಿದ್ದಾರೆ. ಈ ವರ್ಷ ೬೦ ಸಾವಿರ ಹೆಕ್ಟೇರುಗಳಿಗೆ ಹೊಸದಾಗಿ ನೀರು ಕೊಡುತ್ತೇವೆ ಎಂದು ಯೋಜನೆಯೇ ಇದೆ, ೬೦ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿಯಾದರೆ ಉತ್ಪಾದನೆ ಹೆಚ್ಚಾಗುತ್ತದೆ. ಶ್ರೀಮಾನ್ ಖರ್ಗೆಯವರು ಸರ್ಕಾರಿ ನೌಕರರಿಗೆ ಒಂದು ನೂರು ಕೋಟಿ ರೂಪಾಯಿಗಳ ಹೆಚ್ಚು ವೆಚ್ಚ ಮಾಡುತ್ತಿದ್ದೇವೆ ಎಂದು ಹೇಳಿದರು. ಸರಿ, ಇದನ್ನು ಯಾವ ಯಾವರೀತಿಯಿಂದ ಉಳಿತಾಯ ಮಾಡಬೇಕು ಎಂದು ಸೂಚನೆಯನ್ನು ಅವರು ಕೊಡಬೇಕು. ಇಲ್ಲದಿದ್ದರೆ ಸರ್ಕಾರಿ ನೌಕರರು ಚಳುವಳಿ ಮಾಡುತ್ತಾರೆ ಅದಕ್ಕೋಸ್ಕರ ಈ ಯೋಜನೆಗಳನ್ನು ಆಧಾರವಾಗಿಟ್ಟುಕೊಂಡು ಇವತ್ತಿನ ದಿವಸ ನಮ್ಮ ಸರ್ಕಾರ ಕೆಲವೊಂದು ತೆರಿಗೆಗಳನ್ನು ಹಾಕಿದ್ದೆ. ನನಗೆ ತಿಳಿದಮಟ್ಟಿಗೆ ಈ ತೆರಿಗೆಗಳಲ್ಲಿ ಕೆಲವೊಂದು ತೆರಿಗೆಗಳು ಭಾರವಾಗಿವೆ, ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದು ಏನೆಂದರೆ ರೈತರ ಮೇಲಿನ ಭಾರವನ್ನು ಯಾವುದಾದರೂ ಒಂದು ರೀತಿಯಿಂದ ಕಡಿಮೆ ಮಾಡಲು ಇನ್ನೊಂದು ಸಲ ವಿಚಾರ ಮಾಡಿ ಅದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ತಮ್ಮ ಮೂಲಕ ನಾನು ಮಾನ್ಯ

ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈಗ ಅಧ್ಯಕ್ಷರೇ, ಖುಷ್ಕಿ ಭೂಮಿ ಅಭಿವೃದ್ಧಿ ಬಗೆ ಸಾಕಷ್ಟು ಮಾತನಾಡುತ್ತಿದ್ದೇವೆ. ಖುಷ್ಕಿ ಭೂಮಿ ಅಭಿವೃದ್ಧಿ ಬಗ್ಗೆ ಕೆಲವೊಂದು ಕಡೆ ಕೆಲಸ ನಡೆಯುತ್ತಿದೆ. ಒಣಭೂಮಿ ಬೇಸಾಯ ಗಂಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ ಈ ಜಿಲ್ಲೆಗಳಲ್ಲಿ ಆಗುತ್ತಿದೆ. ಕೇಂದ್ರ ಸರ್ಕಾರ ಕೂಡ ಈ ಒಂದು ಯೋಜನೆಯನ್ನು ಮುಂದೆ ಬರತಕ್ಕಂಥ ಕಾರ್ಯಕ್ರಮ ಹಾಕಿ ಕೊಂಡು ಸಹಾಯ ಮಾಡಬೇಕು ಇದು ಬಹಳ ಒಳ್ಳೆಯದಾಗುತ್ತದೆ ಆದರೆ ಅದನ್ನು ಒಳ್ಳೆಯ ರೀತಿ ಯಿಂದ ಮಾಡಬೇಕಾದರೆ ಜನರ ಸಹಕಾರ ಕೂಡ ಅತೀ ಅವಶ್ಯವಿದೆ. ಏಕೆಂದರೆ ಯಾವುದಾದರೂ ಜಲಾ ನಯನ ಪ್ರದೇಶಗಳಲ್ಲಿ ಕೆಲಸ ಮಾಡಬೇಕಾದಾಗ ಜನರ ಸಹಕಾರ ಬೇಕು. ಅವರು ಭೂಮಿ ಕೊಡಬೇಕು ಎಲ್ಲಿಯವರೆಗೆ ಅವರ ಅಂದರೆ ಜನರ ಸಪಕಾರ ಸಿಗುವುದಿಲ್ಲ, ಅಲ್ಲಿಯವರೆಗೆ ಸರ್ಕಾರಕ್ಕೆ ಕೆಲಸ ಮಾಡು ವುದು ಕಷ್ಟವಾಗುತ್ತದೆ. ಮತ್ತು ಒಣ ಭೂಮಿ ಅಭಿವೃದ್ಧಿ ಯೋಜನೆಯನ್ನು ಒಳ್ಳೆಯ ರೀತಿಯಿಂದ ಸರ್ಕಾರಕ್ಕೆ ಮಾಡುವುದಕ್ಕೆ ಆಗುವುದಿಲ್ಲ. ಹೋದವರ್ಷ ಸಾಕಷ್ಟು ಬರಗಾಲದ ಕೆಲಸ ಗಂಲ್ಬರ್ಗಾ, ರಾಯಚೂರು, ಬೀದರ್ ಬಳ್ಳಾರಿಗಳಲ್ಲಿ ನಡೆದಿದೆ. ಈ ಕೆಲಸ ಸರಿಯಾಗಿ ನಡೆಯುತ್ತಿದೆ ಎಂದು ಹೇಳು ತ್ತೇನೆ. ಈಗ ಸರ್ಕಾರಿ ಔದ್ಯಮಿಕ ವಲಯಗಳ ಬಗ್ಗೆ, ಒಂದು ವಿಚಾರ ಇದರಲ್ಲಿದೆ. ಅವುಗಳು ಸರಿಯಾಗಿ ನಡೆಯುತ್ತಿಲ್ಲ ಎನ್ನತಕ್ಕ ವಿಚಾರವನ್ನು ಇಲ್ಲಿ ಹೇಳಲಾಗಿದೆ. ಆದರೆ ಸರ್ಕಾರಿ ವಲಯಗಳಲ್ಲಿ, ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಮಾತನಾಡುತ್ತಾ ಮೈಸೂರು ಪೇಪರ್ ಮಿಲ್ಸ್ ಮತ್ತು ಮತ್ತಿತರ ಉದ್ಯಮ ಗಳಲ್ಲಿ ಆಗತಕ್ಕಂಥ ಹಾನಿಗಳ ಬಗ್ಗೆ ಹೇಳಿದರು. ಅವರು ಹೇಳುತ್ತಿದ್ದರು ಈ ಸರ್ಕಾರಿ ಉದ್ಯಮಗಳಲ್ಲಿ. ಕೈಗಾರಿಕೆಗಳಲ್ಲಿ ಸ್ವಲ್ಪ ಲಾಭ ಆದಕೂಡಲೇ ಅಧಿಕಾರಿಗಳು ಇನ್ನೊಂದು ಎಕ್ಸಪಾನ್‌ಶನ್ ಪ್ರೋಗ್ರಾಂ ಹಾಕಿ ಅದನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಿ ಹಾನಿ ಮಾಡತಕ್ಕಂಥದು ನಡೆದಿದೆ ಎಂದು ಅಧ್ಯಕ್ಷರೇ ಇದು ತಮಗೂ ಗೊತ್ತಿದೆ, ಉದಾಹರಣೆಗೆ ಮೈಸೂರು ಪೇಪರ್ ಮಿಲ್ಸ್ ಬಗ್ಗೆ ಹೇಳುವುದಾದರೆ, ಇದು ೨೦–೨೫ ಸಾವಿರ ಟನ್ ಉತ್ಪಾದನೆ ಮಾಡುತ್ತಿದ್ದು ಸುಮಾರು ೫೦ ರಿಂದ ೬೦ ಲಕ್ಷರೂಪಾಯಿಗಳ ಲಾಭ ವನ್ನು ಗಳಿಸುತ್ತಿತ್ತು. ಒಂದು ಲಕ್ಷ ೧೦ ಸಾವಿರ ಟನ್ ಉತ್ಪಾದನೆ ಮಾಡುವಾಗ ಸುಮಾರು ೨೫ ಕೋಟಿ ರೂಪಾಯಿಗಳ ನಷ್ಟವನ್ನು ಮಾಡುತ್ತಿದೆ. ಅದೇ ರೀತಿ ವಿಶ್ವೇಶ್ವರಯ್ಯ ಸ್ಟೀಲ್ ಕಾರ್ಖಾನೆಯೂ ಕೂಡ ೨೫ ಕೋಟಿ ರೂಪಾಯಿಗಳ ನಷ್ಟ ಮಾಡುತ್ತಿತ್ತು. ಕೆಎಸ್‌ಐಡಿಎಲ್ ಇವತ್ತಿನ ದಿವಸ ತನ್ನ ಬಂಡವಾಳವನ್ನೇ ಕಳೆದುಕೊಳ್ಳುವ ಪರಿಸ್ಥಿತಿ ಇದೆ. ಎಷ್ಟೋ ಸರ್ಕಾರಿ ವಲಯಗಳಲ್ಲಿನ ಉದ್ಯಮಗಳ ಪರಿಸ್ಥಿತಿ ಗಂಭೀರವಾಗಿದೆ, ನೆಪಮಾತ್ರಕ್ಕೆ ಸೀಕ್‌ನ್ನು ಮಾಡಿ, ಬೇರೆಯವರಿಗೆ ಮಾರಾಟ ಮಾಡುವಂಥಾ ದ್ದನ್ನು ವಿಚಾರ ಮಾಡಬೇಕಾಗಿದೆ. ಇದರ ಬಗ್ಗೆ ಒಂದು ಸಮಿತಿಯನ್ನು ರಚಿಸಿ ಇವುಗಳಲ್ಲಿ ಏಕೆ ನಷ್ಟವಾ ಗುತ್ತಿದೆ, ರಾ ಮೆಟೀರಿಯಲ್ಸ್ ಇದೆಯೋ, ಇಲ್ಲವೋ, ಯಾವ ಕಾರಣಕ್ಕಾಗಿ ನಷ್ಟವಾಗುತ್ತಿವೆ ಎನ್ನು ವುದನ್ನು ವಿಚಾರ ಮಾಡಿದರೆ ಸರಿಹೋಗಬಹುದು.

ಅಧ್ಯಕ್ಷರು.—ನೀವು ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯಲ್ಲಿ ಇದ್ದೀರಿ, ಎನ್‌ಕ್ವೈಯರಿ ಮಾಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಎಲ್ಲರೂ ಬುದ್ಧಿವಂತರು, ಇತ್ಯಾದಿ ಇದ್ದರೂ ಯಾರಿಗೂ ಅನುಕಂಪ ಇಲ್ಲ.

ಶ್ರೀ ಎಸ್. ಕೆ. ಶಾಂತ.—ಕರ್ನಾಟಕ ಸೋಪ್ ಅಂಡ್ ಡಿಟರ್ಜಂಟ್‌ನಲ್ಲಿ ಉತ್ಪಾದನಾ ಶಕ್ತಿ ಹೆಚ್ಚಾಗಿದೆ. ಈಗ ಉತ್ಪಾದನೆ ಮಾಡತಕ್ಕಂಥಾದ್ದು ಎಷ್ಟೆಂದರೆ, ೯–೧೦ ಸಾವಿರ ಟನ್ ಸುಮಾರು ೨೬ ಸಾವಿರ ಟನ್ ಉತ್ಪಾದನೆ ಮಾಡುವ ಶಕ್ತಿ ಇದ್ದರೂ ಕೂಡ ಉಪಯೋಗ ಮಾಡುತ್ತಿಲ್ಲ. ಎಂ.ಎಸ್. ಐ.ಎಲ್. ನವರಿಗೆ ಸೋಪು ಮುಂತಾದ ವಸ್ತುಗಳನ್ನು ಸರಿಯಾಗಿ ಕೊಡುತ್ತಾ ಇಲ್ಲ. ಇಂಥ ಕೆಲವು ಕಾರಣಗಳಿಂದ ನಷ್ಟವಾಗಿದೆ. ಅದಕ್ಕೋಸ್ಕರವಾಗಿ ಕಮಿಟಿ ಮಾಡಿ, ಸರ್ಕಾರಿ ವಲಯದಲ್ಲಿ ನಷ್ಟದಲ್ಲಿ ನಡೆಯುತಕ್ಕ ೩–೪ ಉದ್ದಿಮೆಗಳು ಏನಿವೆ ಇವುಗಳ ಬಗ್ಗೆ ಏಕೆ ನಷ್ಟವಾಗುತ್ತಿವೆ ಎಂಬುದನ್ನು ವಿಚಾರಣೆ ಮಾಡಲು ಒಂದು ಸಮಿತಿಯನ್ನು ಮಾಡಿ. ಯಾವ ರೀತಿ ಪ್ರೊಡಕ್ಷನ್ ಮಾಡಬೇಕು ಎಂಬುದನ್ನು ಕಂಡು ಹಿಡಿಯಬೇಕಾಗಿದೆ.

ಈ ರೀತಿ ಮಾಡುವುದರಿಂದ, ನಷ್ಟದ ಕಾರಣಗಳು ಗೊತ್ತಾಗುವುದಲ್ಲದೆ, ಮುಂದೆ ಕಾರ್ಖಾನೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಒಳ್ಳೆಯದಾದೀತು ಎಂದು ನನ್ನ ಸಲಹೆ. ಇನ್ನು ವಿಲೇಜ್ ಲೆವಲ್‌ನಲ್ಲಿ ಕೆಲವೊಂದು ಡೆವಲಪ್‌ಮೆಂಟ್ ವರ್ಗವಾಗಿದೆ. ಜನರಿಗೆ ಸಹಾಯ ಮಾಡುವಂತಹ ಕೆಲಸಗಳು ಆಗಿವೆ. ಯಾರೋ ಮಾನ್ಯ ಸದಸ್ಯರು ಮಾತನಾಡುತ್ತಾ ವಿಲೇಜ್ ಎಲೆಕ್ಟ್ರಿಫಿಕೇಷನ್ ಆಗಿಲ್ಲ ಎಂದು ಹೇಳಿದರು.

೧೯೮೫-೮೬ ರಲ್ಲಿ ೨೨,೬೬೭ ಹಳ್ಳಿಗಳಿಗೆ ಎಲೆಕ್ಟ್ರಿಫಿಕೇಷನ್ ಆಗಿದೆ. ೪ ಲಕ್ಷ ೪೧ ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಟ್ಟಿದೆ. ರಾಜ್ಯದಲ್ಲಿ ಇಷ್ಟು ಕೆಲಸ ಮಾಡದಂಥ ಪರಿಸ್ಥಿತಿ ಇದ್ದರೂ ಕೂಡ ಯಾವುದೋ ಒಂದು ಕೆಲಸ ನಿಂತುಹೋದರೆ ಕೆಲಸ ಆಗಲಿಲ್ಲ ಎನ್ನುವುದನ್ನು ಬಿಟ್ಟರೆ ಮತ್ತೆ ಯಾವುದೂ ಆಗಿಲ್ಲ ಎಂದು ಹೇಳುವುದು ಸರಿಯಿಲ್ಲ.

ಇನ್ನು ಸರ್ಕಾರಿ ನೌಕರರಿಗೆ ವೇತನ ಶ್ರೇಣಿಯ ಬಗ್ಗೆ ಒಂದು ನೂರು ಕೋಟಿ ರೂಪಾಯಿಗಳು ಹೋಗುತ್ತಿದೆ. ಇದರಿಂದ ನಮಗೆ ಬರ್ಡನ್ ಆಗಿದೆ ಎಂದು ಮಾನ್ಯ ಖರ್ಗೆಯವರು ಹೇಳಿದರು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಂದರ್ಭದಲ್ಲಿ ನಾನೂ ಕೂಡ ಹೇಳಿದ್ದೇನೆ. ಸರ್ಕಾರಿ ನೌಕರರಿಗೆ ವೇತನವನ್ನು ಹೆಚ್ಚಿಗೆ ಮಾಡುವುದರಲ್ಲಿ ನಮಗೆ ಅಭ್ಯಂತರ ಇಲ್ಲ. ಯಾರಿಗಾದರೂ ಸಂಬಳ ಏರಿಸುವಾಗ, ಅವರಿಗೆ ವರ್ಕ್‌ಲೋಡ್ ಇದೆಯೋ ಇಲ್ಲವೋ ಎಂಬುದನ್ನು ವಿಚಾರಣೆ ಮಾಡುವಂತಾದ್ದು ಅತಿ ಅವಶ್ಯಕ. ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ ಸಂಬಳವನ್ನು ಜಾಸ್ತಿಮಾಡುವಾಗ, ವರ್ಕ್‌ರೋಡ್ ಎಷ್ಟಿದೆ, ಎಷ್ಟು ಕೆಲಸ ಮಾಡುತ್ತಿದ್ದಾರೆ ಎಷ್ಟು ಸಂಬಳ ಕೊಡಬೇಕು ಎಂಬ ವಿಚಾರಗಳೆಲ್ಲಾ ಬರುತ್ತವೆ. ಆದರೆ ಇಲ್ಲಿ ೩ನೇ ವೇತನ ಆಯೋಗದವರು ಕೊಟ್ಟಿರುವ ವರದಿಯ ಮೇರೆಗೆ, ಸರಳವಾಗಿ, ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡುವುದಕ್ಕೆ ಒಪ್ಪಿದ್ದಾರೆ. ಇವತ್ತು ಉದಾಹರಣೆಗೆ ತಹಶೀಲ್ದಾರ್ ಆಫೀಸ್‌ನಲ್ಲಿ ಕೆಲಸ ಮಾಡತಕ್ಕಂಥ ಒಬ್ಬ ಗುಮಾಸ್ತನಿಗೆ ಸರಿಯಾದ ವರ್ಕ್‌ಲೋಡ್ ಇಲ್ಲ, ಬೇರೆ ಒಬ್ಬ ಲೆಕ್ಚರರ್‌ಗಾಗಲೀ, ಟೀಚರ್‌ಗಾಗಲೀ, ಅವರಿಗೆ ವರ್ಕ್ ಲೋಡ್ ಇದೆ, ಆದರೆ ತಹಸೀಲ್ದಾರ್ ಆಫೀಸ್‌ನಲ್ಲಿ ಕೆಲಸ ಮಾಡತಕ್ಕವರಿಗೆ ಏನೂ ವರ್ಕ್ ಲೋಡ್ ಇಲ್ಲ. ಅವರು ದಿನಕ್ಕೆ ಎಷ್ಟು ಕೆಲಸ ಮಾಡಬೇಕೆಂದು ಉತ್ತರ ಇಲ್ಲ ಎಂಬುದನ್ನು ನಾವು ನೋಡುತ್ತಿದ್ದೇವೆ. ಅಂತಹವರಿಗೆ ಒಂದು ಕೆಲಸದ ಮಿತಿಯನ್ನು ಕೊಡಬೇಕು. ಅವರು ಇಷ್ಟೇ ಕೆಲಸ ಮಾಡಿ ಹೋಗಬೇಕು ಎಂದು ಒಂದು ಪ್ರೊಫಾರ್ಮಾ ಸಿಸ್ಟಮ್ ಆಗಲೀ ಏನಾದರೂ ಆಗಲೀ ಮಾಡಬೇಕು. ಮತ್ತು ಜನರಿಗೆ ತಮ್ಮ ಕೆಲಸ ಏನಾಯಿತು ಎಂಬುದು ಅವರಿಂದ ಏನೂ ಉತ್ತರವೇ ಬರುವುದಿಲ್ಲ. ಆದಕ್ಕೋಸ್ಕರ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ಕೇಳಿಕೊಳ್ಳತಕ್ಕದ್ದು ಏನೆಂದರೆ ಒಂದು ಸಮಿತಿಯನ್ನು ರಚನೆ ಮಾಡಿ. ಅವರಿಂದ ಯಾವರೀತಿ ಕೆಲಸ ತೆಗೆದುಕೊಳ್ಳಬೇಕೆಂಬ ಬಗ್ಗೆ ವಿಚಾರ ಮಾಡತಕ್ಕದ್ದು ಅತೀ ಅವಶ್ಯ ಇದೆ.

ಅಧ್ಯಕ್ಷರೇ, ತಮಗೆ ಗುರುತಿದೆ, ನಮ್ಮ ಗುಲಬರ್ಗಾ ವಿಭಾಗ ಎಲ್ಲಾ ರೀತಿಯಿಂದಲೂ ಹಿಂದುಳಿದಿರತಕ್ಕಂಥ ಪ್ರದೇಶ. ನೀರಾವರಿ ಯೋಜನೆಗಳಾಗಲೀ, ರಸ್ತೆ ನಿರ್ಮಾಣವಾಗಲೀ, ಮತ್ತಿತರ ಯಾವುದೇ ಕೆಲಸದಲ್ಲಾಗಲೀ ನಾವು ಹಿಂದುಳಿದಿದ್ದೇವೆ. ಆದನ್ನು ಅಭಿವೃದ್ಧಿ ಮಾಡಬೇಕು. ಅಲ್ಲಿ ಡೆವೆಲಪ್‌ಮೆಂಟ್ ವರ್ಕ್ಸ್ ಸ್ವಲ್ಪ ಹೆಚ್ಚು ಮಾಡಬೇಕಾದರೆ ಇನ್ನು ಹೆಚ್ಚು ಹಣ ಕೊಡಬೇಕು. ಈ ವರ್ಷ ನೀರಾವರಿ ಯೋಜನೆಗೆ ಸಾಕಷ್ಟು ಹಣ ಕೊಟ್ಟಿದ್ದಾರೆ, ಅಮರ್ಜಾ ಪ್ರಾಜೆಕ್ಟ್‌ಗಾಗಲೀ, ಕಾರಂಜಾ ಪ್ರಾಜೆಕ್ಟ್‌ಗಾಗಲೀ, ಬೆಣ್ಣೆತೊರಾ ಪ್ರಾಜೆಕ್ಟ್‌ಗಾಗಲೀ ಸಾಕಷ್ಟು ಹಣ ಕೊಟ್ಟಿದ್ದಾರೆ. ನಮ್ಮ ಮಾನ್ಯ ಖರ್ಗೆಯವರು ಸಚಿವರಾಗಿದ್ದಾಗ ಇಷ್ಟು ಹಣ ಅಲ್ಲಿಗೆ ಒದಗಿಸಲಿಲ್ಲ, ಈ ಒಂದು ಕಾರಣದಿಂದ ಕೆಲವೊಂದು ತೆರಿಗೆ ಭಾರ ಇವತ್ತು ಜನರ ಮೇಲೆ ಬೀಳತಕ್ಕಂಥ ಪರಿಸ್ಥಿತಿ ಬಂದಿದೆ. ಆದಕ್ಕೆ ಇವೊತ್ತಿನ ದಿವಸ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳತಕ್ಕದ್ದು ಏನು ಎಂದರೆ, ನಮ್ಮ ರೈತರು ಉಪಯೋಗಿಸುವ ವಸ್ತುಗಳ ಮೇಲೆ, ಗೊಬ್ಬರದ ಮೇಲೆ ಬೀಳತಕ್ಕಂಥ ಒಂದು ಹೆಚ್ಚಿನ ತೆರಿಗೆಯ ಭಾರ ಏನಿದೆ ಅದನ್ನು ಕಡಿಮೆ ಮಾಡಬೇಕು. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಸ್ವಲ್ಪ ಕಡಿಮೆ ಮಾಡತಕ್ಕ ಯೋಚನೆ ಮಾಡಬೇಕೆಂದು ಸಲಹೆ ಕೊಟ್ಟು, ಮಾತನಾಡುವುದಕ್ಕೆ ಅವಕಾಶ ಕೊಟ್ಟಿರತಕ್ಕಂಥ ತಮಗೆ ವಂದನೆ ಸಲ್ಲಿಸಿ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಸಿರಾ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಆಯವ್ಯಯದ ಬಗ್ಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮಾಡಿರತಕ್ಕ ಭಾಷಣದಲ್ಲಿ ಮೊಟ್ಟಮೊದಲನೆಯದಾಗಿ ಅವರು, ಬಹಳವಾಗಿ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ನಾವು ಎತ್ತಿಹಿಡಿದಿದ್ದೇವೆ ಪ್ರಜಾಪ್ರತಿನಿಧಿಗಳನ್ನು ನಾವು ಒಟ್ಟಾರೆ ಸೇರಿಸಿ ಒಂದು ಸಭೆಯನ್ನು ಮಾಡಿ, ಎಲ್ಲರಿಗೂ ಮನೋರಂಜನೆ ಆಗತಕ್ಕಂಥ ಒಂದು ಕಾರ್ಯವನ್ನು ಸಾಧಿಸಿದ್ದೇವೆ, ಇದು ಪ್ರಪಂಚದಲ್ಲೆಲ್ಲೂ ನಡೆದಿಲ್ಲದಿರತಕ್ಕಂಥ ಕೆಲಸ ಎಂದು ತಮ್ಮ ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಗಾಂಧೀಜಿಯವರು ನೆನೆಸಿದಂಥ ಪ್ರಜಾಪ್ರಭುತ್ವಕ್ಕೂ ಗ್ರಾಮ ರಾಜ್ಯಕ್ಕೂ ಮತ್ತು ನಮ್ಮ ಮುಖ್ಯಮಂತ್ರಿಗಳು ಬೆನ್ನು ತಟ್ಟಿಕೊಂಡಿರತಕ್ಕ ಅವರು ಸಾಧನೆ ಮಾಡಿರತಕ್ಕಂಥ ಪ್ರಜಾಪ್ರಭುತ್ವಕ್ಕೂ, ಗ್ರಾಮರಾಜ್ಯಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಏತಕ್ಕೆಂದರೆ ಯಾವುದೇ ಒಂದು ಪ್ರಜಾಪ್ರಭುತ್ವವಾಗಲೀ ಜನರು ನೇರವಾಗಿ ಹತ್ತಿರವಾಗಿ ತಮ್ಮ ಪ್ರತಿನಿಧಿಯನ್ನು ನೋಡುವಂತಹ ಒಂದು ಅವಕಾಶವನ್ನು ನಾವು ಕಲ್ಪಿಸಿಕೊಡಬೇಕು. ಆದರೆ ಇವರು ಮಾಡಿರತಕ್ಕಂಥ ಪಂಚಾಯಿತಿ ರಾಜ್ಯ ಇದು ಏನಿದೆ. ಹಿಂದೆ ಇದ್ದಂಥ ಪಂಚಾಯತಿ ರಾಜ್ಯ ಸಂಸ್ಥೆಗಳು ಏನಿದ್ದವು, ಆ ಪಂಚಾಯತಿಗಳಿಗಿಂತ ಇವತ್ತು ಇವರು ಪ್ರತಿನಿಧಿಗಳನ್ನು ದೂರವಾಗಿ ಇಟ್ಟಿದ್ದಾರೆ. ಹಿಂದೆ ನಮ್ಮ ಸರಕಾರ ಇದ್ದಾಗ ಕೊ–ಆಪರೇಟೀವ್ ಸೊಸೈಟಿಗಳನ್ನು ಅಮಾಲ್ಗಮೇಷನ್ ಮಾಡಿದ್ದರು. ಈ ರೀತಿ ಅಮಾಲ್ಗಮೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ಹಲವಾರು ಡಿಫಾಲ್ಟರ್ ಸೊಸೈಟಿಗಳು ಚೆನ್ನಾಗಿದ್ದ ಸೊಸೈಟಿಗಳ ಜೊತೆಗೆ ಸೇರಿಕೊಂಡು ಎಂಟೈರ್ ಕೊ–ಆಪರೇಟಿವ್ ಸಿಸ್ಟಮ್ ಕ್ಷೀಣ ಸ್ಥಿತಿಗೆ ಬರಲಿಕ್ಕೆ ಅವಕಾಶ ಆಯಿತು. ಈ ಒಂದು ಪಂಚಾಯಿತಿ ರಾಜ್ಯ ವ್ಯವಸ್ಥೆ ನಮ್ಮ ಮುಖ್ಯ ಮಂತ್ರಿಗಳು ಏನು ಮಾಡಿದ್ದಾರೆ, ಇವೂ ಕೂಡಾ ಅದೇ ಒಂದು ಪರಿಸ್ಥಿತಿಗೆ ಬರುವಂತಹ ಚಿಹ್ನೆಗಳು ಮತ್ತು ಸೂಚನೆಗಳು ನಮಗೆ ಕಾಣಿಸುತ್ತಿವೆ. ಪ್ರಜಾಪ್ರಭುತ್ವವೆಂದರೆ ಹೇಗಿರಬೇಕೆಂದು ನಮ್ಮ ಜವಹರಲಾಲ್ ನೆಹರೂ ಅವರು ಒಂದು ಮಾತನ್ನು ಹೇಳಿದ್ದರು.

೪–೩೦ ಪಿ. ಎಂ.

ಶ್ರೀ ಜವಹರಲಾಲ್ ನೆಹರೂರವರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಸಾರ್ವಜನಿಕ ವಾಗಿ ಗೊತ್ತಿರತಕ್ಕಂಥ ಅಭಿಪ್ರಾಯವನ್ನು ಕ್ರೋಢೀಕರಿಸತಕ್ಕಂತಹ ಸಂಸ್ಥೆಗಳನ್ನು ನಾವು ಸ್ಥಾಪನೆ ಮಾಡುವ ಮೊದಲೇ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸಾಧನೆ ಮಾಡಿದ್ದೇವೆ. ಅದು ಬಿಟ್ಟು ಕೇವಲ ಜನರ ಒಂದು ಅಧಿಕಾರವನ್ನು ಕೊಟ್ಟರೆ ಅದು ಪ್ರಜಾಪ್ರಭುತ್ವವಾಗುವುದಿಲ್ಲ. ಈ ಆಯವ್ಯಯ ಪತ್ರದಲ್ಲಿ ಹೇಳಿರುವಂತೆ ಗಾಂಧೀಜಿಯವರು ಕಂಡ ಕನಸು ನಾವು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗು ವುದಿಲ್ಲ. ಇವೊತ್ತು ಸನ್ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬಡ್ಜೆಟ್ ಭಾಷಣದಲ್ಲಿ ಪ್ರಮುಖವಾಗಿ ನಮಗೆಲ್ಲಾ ಕಾಣಿಸುತ್ತಿರುವುದು ತೆರಿಗೆಯ ಹೊರೆಯನ್ನು ನಮ್ಮ ರೈತರ ಮೇಲೆ ಹಾಕಿರುವುದು. ಈ ಒಂದು ಬಡ್ಜೆಟ್‌ನಲ್ಲಿ ಕೃಷಿ ಕಾರ್ಮಿಕರಿಗೆ ಯಾವುದು ಸೌಲಭ್ಯವನ್ನು ಸಹ ಒದಗಿಸಿಕೊಟ್ಟಂತೆ ಕಾಣಲಿಲ್ಲ. ತಾವು ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೀರಿ. ನಾವು ಎನ್.ಆರ್. ಇ.ಪಿ. ಆರ್.ಎಲ್.ಇ.ಜಿ.ಪಿ. ಇತ್ಯಾದಿ ಯೋಜನೆಗಳ ಮುಖಾಂತರ ಜನರಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದ್ದೇವೆಂದು ಈ ಹಣವನ್ನು ತಾವು ಯಾವ ಒಂದು ಹೆಡ್‌ನಲ್ಲಿ ಕೊಟ್ಟಿದ್ದೀರಿ ಎನ್ನುವುದು ಬಹಳ ಮುಖ್ಯ. ಈ ಒಂದು ಆಯವ್ಯಯ ಪತ್ರದಲ್ಲಿ ಸರ್ಕಾರಿ ನೌಕರರಿಗೆ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡಿದ್ದೀರಿ. ಆದರೆ ಕೃಷಿಕಾರ್ಮಿಕರಿಗೆ ಯಾವುದೇ ರೀತಿಯ ಸೌಲಭ್ಯಗಳನ್ನು ಕೊಟ್ಟಿಲ್ಲ. ಕೃಷಿಕಾರ್ಮಿಕರು ಈ ದೇಶದ ಬೆನ್ನಲುಬು ಎಂದು ತಾವೆಲ್ಲಾ ಹೇಳುತ್ತೀರಿ. ಅವನ ಬೆವರು ಸುರಿಸಿ ಸಂಪಾದನೆ ಮಾಡಿದ ಹಣ ಇವತ್ತು ನಿಮ್ಮ ಖಜಾನೆಯಲ್ಲಿರುವುದು. ಇವತ್ತು ಹಣ ಆಗಿರಲಿ ಅಥವಾ ಇನ್ನಾವುದೇ ಕರೆನ್ಸಿಯಾಗಿರಲಿ ಅದೆಲ್ಲಾ ರೈತನು ಬೆವರು ಸುರಿಸಿ ಸಂಪಾದನೆ ಮಾಡಿದ ಹಣ. ಆದ್ದರಿಂದ ಆ ಕೃಷಿಕಾರ್ಮಿಕರಿಗೆ ಏನಾದರೂ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ರೂರಲ್ ವಾಟರ್ ಸಪ್ಲೈ ಸ್ಕೀಮ್ ಬಗ್ಗೆ ಈ ಆಯವ್ಯಯ ಪತ್ರದಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಹಳ್ಳಿಗಾಡು ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಬಹುತೇಕವಾಗಿ ಹಿಂದಿನ ಬಡ್ಜೆಟ್ ಭಾಷಣ ವನ್ನು ನಾವು ಈಗ ಕಂಪೇರ್ ಮಾಡಿ ನೋಡಿದರೆ ಆಗ ಏನೊಂದು ಆಶ್ವಾಸನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದರೋ ಅದಕ್ಕೆ ತದ್ವಿರುದ್ಧವಾಗಿ ಈ ಸಾಲಿನಲ್ಲಿ ಹೇಳಿದ್ದಾರೆ. ಇವೊತ್ತು ಅನೇಕ ಕಡೆಗಳಲ್ಲಿ ತಾವು ಕೊಳವೆ ಬಾವಿಗಳನ್ನು ತೋಡಿಸಿದ್ದೀರಿ. ಈ ಯೋಜನೆಗಳು ಕೇಂದ್ರ ಸರ್ಕಾರದ ಸ್ಕೀಮ್ಸ್ ಆಗಿರಬಹುದು, ಅಥವಾ ಸ್ಟೇಟ್ ಸ್ಕೀಮ್ಸ್ ಆಗಿರಬಹುದು. ಒಟ್ಟಿನಲ್ಲಿ ೧೦೦ ಬೋರ್‌ವೆಲ್ ಗಳನ್ನು ಮಾಡಿಸಿದ್ದರೆ ಅವುಗಳಲ್ಲಿ ೬೦ ಬೋರ್‌ವೆಲ್‌ಗಳು ಕೆಟ್ಟಿವೆ. ಈ ಬೋರ್‌ವೆಲ್‌ಗಳು ಸಣ್ಣ ಸಣ್ಣ ಕಾರಣಗಳಿಗಾಗಿಯೇ ಕೆಟ್ಟಿವೆ. ಅಂದರೆ ವಾಶರ್ ಇಲ್ಲದಿರುವುದರಿಂದ, ನಟ್ಟು ಮತ್ತು ಬೋಲ್ಟ್‌ಗಳು ಇಲ್ಲದಿರುವುದರಿಂದ ಆ ಬೋರ್‌ವೆಲ್‌ಗಳು ಕೆಟ್ಟಿವೆ. ಈ ಒಂದು ವಾಶರ್ ಬೆಲೆ ಕೇವಲ ೮–೧೦

ರೂಪಾಯಿಗಳು ಇರಬಹುದು. ಒಂದು ಬೋರ್‌ವೆಲ್ಟ್ ನೆಟ್ಟಿನ ಬೆಲೆ ೨೦—೨೫ ರೂಪಾಯಿಗಳು. ಈ ಹಣವನ್ನು ಖರ್ಚು ಮಾಡುವುದಕ್ಕಾಗದೆ ಅನೇಕ ಬೋರ್‌ವೆಲ್‌ಗಳು ಇವತ್ತು ಕೆಟ್ಟಿವೆ. ಈ ದಿಸೆಯಲ್ಲಿ ತಾವು ಕೆಲಸ ಮಾಡಲು ವಿಫಲರಾಗಿದ್ದೀರೆಂದು ನಾನು ಹೇಳಬೇಕಾಗುತ್ತದೆ. ಈ ಬಗ್ಗೆ ತ್ವರಿತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಯಾವಾಗಲೂ ಪ್ಲಾನ್‌ಗಳನ್ನು ಮಾಡುತಕ್ಕಂಥಾದ್ದರಲ್ಲಿ ಬ್ಯಾಲೆನ್ಸ್ ಆಗಿರಬೇಕು. ಆಡಳಿತದಲ್ಲಿ ಪ್ಲಾನಿಂಗ್ ಇರಬೇಕು ಅಗ್ರಿಕಲ್ಚರ್‌ನಲ್ಲಿ ಪ್ಲಾನಿಂಗ್ ಇರಬೇಕು. ಇಂಡಸ್ಟ್ರೀಗಳಲ್ಲಿ ಪ್ಲಾನಿಂಗ್ ಇರಬೇಕು. ಈ ಒಂದು ದಿಸೆಯಲ್ಲಿ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಇನ್ನು ನಾನು ಮೊನ್ನೆಯ ದಿವಸ ಗೃಹ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಕೆಲವು ವಿಚಾರಗಳನ್ನು ಹೇಳಿದ್ದೆ. ಅದೇನೆಂದರೆ ಪಾವಗಡದಲ್ಲಿ ನಡೆದಂತಹ ಘಟನೆಯ ಹಿನ್ನೆಲೆಯಲ್ಲಿ ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಒಂದೊಂದು ವುಮೆನ್ ಸ್ಕ್ವಾಡ್ ಮಾಡಬೇಕೆಂದು ಇದರಿಂದ ವುಮೆನ್ಸ್ ರಕ್ಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದೇ ರೀತಿಯಲ್ಲಿ ಮಹಿಳೆಯರ ಕಲ್ಯಾಣಕ್ಕಾಗಿ ಕೂಡ ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ಈ ರಾಜ್ಯದಲ್ಲಿ ಅರ್ಧದಷ್ಟು ಜನ ಹೆಣ್ಣು ಮಕ್ಕಳಿದ್ದಾರೆ. ಇನ್ನರ್ಧದಷ್ಟು ಜನ ಪುರುಷರಿದ್ದಾರೆ. ಇವರ ಜೊತೆಗೆ ಬಾಲಕ ಮತ್ತು ಬಾಲಕಿಯರು ಸಹ ಇದ್ದಾರೆ. ಇವರ ಅಭಿವೃದ್ಧಿಗೂ ಸಹ ತಾವು ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಈ ದಿಸೆಯಲ್ಲಿ ಕೂಡ ತಾವು ವಿಫಲರಾಗಿದ್ದೀರಿ ಎನ್ನುವ ಮಾತನ್ನು ನಾನು ಈ ಸಂದಭದಲ್ಲಿ ಹೇಳಬಯಸುತ್ತೇನೆ. ಆದ್ದರಿಂದ, ಉಮೆನ್ಸ್ ಸ್ಕ್ವಾಡ್‌ನ್ನು ಸ್ಥಾಪನೆ ಮಾಡುತ್ತೇನೆಂದು ಹೋಮ್ ಮಿನಿಸ್ಟರ್‌ರವರು ಭರವಸೆ ಕೊಟ್ಟಿದ್ದಾರೆ. ಇದೇ ಆಯವ್ಯಯ ಯೋಜನೆಯಲ್ಲಿ ಈ ಸ್ಕ್ವಾಡ್‌ಗೆ ಹಣವನ್ನು ಸೃಷ್ಟಿಸಿಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಹೆಣ್ಣು ಮಕ್ಕಳ ಹಿತಕ್ಕೆ ಒಂದು ಸ್ಪೆಷಲ್ ಸ್ಕ್ವಾಡ್‌ನ್ನು ಅತಿ ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಮೊದಲೇ ಈ ಸ್ಕ್ವಾಡ್‌ನ್ನು ಮಾಡಬೇಕಾಗಿತ್ತು ಆದರೆ, ಅದನ್ನು ಇವರು ಈಗಾಗಲೇ ಮಾಡುವಲ್ಲಿ ವಿಫಲರಾಗಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಇನ್ನು ಎಜುಕೇಷನ್ ವಿಷಯದಲ್ಲಂತೂ ನಾವು ಸುಮ್ಮನೆ ಮಾತನಾಡುತ್ತೇವೆಯೇ ಹೊರತು ಕೃತಿಯಲ್ಲಿ ಯಾವ ಒಳ್ಳೆಯ ಕಾರ್ಯಕ್ರಮನ್ನು ತೆಗೆದುಕೊಂಡು ಜಾರಿ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಶಿಕ್ಷಣಕ್ಕೆ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದರೂ ಸಹ ಇದುವರೆಗೂ ಏನೂ ಪ್ರಯೋಜನವಾಗಿಲ್ಲ. ಅನೇಕ ಸ್ಕೂಲುಗಳನ್ನು ಕಟ್ಟುವುದಕ್ಕೆ ಹಣವನ್ನು ಕೊಟ್ಟಿದ್ದಾರೆ, ಆದರೆ ಅಲ್ಲಿ ಸ್ಕೂಲ್‌ಗಳೇ ಇರುವುದಿಲ್ಲ. ವಿದ್ಯಾ ಮಟ್ಟ ಸುಧಾರಣೆಯಾಗಲಿ ಎಂದು ಅನೇಕ ರೀತಿಯ ಗ್ರ್ಯಾಂಟ್ಸ್‌ನ್ನು ಸರ್ಕಾರದವರು ಕೊಡುತ್ತಿದ್ದರೂ ಸಹ ವಿದ್ಯಾ ಮಟ್ಟ ಕೆಳಮಟ್ಟಕ್ಕೇ ಬರುತ್ತಿದೆ. ವಿದ್ಯಾ ಕ್ಷೇತ್ರದಲ್ಲಿ ಒಳ್ಳೆಯ ವಾತಾವರಣ ಸೃಷ್ಟಿಸಿದರೆ ಮಾತ್ರ ದೇಶದಲ್ಲಿ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಮುಂದೆ ದೇಶವನ್ನು ಆಳತಕ್ಕಂಥ ಜನರೇಷನ್‌ನನ್ನು ನಾವು ಉತ್ತಮ ರೀತಿಯಲ್ಲಿ ಬೆಳೆಸುವುದಕ್ಕೆ ಸಾಧ್ಯವಿಲ್ಲ. ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ನಾವು ಕೊಟ್ಟು ಮುಂದಿನ ಪೀಳಿಗೆಯವರು ಒಳ್ಳೆಯ ವಿದ್ಯಾವಂತರಾಗುವಂತೆ ಮಾಡಬೇಕು. ಈ ಕೆಲಸವನ್ನು ಮಾಡುವುದರಲ್ಲೂ ಸಹ ಇವರು ವಿಫಲರಾಗಿದ್ದಾರೆಂದು ಈ ಸಂದರ್ಭದಲ್ಲಿ ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಏಕೆಂದರೆ ರಿಸೋರ್ಸಸ್‌ಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳದಿದ್ದರೆ ಮನೆಯ ಕಟ್ಟಡದ ತಳಪಾಯ ಸರಿಯಾಗಿ ಇಲ್ಲದಿದ್ದರೆ ಮನೆ ಭದ್ರವಾಗಿ ಹೇಗೆ ಇರುವುದಿಲ್ಲವೋ ಅದೇ ರೀತಿ ರಿಸೋರ್ಸ್‌ಗಳನ್ನು ಉಪಯೋಗಿಸಿಕೊಳ್ಳದಿದ್ದರೂ ಆಗುತ್ತದೆ ಆದ್ದರಿಂದ ರಿಸೋರ್ಸಸ್‌ಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ವಿದ್ಯಾ ಮಟ್ಟವನ್ನು ಉತ್ತಮ ರೀತಿಯಲ್ಲಿ ಹೆಚ್ಚಿಸಬೇಕು ಅದು ಬಿಟ್ಟು ಪ್ರತಿ ವರ್ಷವೂ ಬಡ್ಜೆಟ್‌ನಲ್ಲಿ ವಿದ್ಯಾಭ್ಯಾಸಕ್ಕಾಗಿ ಇಷ್ಟು ಹಣವನ್ನು ಇಟ್ಟಿದ್ದೇವೆ ಎಂದರೆ ಏನೇನೂ ಪ್ರಯೋಜನ ಆಗುವುದಿಲ್ಲ. ಇದರ ಬಗ್ಗೆ ನಮ್ಮ ಜವಹರಲಾಲ್ ನೆಹರೂರವರು ಒಂದು ಮಾತನ್ನು ಹೇಳಿದ್ದರು. "Education is meant to free the sprit of man and not to imprison it in set frames." ವಿದ್ಯಾಭ್ಯಾಸದ ಬಗ್ಗೆ ಸ್ಪಿರಿಟ್‌ನ್ನು ಮಕ್ಕಳಿಂದ ಹೊರಕ್ಕೆ ಎಳೆಯದಿದ್ದರೆ ನಿಜವಾಗಲೂ ಎಷ್ಟು ಹಣ ಖರ್ಚು ಮಾಡಿದರೂ ಅದು ಸಾರ್ಥಕವಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಮಕ್ಕಳು ವಿದ್ಯೆಯನ್ನು ಕಲಿಯುವುದಕ್ಕೆ ಒಳ್ಳೆಯ ವಾತಾವರಣವನ್ನು

ಸರ್ಕಾರವು ಸೃಷ್ಟಿಸಿಕೊಡಬೇಕು. ಇನ್ನು ಒಂದು ಮಾತನ್ನು ಮಾನ್ಯ ಜವಹರಲಾಲ್ ನೆಹರೂರವರು ಹೇಳಿದ್ದಾರೆ.

"Ultimately, a country's standing in the world is obviously judged not by the number of people it has, crores and crores, but by the number of top-ranking men and women it has, who show results, who can give a proper lead, and also by the number of other eminent men it has to carry on the work of a large country. It is a certain quality that counts in the end, not quantity, although quantity also is necessary in a certain measure." ಆದ್ದರಿಂದ ನಾವು ವಿದ್ಯಾ ರಂಗದಲ್ಲಿ ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡುವುದರ ಮೂಲಕ ಕಲ್ಯಾಣವನ್ನು ಸಾಧಿಸಬಹುದು. ಆದರೆ, ಈ ಕಾರ್ಯವನ್ನು ಮಾಡುವುದರಲ್ಲಿ ಇವರು ವಿಫಲವಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಕ್ಕಳುಗಳನ್ನು ಪೋಷಣೆ ಮಾಡುವುದರಲ್ಲೂ ನಾವು ಸಮಾನತೆಯನ್ನು ಕಾಣುತ್ತಿಲ್ಲ. ಶ್ರೀಮಂತರ ಮಕ್ಕಳು ಶ್ರೀಮಂತರಾಗಿಯೇ ಬೆಳೆಯುತ್ತಿದ್ದಾರೆ. ಬಡವರ ಮಕ್ಕಳು ಬಡವರಾಗಿಯೇ ಬೆಳೆಯುತ್ತಿದ್ದಾರೆ. ಈ ವಿಷಯದಲ್ಲಿ ಸಮಾನತೆಯನ್ನು ತರುವ ಬಗ್ಗೆ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಬಯಸುತ್ತೇನೆ. ಇನ್ನು ಟ್ಯಾಕ್ಸ್ ಬಗ್ಗೆ ಬಂದರೆ, ನನಗೆ ಒಂದು ಅನುಮಾನ ಬರುತ್ತಿದೆ. ಅನ್ಯುಯಲ್ ಪ್ಲಾನ್ ಔಟ್‌ಲೇ ಮೂರು ಫಿಗರ್ಸ್‌ಗಳನ್ನು ಕೊಟ್ಟಿದ್ದಾರೆ. ಒಂದು ಫಿಗರ್‌ನಲ್ಲಿ ೮೭೦ ಕೋಟಿ ಅನ್ಯುಯಲ್ ಪ್ಲಾನ್ ಔಟ್‌ಲೇ ತೋರಿಸಿದ್ದಾರೆ ಒಂದು ಕಡೆ ೯೭೦ ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ.

ಇನ್ನೊಂದು ಕಡೆ ಹೇಳುತ್ತಾರೆ it is 1173.56 crores. ಇದರಲ್ಲಿ ಇವರ ಅನ್ಯುವಲ್ ಔಟ್‌ಲೇ ಎಷ್ಟು ಎಂದು ಸಿಗುತ್ತಾ ಇಲ್ಲ. ಮತ್ತು ಈ ಕೊರತೆ ಏನಿದೆ ಅದು ೮೭೦ ಕೋಟಿ ರೂಪಾಯಿಗಳಿಗೆ ಅನ್ವಯಿಸುತ್ತದೆಯೋ, ಅಥವಾ ೯೭೦ ಕೋಟಿ ರೂಪಾಯಿಗಳಿಗೆ ಅನ್ವಯಿಸುತ್ತದೋ ಎಂಬ, ಸಂಶಯ ಬರುತ್ತದೆ ಅಥವಾ ೧೧೭೩ಕ್ಕೆ ಅನ್ವಯಿಸುತ್ತದೊ ಎಂಬ ಸಂಶಯ ಕಾಣಿಸುತ್ತಾ ಇದೆ. ಇದರಿಂದ ಏನು ಅರ್ಥವಾಗುತ್ತಿದೆ, ಎಂದರೆ there is no definite commitment in the Budget. There is no seriousness ಯಾವ ಒಂದು ಉದ್ದೇಶವನ್ನು ಕೂಡ ಇದರಲ್ಲಿ ಇಟ್ಟುಕೊಂಡಿಲ್ಲ. ಮತ್ತು ಈ ವಿಷಯದ ಬಗ್ಗೆ ಇವರಿಗೆ ಸ್ವಲ್ಪವೂ ಗಂಭೀರತೆಯು ಇಲ್ಲ ಎಂದು ಅರ್ಥವಾಗುತ್ತಿದೆ. ಯಾವ ರೀತಿಯಾಗಿ ವ್ಯವಹಾರ ನಡೆದುಕೊಂಡು ಹೋಗುತ್ತಿದೆ, ಯಾವ ರೀತಿಯಲ್ಲಿ ಅಭಿವೃದ್ಧಿ ನಡೆದುಕೊಂಡು ಹೋಗುತ್ತಿದೆ, ಅದು ಅದರಷ್ಟಕ್ಕೆ ಆಗುತ್ತಾ ಇರುವುದಿದ್ದರೆ ಹಾಗೆಯೇ ಆಗುತ್ತಿರಲಿ ಎಂದು ಭಾವಿಸಿಕೊಂಡಿದ್ದಾರೆ. ಇವರು ಅದರ ಬಗ್ಗೆ ಸ್ವಲ್ಪವೂ ಶ್ರಮವಹಿಸುತ್ತಿಲ್ಲ. ಕಷ್ಟಪಡುತ್ತಿಲ್ಲ, ಅದರಷ್ಟಕ್ಕೆ ಬಿಟ್ಟುಬಿಟ್ಟಿದ್ದಾರೆ ಮತ್ತು ಇವರಿಗೆ ಅದರ ಬಗ್ಗೆ ಅಭ್ಯಸಿಸುವುದು ಬೇಡವಾಗಿದೆ ಎಂದು ಹೇಳಬೇಕಾಗಿದೆ.

ಇನ್ನೊಂದು ಕಡೆ ಹೇಳುತ್ತಾ ಇದ್ದಾರೆ "to collect more from those who have capacity to pay, to ensure social justice" ಎಂದು ಹೇಳುತ್ತಿದ್ದಾರೆ. ಟ್ಯಾಕ್ಸನ್ನು ಕಲೆಕ್ಟ್ ಮಾಡುವುದರಲ್ಲಿ Social Justice ತರುತ್ತೇವೆ ಎಂದು ಹೇಳುತ್ತಿದ್ದಾರೆ. ಇಂತಹ ವಿಷಯಗಳ ಬಗ್ಗೆ ಕೂಲಂಕುಷವಾಗಿ ಯೋಚನೆ ಮಾಡಬೇಕಾಗುತ್ತದೆ. Social Justice ಕ್ಕೂ, ಟ್ಯಾಕ್ಸ್ ಕಲೆಕ್ಟ್ ಮಾಡುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. Social Justice ಒಂದು ಬೇರೆ platform.

ಪ್ಲಾನಿಂಗ್‌ನಲ್ಲಿ ಯಾವಾಗಲೂ there must be a planning between the industry and agriculture, planning beteween heavy industries and small-scale industries. ಪ್ರತಿಯೊಂದಕ್ಕೂ ಕೂಡ ಹಣವನ್ನು provide ಮಾಡತಕ್ಕಂಥದ್ದು ನಿಜವಾದಂತಹ ಪ್ಲಾನಿಂಗ್. Further, it is stated in the Budget, "My taxation policy has the following objects : 1) To contribute to the substantial

economic development in all sphere of activities : 2) To collect more from those who have capacity to pay, to ensure Social Justice.'' So, to ensure social Justice, they have to collect more taxes from those who have got abundant money. ಈ ರೀತಿಯಾದಂತಹ ಇವರ ಒಂದು ಪಾಲಿಸಿ ಇದೆ. ಇದು ನಿಜವಾಗಿಯೂ ಕೂಡ ಆಯುವ್ಯಯಕ್ಕೆ ತದ್ವಿರುದ್ಧವಾಗಿದೆ. ಈ ಉದ್ದೇಶವನ್ನು ಇಟ್ಟುಕೊಂಡು ಹೋದರೆ. ಈ ಬಜೆಟ್ ಆಯುವ್ಯಯವನ್ನು ಏನು ಇವರು ತಂದಿದ್ದಾರೆ ಈ ವಿಚಾರದಲ್ಲಿ ಸರಕಾರ ವಿಫಲವಾಗಿದೆ ಎಂದು ಗೊತ್ತಾಗುತ್ತದೆ. ಮತ್ತು ಈಗಾಗಲೇ ನನ್ನ ಅನೇಕ ಸ್ನೇಹಿತರು ಕೂಡ ಬಹಳ ವಿಚಾರಗಳನ್ನು ಹೇಳಿದ್ದಾರೆ. ಅದು ಏನೆಂದರೆ, ಸಾಮಾನ್ಯ ಜನಬಳಕೆಯ ಪೇಯಗಳಾದ ಕಾಫಿ ಮತ್ತು ಟೀಗಳ ಮೇಲೆ ಟ್ಯಾಕ್ಸ್‌ನ್ನು ಹಾಕಿರುವುದು. ನಿಜವಾಗಿಯೂ ಈ ಟ್ಯಾಕ್ಸ್ ಹಾಕಿರುವುದು ಸರಿಯಲ್ಲ. ಇದು ಜನಸಾಮಾನ್ಯರು ಆಗಾಗ ಬಳಸುವ ಒಂದು ಪಾನೀಯ. ಶ್ರೀಮಂತರು ಬಳಸುವಂತಹ ಲಿಕರ್ಸ್ ಇತ್ಯಾದಿಗಳಿಗೆ ಬೇಕಾದಷ್ಟು ಟ್ಯಾಕ್ಸ್‌ನ್ನು ತಾವುಗಳು ಹಾಕಿ. ಅದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಬಡವರ, ಅತೀ ಹೆಚ್ಚು ಜನರು ಉಪಯೋಗಿಸುವ ಕಾಫಿ—ಟೀ ಗಳಿಗೆ ಮಾತ್ರ ಟ್ಯಾಕ್ಸ್ ಹೆಚ್ಚು ಮಾಡಬೇಕಾಗಿರಲಿಲ್ಲ.

ಅಂತೆಯೇ, ಲಕ್ಸುರಿ ಹೋಟೆಲ್ಸ್‌ಗಳ ಮೇಲೆ ಟ್ಯಾಕ್ಸ್‌ನ್ನು ಕಡಿಮೆ ಮಾಡಿದ್ದಾರೆ, ಅದಕ್ಕೆ ಕಾರಣವನ್ನು ಕೂಡ ಕೊಟ್ಟಿದ್ದಾರೆ. ಅದು ಏನೆಂದರೆ, ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಎಂದಿದ್ದಾರೆ. ಇದನ್ನು ನೋಡಿದರೆ, ಲಕ್ಸುರಿ ಹೋಟೆಲ್ಸ್‌ಗಳಿಗೆ ಟ್ಯಾಕ್ಸ್, ಕಡಿಮೆ ಮಾಡಿ, ಬಡವರ ಪೇಯಗಳಾದ ಕಾಫಿ, ಟೀ ಗೆ ಟ್ಯಾಕ್ಸ್‌ನ್ನು ಹೆಚ್ಚಿಗೆ ಮಾಡಿದ್ದನ್ನು ಯಾರೂ ಮೆಚ್ಚುವಂಥಾದ್ದಲ್ಲ. ಹೀಗೆ ಮಾಡುವುದರ ಮೂಲಕ ಬಂಡವಾಳ ಶಾಹಿಗಳು ಏನಿದ್ದಾರೆ, ಅವರ ಅನುಕೂಲತೆಗೋಸ್ಕರವಾಗಿ ಈ ಕೆಲಸವನ್ನು ಸರಕಾರದವರು ಮಾಡಿದ್ದಾರೆಯೇ ಹೊರತು ನಿಜವಾಗಿಯೂ ಕೂಡ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬೇಕೆಂದು ಟ್ಯಾಕ್ಸ್ ಕಡಿಮೆ ಮಾಡಿಲ್ಲ ಎಂದು ನಾನು ಹೇಳಬೇಕಾಗುತ್ತದೆ.

ಇನ್ನು ಕಮರ್ಶಿಯಲ್ ಟ್ಯಾಕ್ಸ್ ಬಗ್ಗೆ ಏನು ಹೇಳಿದ್ದಾರೆ, ಇದು ನನಗೆ ಅರ್ಥವಾಗುತ್ತಾ ಇಲ್ಲ there are no additional resources mobilisation measures ಎಂದು ಹೇಳಿದ್ದಾರೆ. ಇಲ್ಲಿ ಟ್ಯಾಕ್ಸ್‌ನ್ನು ಕೂಡ ಹಾಕಿದ್ದಾರೆ. ಕಮರ್ಶಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನವರು ಕೂಡ ತೆರಿಗೆಯನ್ನು ಹಾಕಿದ್ದಾರೆ ಇದಕ್ಕೂ, ಅದಕ್ಕೂ, ಯಾವ ಸಂಬಂಧವೂ ಸಿಗುತ್ತಾ ಇಲ್ಲ. ಇದರ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ವಿವರಣೆಯನ್ನು ಕೊಡುತ್ತಾರೆ ಎಂದು ನಾನು ಭಾವಿಸುತ್ತೇನೆ.

ನಮ್ಮ ವ್ಯವಸ್ಥೆಯಲ್ಲಿ ಹಿಂದೆ ಟ್ರೆಡಿಷನಲ್ ಮೆಥೆಡ್ಸ್‌ನಲ್ಲಿ ಗೊಬ್ಬರ ತಯಾರು ಮಾಡುತ್ತಿದ್ದರು. ಈಗ ಅದು ಕಡಿಮೆಯಾಗಿದೆ. ಸಂಪೂರ್ಣವಾಗಿ ಕೆಮಿಕಲ್ ಫರ್ಟಿಲೈಸರ್ಸ್ ಮೇಲೆ ನಾವು ಡಿಪೆಂಡಾಗಿದ್ದೇವೆ. ಇವನ್ನು ಹಾಕದೆ ಬೆಳೆ ಬೆಳೆಯುವುದಿಲ್ಲ. ಇದರ ಉದ್ದೇಶ ಏನೆಂದರೆ ನಮ್ಮ ದೇಶದಲ್ಲಿ ಉತ್ಪಾದನೆಯನ್ನು ಜಾಸ್ತಿ ಮಾಡಬೇಕೆಂಬುದು. ಹಾಗೆಂದು ಸ್ಲೋಗನ್ ಅನ್ನೂ ಹೇಳುತ್ತೇವೆ. ಇನ್ನೊಂದು ಕಡೆ ನಿಷ್ಕರುಣೆಯಿಂದ ಟ್ಯಾಕ್ಸನ್ನೂ ಹಾಕುತ್ತೇವೆ. ಉತ್ಪಾದನೆ ಹೆಚ್ಚಿಸಬೇಕೆನ್ನುವ ಸ್ಲೋಗನ್ ಹಿಂದೆಯೇ ಉತ್ಪಾದನೆ ಕಡಿಮೆ ಮಾಡಿಸುವ ವಾದ ಇದರಿಂದ ಕಾಣುತ್ತಿದೆ. ಅಗ್ರಿಕಲ್ಚರಲ್ ಪ್ರೊಡಕ್ಷನ್ ಜಾಸ್ತಿಯಾಗಿದೆ ಎಂದು ಒಂದು ಕಡೆ ಹೇಳಿದರೆ ಇನ್ನೊಂದು ಕಡೆ ಕಮರ್ಷಿಯಲ್ ಬೆಳೆಗಳಾದ ಕಬ್ಬು ಬೆಳೆ ಕಡಿಮೆಯಾಗಿದೆ ಎಂದು ಹೇಳುತ್ತಾರೆ. ಏಕಿಷ್ಟು ಗೊಂದಲ, ಇದನ್ನೆಲ್ಲಾ ಸರಿಯಾಗಿ ನಿರ್ವಹಿಸಿಲ್ಲ ಎಂಬುದು ಗೊತ್ತಾಗುತ್ತದೆ. ಇವರಿಗೆ ಡೆಫಿನಿಟ್ ಕಮಿಟ್‌ಮೆಂಟ್ ಇಲ್ಲ. ಯಾವ ನಿಯಮಾವಳಿ ಕೂಡ ಇಲ್ಲದೆ ಹಿಂದಿನ ಬಜೆಟ್‌ನ್ನು ಕಾಪಿ ಮಾಡಿಕೊಂಡು ಈ ವರ್ಷದ ಇಸವಿ ಹಾಕಿ ಕೊಟ್ಟಿದ್ದಾರೆಯೇ ಹೊರತು ಜನತೆಯ ಎಲ್ಲಾ ವರ್ಗಗಳ ಏಳಿಗೆಯ ಬಗ್ಗೆ ಇವರಿಗೆ ಕಾಳಜಿ ಇಲ್ಲ ಎಂದು ನಮಗೆ ಅರ್ಥವಾಗುತ್ತದೆ.

ಶಾಶ್ವತವಾದ ಪರಿಹಾರ ಕೊಡುವುದರಲ್ಲಿ ಬಹಳ ವಿಫಲವಾಗಿದೆ ನಮ್ಮ ಸರ್ಕಾರ. ಈ ಬಜೆಟನ್ನೂ ಒಳಗೊಂಡಂತೇ ನಾನು ಹೇಳುವುದಾದರೆ ರೈತರಿಗೂ ಶಾಶ್ವತ ಪರಿಹಾರದ ಬಗ್ಗೆ ನಾವು ಯೋಚಿಸಬೇಕು, ಟೆಂಪರರಿ ನೀಡ್ಸ್ ಕೊಡುವುದಷ್ಟೇ ಸಾಲದು, ಏಕೆಂದರೆ ಇವತ್ತು ಕೊಡುತ್ತೇವೆ, ನಾಳೆ ಅವರು ಅನುಭವಿಸಿ ಖಾಲಿ ಮಾಡುತ್ತಾರೆ. ಆದರೆ ಅವರು ಇನ್ನೊಬ್ಬರ ಮೇಲೆ ನೆಚ್ಚದಂತೆ ಬದುಕುವಂತಾಗ ಬೇಕಾದರೆ ಅವರಿಗೆ ಶಾಶ್ವತ ಪರಿಹಾರ ಕೊಡಬೇಕು. ಪ್ರತಿ ಸಾರಿಯೂ ಫ್ಲಡ್ ಬಂದಾಗ ಬರಗಾಲ ಬಂದಾಗ

ಅವರಿಗಾಗಿ ಹಲವಾರು ಕೋಟಿಗಳನ್ನು ಖರ್ಚು ಮಾಡುತ್ತೇವೆ, ಬರಗಾಲಕ್ಕಾಗಿಯೇ ನೂರಾರು ಕೋಟಿಗಳನ್ನು ಖರ್ಚು ಮಾಡಿದ್ದೇವೆ. ಆದ್ದರಿಂದ ಹಾಲಿಡೇ ಪಿರೀಡ್ ಎಂದು ಮಾಡಿ ಡೆವಲಪ್‌ಮೆಂಟ್ ವರ್ಕ್ಸ್‌ನ್ನು ಮಾತ್ರ ಮಾಡಿ. ಬರಗಾಲ ನಿವಾರಣೆಗೆ ನಾವೆಲ್ಲ ತ್ಯಾಗ ಮಾಡೋಣ. ಎಲ್ಲಾ ಹಣ ಅದಕ್ಕಾಗಿ ಶೇಖರಿಸೋಣ. ಇದರ ಬಗ್ಗೆ ಸರ್ಕಾರ ಕೂಡ ಕೇವಲ ಅಧಿಕಾರದಲ್ಲುಳಿಯಬೇಕು ಎಂಬುದನ್ನು ಬಿಟ್ಟು ಅವರ ಜೊತೆ ವಿರೋಧ ಪಕ್ಷದವರಾದ ನಾವೂ ತ್ಯಾಗಕ್ಕೆ ಸಿದ್ಧರಾಗಬೇಕು. ಇದಕ್ಕೆ ಒಂದು ಶಾಶ್ವತ ಮಾರ್ಗವನ್ನು ಕಂಡುಹಿಡಿಯಲು ಇದು ಅವಶ್ಯಕ. ಆಗ ಮಾತ್ರ ದೇಶ ಉದ್ಧಾರವಾಗುತ್ತದೆಯೇ ಹೊರತು ತೇಪೆ ಕೆಲಸ ಮಾಡುವುದರಿಂದ ಏನೂ ಸಾಧನೆಯಾಗುವುದಿಲ್ಲ.

ಆದ್ದರಿಂದ ಈ ಆಯವ್ಯಯದಲ್ಲಿ ಯಾವುದೂ ಶಾಶ್ವತವಾದದ್ದು ಇಲ್ಲ. ಹಿಂದಿನ ಬಜೆಟ್‌ನಲ್ಲಿ ನಮ್ಮ ಮುಖ್ಯಮಂತ್ರಿಗಳು ಅಪ್ಪರ್ ಭದ್ರಾ ಬಗ್ಗೆ ಹೇಳುತ್ತಾ ಅದನ್ನು ಮಾಡಿಯೇ ಮಾಡುತ್ತೇವೆಂದು ಹೇಳಿದ್ದರು ಆದರೆ ಈ ಸಲ ನಾಮಿನಲ್ಲಾಗಿ ೭ನೇ ಪಂಚವಾರ್ಷಿಕ ಯೋಜನೆಗೆ ಇದು ಸೇರಿದೆ ಎಂದು ಹೇಳಿದರೇ ವಿನಹ ಯಾವ ಬಜೆಟ್ ಅಲಾಟ್‌ಮೆಂಟನ್ನೂ ಇಟ್ಟಿಲ್ಲ. ಈ ಬಜೆಟ್‌ನಲ್ಲಿ ಒಂದು ಕಡೆ ೬೦೦ ಕೋಟಿ ಎಸ್ಟಿಮೇಟ್, ೪೦೦ ಕೋಟಿ ಎಸ್ಟಿಮೇಟ್ ತಯಾರು ಮಾಡಿದ್ದಾರೆ. ಮತ್ತೊಂದು ಕಡೆ ೧೨೦೦ ಕೋಟಿ ಬಜೆಟ್ ತಯಾರು ಮಾಡಿದ್ದಾರೆ ಅಷ್ಟೇ. ಆದರೆ ಈ ಅಮೌಂಟನ್ನು ಯಾವ ಯಾವುದಕ್ಕೆ ಕೊಡುತ್ತಾರೆ ಎಂದು ಖಚಿತವಾಗಿ ಹೇಳಿಲ್ಲ.

ಈ ಎಲ್ಲಾ ಯೋಜನೆಗಳಿಗೆ ಖಚಿತವಾದ ಒಂದು ನಿರ್ಧಾರವನ್ನು ಮಾಡಿಲ್ಲ ಮತ್ತು ಏನು ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡಿಲ್ಲವೆಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಸಹಾಯಕ್ಕೆ ಬರುವುದಕ್ಕೆ ಹಿಂದೇಟು ಹಾಕುತ್ತಿದೆ. ನೀರಾವರಿ ಯೋಜನೆಗಳಿಗೆ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯುವುದರಲ್ಲಿ ಇವರು ವಿಫಲರಾಗಿದ್ದಾರೆ ಅದರ ಬಗ್ಗೆ ಇವರಿಗೆ ಕಾಳಜಿ ಇಲ್ಲ ತಾತ್ಕಾಲಿಕವಾದಂತಹ ಕೆಲವು ಯೋಜನೆಗಳನ್ನು ಸೃಷ್ಟಿಸಿಕೊಂಡು ಕೇವಲ ಮತಗಳನ್ನು ಗಳಿಸಿಕೊಂಡು ಅಧಿಕಾರದಲ್ಲಿ ಉಳಿಯುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ ಎಂಬ ಅಭಿಪ್ರಾಯ ಇದರಲ್ಲಿ ವ್ಯಕ್ತವಾಗುತ್ತದೆ. ಡಿಪಾರ್ಟ್‌ಮೆಂಟಲ್ ಬೆನಿಫಿಟ್ಸ್ ಅನ್ನು ಇದರಲ್ಲಿ ಮಾಡಿದ್ದಾರೆ. ಹಿಂದೆ ಒಂದು ಮ್ಯಾನಿಫೆಸ್ಟೋ ಮಾಡಿದ್ದರು ಅದನ್ನು ನೋಡಿದರೆ ಎಲೆಕ್ಷನ್ ಮ್ಯಾನಿಫೆಸ್ಟೋ ಅನ್ನು ನೋಡಿದ ಹಾಗೇ ಇದೆ. ಅವರ ಮ್ಯಾನಿಫೆಸ್ಟೋಗಳಲ್ಲಿ ಯಾವುದನ್ನೂ ಕೂಡ ಪೂರೈಸಿಲ್ಲ. ಇನ್ನೊಂದು ಮ್ಯಾನಿಫೆಸ್ಟೋ ಅನ್ನು ಬಡ್ಜೆಟ್ಟಿನಲ್ಲಿ ತಂದಿದ್ದಾರೆ. ಹೊಟ್ಟೆ ಹಸಿದಿದ್ದರೂ ಕೂಡ ಜನರು ನಾಲಿಗೆ ಚಪ್ಪರಿಸಿಕೊಂಡು ಹಾಗೆ ಏನೋ ದೇಶದಲ್ಲಿ ಆಗುತ್ತಿದೆ ಎನ್ನುವ ಭಾವನೆಯನ್ನು ಅವರಲ್ಲಿ ಹುಟ್ಟಿಸುವಂತಹ ರೀತಿಯಲ್ಲಿ ಈ ಮ್ಯಾನಿಫೆಸ್ಟೋ ಇದೆ ಇದರಿಂದಾಗಿ ಯಾವುದೇ ಒಂದು ಅನುಕೂಲತೆಯಾಗಲೀ, ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿದು ಜನರನ್ನು ಒಳ್ಳೆಯ ಮಾರ್ಗದಲ್ಲಿ ತೆಗೆದುಕೊಂಡು ಹೋಗತಕ್ಕಂಥಾದ್ದು ಸಾಧ್ಯವಾಗುವುದಿಲ್ಲ? ಸಾಮಾಜಿಕವಾಗಿ ಆರ್ಥಿಕವಾಗಿ ಎಲ್ಲಾ ವರ್ಗದ ಜನರನ್ನು ಒಂದು ಉತ್ತಮ ಮಟ್ಟಕ್ಕೆ ತರತಕ್ಕಂಥಾ ಪ್ರಯತ್ನ ಈ ಆಯವ್ಯಯದಲ್ಲಿ ಇಲ್ಲವೆಂದು ತಿಳಿಸುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ೧೯೮೭–೮೮ನೇ ಸಾಲಿನ ಆಯವ್ಯಯ ಪತ್ರದ ಬಗ್ಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ ಅದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ಮುಂದಿಟ್ಟಿರತಕ್ಕಂತಹ ಆಯವ್ಯಯ ಪತ್ರದಲ್ಲಿ ಕೊರತೆಯನ್ನು ತೋರಿಸಿದ್ದಾರೆ, ಆದುದರಿಂದಾಗಿ ಅದನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ಪರಿಷತ್, ಮಂಡಲ ಪಂಚಾಯತಿ ಚುನಾವಣೆಯ ಬಗ್ಗೆ ಮಾತನಾಡಿದ್ದಾರೆ. ೩೧ನೇ ತಾರೀಖು ೬೦ ೦೦೦ ಜನರು ಗ್ರಾಮೀಣ ಪ್ರದೇಶದಿಂದ ನಗರಕ್ಕೆ ಬಂದಿದ್ದರು ಎಂದು ಬಹಳ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಈ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತೇನೆ ಏಕೆಂದರೆ ರಾಜ್ಯದ ಅನೇಕ ಗ್ರಾಮಗಳಿಂದ ಚುನಾಯಿತ ಪ್ರತಿನಿಧಿಗಳು ನಮ್ಮ ರಾಜ್ಯದ ರಾಜಧಾನಿಗೆ ಬಂದು ಹೋಗಿದ್ದಾರೆ ಎಂದು. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತಿಕೆಯನ್ನು ತೋರಿಸಿದ್ದಾರೆ. ಇದರಲ್ಲಿ ಎರಡೂ ಕೆಲಸಗಳು ಆಗಿವೆ. ಒಂದು ಆ ಜನರನ್ನು ತೃಪ್ತಿಪಡಿಸುವುದು ಇನ್ನೊಂದು ತಮ್ಮ ಪಕ್ಷದ ಪ್ರಚಾರ ಮಾಡುವುದು, ನಿಜವಾಗಲೂ ಇದು ಒಪ್ಪತಕ್ಕಂಥಾದ್ದು, ಅಂತಹ ಕೆಲಸವನ್ನು ಇವರು ಬಹಳ ಸುಲಭವಾಗಿ ಮಾಡಿದ್ದಾರೆ

ಇದರಿಂದಾಗಿ ಅವರಿಗೆ ಎರಡು ಕೋಟಿ ರೂಪಾಯಿಗಳ ಖರ್ಚಾಗಿದೆ ಮತ್ತು ಅವರ ಪಕ್ಷದ ಪ್ರಚಾರವೂ ಕೂಡ ಇಡೀ ರಾಜ್ಯದ ತುಂಬಾ ಆಗಿದೆ.

ಶ್ರೀ ಕೆ. ಮಲ್ಲಪ್ಪ.—ಕಳೆದ ನಾಲ್ಕು ವರ್ಷದಿಂದ ಸರ್ಕಾರದ ಬಗ್ಗೆ ಪ್ರಚಾರವಾಗುತ್ತಿದೆ, ಹೊಸದಾಗಿ ಪ್ರಚಾರವಾಗುವ ಅಗತ್ಯವಿಲ್ಲ.

ಶ್ರೀ ಪಂಪಾಪತಿ.—ಅಧ್ಯಕ್ಷರೂ ತಮಗೂ ಅವಕಾಶ ಕೊಡುತ್ತಾರೆ ಆಗ ಮಾತನಾಡಿ. ಅಧ್ಯಕ್ಷರು ನನಗೆ ಸ್ವಲ್ಪ ಅವಕಾಶ ಕೊಟ್ಟಿರುವುದರಿಂದ ಹೆಚ್ಚಿಗೆ ಹೊತ್ತು ಮಾತನಾಡುವುದಕ್ಕೆ ಬರುವುದಿಲ್ಲ. ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ನಿಜ ಎಂದು ಹೇಳಿದ್ದೇನೆ. ಜೊತೆಯಲ್ಲಿ ಪಕ್ಷದ ಪ್ರಚಾರದ ಕೆಲಸವನ್ನು ಮಾಡಿದ್ದಾರೆ ಎಂದೂ ಹೇಳಿದ್ದೇನೆ ಎರಡನ್ನೂ ಹೇಳಿದ್ದೇನೆ. ಒಂದೇ ಏಟಿಗೆ ಎರಡು ಹಕ್ಕಿಗಳನ್ನು ಹೊಡೆದರು ಎಂದು ಹೇಳುತ್ತಾರಲ್ಲಾ ಹಾಗೆ. ಈ ಒಂದು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯಿಂದ ನಮ್ಮ ಗ್ರಾಮಾಂತರ ಪ್ರದೇಶದ ಜನರೆಲ್ಲಾ ಇಲ್ಲಿಗೆ ಬಂದು ಹೋಗಿದ್ದಾರೆ. ಇನ್ನು ಸಾಮಾನ್ಯ ಜನರಿಗೆ ಅಧಿಕಾರವನ್ನು ವಹಿಸಿಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಏನು ಹೇಳಿದ್ದಾರೆ, ಅದು ನಿಜವಾಗಲೂ ಬಹಳ ಹೆಮ್ಮೆಯ ವಿಷಯ. ಮತ್ತು ಇದರಿಂದ ಅವರಿಗೆ ತೃಪ್ತಿ ಇದೆ, ಅವರಿಗೂ ಕೂಡಾ ಹೆಮ್ಮೆ ಇದೆ. ಆದರೆ ಅದು ಎಷ್ಟರಮಟ್ಟಿಗೆ ನಡೆಯುತ್ತದೆ ಎನ್ನುವುದನ್ನು ನಾವು ಇವತ್ತು ನೋಡಬೇಕಾಗಿದೆ. ಅದಕ್ಕಾಗಿ ೯೫೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ೯೫೦ ಕೋಟಿ ರೂಪಾಯಿಗಳು ಅವರಿಗೆ ಸಿಕ್ಕಿದಾಗ ಮಾತ್ರ ಆ ಜನ ನಿಜವಾಗಲೂ ತೃಪ್ತಿಪಡುತ್ತಾರೆ, ಇಲ್ಲದಿದ್ದರೆ ನಂತರ ಈ ಒಂದು ಚುನಾವಣೆಯ ಬಗ್ಗೆ ಯೋಚನೆ ಮಾಡುತ್ತಾರೆ.

ಅಧ್ಯಕ್ಷರು.—ನೀವು ಅವರ ಕಡೆ ನೋಡಬೇಡಿ.

ಶ್ರೀ ಪಂಪಾಪತಿ.—ಚುನಾವಣೆಗಳು ಈ ರೀತಿ ನಡೆದುವು, ಈ ಚುನಾವಣೆಗಳಲ್ಲಿ ನಡೆದಂಥ ಅನೇಕ ವಿಷಯಗಳನ್ನು ಈಗಾಗಲೇ ಮಾತನಾಡಿದ್ದಾರೆ. ಹೆಂಡ ಮತ್ತು ಹಣ ಇವೆಲ್ಲವುಗಳ ಬಗ್ಗೆಯೂ ಮಾತನಾಡಿದ್ದಾರೆ. ಇದು ಎರಡು ಕಡೆಯಲ್ಲೂ ಆಗಿದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ ಮಾನ್ಯ ಮಲ್ಲಪ್ಪನವರಿಗೆ ಗೊತ್ತಿರಬಹುದು. ಸಾಮಾನ್ಯವಾಗಿ ಅವರ ಕ್ಷೇತ್ರದಲ್ಲಿ ಒಂದು ಜಿಲ್ಲಾ ಪರಿಷತ್ತಿಗಾಗಿ ೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವರು ಇದನ್ನು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ನೀವು ಒಪ್ಪುವುದಿಲ್ಲ ಎಂದು ನನಗೆ ಗೊತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ನಿಮಗಿಬ್ಬರಿಗೇ ಗೊತ್ತಿರಬಹುದು.

ಶ್ರೀ ಪಂಪಾಪತಿ.—ಈ ಚುನಾವಣೆಯಲ್ಲಿ ಸಾಮಾನ್ಯ ಜನರಿಗಿಂತಲೂ ಹಣವಂತರು, ಬಲಿಷ್ಟರು ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿಸಿ ಬಂದಿದ್ದಾರೆ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ನಮ್ಮ ಮುಖ್ಯಮಂತ್ರಿಗಳ ಅಭಿಪ್ರಾಯ ಏನಿತ್ತು ಸಾಮಾನ್ಯ ಜನರ ಕೈಯಲ್ಲಿ ಅಧಿಕಾರವನ್ನು ಕೊಟ್ಟು ಅವರು ಈ ದೇಶದ, ಈ ರಾಜ್ಯದ ಆಡಳಿತವನ್ನು ನಡೆಸತಕ್ಕಂಥ ವ್ಯವಸ್ಥೆಯನ್ನು ಉಂಟು ಮಾಡಬೇಕು ಎಂದು ಹೇಳಿ ಯೋಚನೆ ಏನು ಮಾಡಿದ್ದರೋ ಅದು ಈಗ ತಿರುವುಮುರುಗಾಗಿದೆ ಎಂದು ನನ್ನ ಅಭಿಪ್ರಾಯ. ಹಣವಂತರು ಮತ್ತು ಬಲಾಢ್ಯರು ಈ ಒಂದು ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿಸಿ ಬಂದಿದ್ದಾರೆ, ಮತ್ತು ಆಡಳಿತದ ವ್ಯವಸ್ಥೆ ಅವರ ಕೈಯಲ್ಲಿ ಹೋಗಿ ಪುನಃ ಮೊದಲು ಯಾವ ಸ್ಥಿತಿಯಲ್ಲಿ ಇದ್ದಿವೋ ಆ ವ್ಯವಸ್ಥೆಯನ್ನು ಬದಲಿಸುವುದಕ್ಕೆ ದಿವಂಗತ ದೇವರಾಜ ಅರಸ್‌ರವರು ಎಷ್ಟು ಪ್ರಯತ್ನಪಟ್ಟರೋ ಆ ಪ್ರಯತ್ನ ಹಿಂದಕ್ಕೇ ಹೋಯಿತಲ್ಲಾ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಿನಿಂದಲೇ ವ್ಯವಸ್ಥಿತವಾಗಿ ಎಚ್ಚರಿಕೆಯಿಂದ ಈ ಆಡಳಿತದ ಒಂದು ವ್ಯವಸ್ಥೆಯನ್ನು ಸರಿಪಡಿಸುವುದಕೆ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನೂ ಕೂಡಾ ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

೫-೦೦ ಪಿ. ಎಂ.

ಇನ್ನು ಈ ಬಡ್ಜೆಟ್ ಭಾಷಣದಲ್ಲಿ ಔದ್ಯೋಗಿಕ ಬೆಳವಣಿಗೆಯ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಎರಡು ರೀತಿಯಲ್ಲಿ ಹೇಳಿದ್ದಾರೆ. ಈ ಔದ್ಯೋಗಿಕ ಬೆಳವಣಿಗೆ ಯಾವರೀತಿ ಬೆಳವಣಿಗೆಯಾಗುತ್ತದೆಯೋ

ಎನ್ನುವುದು ನನಗೆ ಅರ್ಥವಾಗುತ್ತಾ ಇಲ್ಲ. ಏತಕ್ಕೆಂದರೆ ಈ ರಾಜ್ಯದಲ್ಲಿ ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಉದಾಹರಣೆಗೆ ಮೈಸೂರಿನ ಕೆ. ಆರ್. ಎಸ್. ಮಿಲ್, ಬೆಂಗಳೂರಿನ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ. ದಾವಣಗೆರೆಯ ಶಂಕರ್ ಟೆಕ್ಸ್‌ಟೈಲ್ ಮಿಲ್ ಹೀಗೆ ಇನ್ನೂ ಅನೇಕ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಅಲ್ಲದೆ ಬರೋಕಾ ಫ್ಯಾಕ್ಟರಿ, ಹುಬ್ಬಳ್ಳಿ, ಅದು ಈಗಾಗಲೇ ಲಾಕ್‌ಔಟ್ ಆಗಿದೆ. ಶಂಕರ್ ಟೆಕ್ಸ್‌ಟೈಲ್ ಮುಚ್ಚಿ ೩ ವರ್ಷವಾಯಿತು. ಮೈಸೂರು ಮಿಷನರಿಯೂ ಕೂಡ ಮುಚ್ಚಿ ಹೋಗಿದೆ. ಹಾಗೆಯೆ ಹಿರಿಯೂರು ಸಕ್ಕರೆ ಕಾರ್ಖಾನೆ, ಕೊಳ್ಳೇಗಾಲದ ಸಕ್ಕರೆ ಕಾರ್ಖಾನೆ, ಗೌರಿ ಬಿದನೂರು ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿದೆ. ಇಂತಹ ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳು ನನಗೆ ಗೊತ್ತಿದ್ದ ಹಾಗೆ ಮುಚ್ಚಿ ಹೋಗಿವೆ. ಅದೇರೀತಿ ಅನೇಕ ಸಣ್ಣ ಸಣ್ಣ ಕೈಗಾರಿಕೆಗಳೂ ಕೂಡ ಮುಚ್ಚಿ ಹೋಗಿವೆ ಎಂದು ನನ್ನ ಭಾವನೆ. ಆದರೆ ಈ ಬಜೆಟ್ ಭಾಷಣ ದಲ್ಲಿ ಈ ಒಂದು ವರ್ಷದಲ್ಲಿ ೧೧ ಸಾವಿರ ಕೈಗಾರಿಕೆಗಳು ನೋಂದಾವಣೆ ಮಾಡಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಇವನ್ನು ನೋಡಿದರೆ ನಿಜವಾಗಲೂ ಒಂದು ಕಡೆ ಬಹಳ ಆಶ್ಚರ್ಯವಾದಂತಾಗುತ್ತದೆ. ಮತ್ತೊಂದು ಕಡೆ ನೋಡಿದರೆ ಬೇಸರವಾಗುತ್ತದೆ. ದೊಡ್ಡ ದೊಡ್ಡ ಕೈಗಾರಿಕೆಗಳು, ಸಾವಿರಾರು ಜನರು ಕೆಲಸ ಮಾಡತಕ್ಕಂಥ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಆದರೆ ೧೯೮೬–೮೭ ರಲ್ಲಿ ೧೧ ಸಾವಿರ ಸಣ್ಣ ಘಟಕಗಳನ್ನು ಸ್ಥಾಪನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಿಜವಾಗಲೂ ಇದರಲ್ಲಿ ಎಷ್ಟು ಸ್ಥಾಪನೆಯಾಗಿದೆ ಎನ್ನುವುದು ಗೊತ್ತಿಲ್ಲ, ನನಗೆ ತಿಳಿದ ಮಟ್ಟಿಗೆ ಅವು ಸ್ಥಾಪನೆಯಾಗಿಲ್ಲ. ಅವರು ಸಾಲ ತೆಗೆದುಕೊಳ್ಳುವುದಕ್ಕೆ ನೋಂದಣಿ ಮಾಡಿಸಿದ್ದಾರೆ ಅಷ್ಟೆ. ಅವೆಲ್ಲಾ ಸ್ಥಾಪನೆಯಾಗಿದೆ ಎಂದು ತಿಳಿದುಕೊಂಡಿದ್ದರೆ ಅದು ಸರಿಯಾದುದಲ್ಲ. ಕರ್ನಾಟಕದಲ್ಲಿ ೧೧ ಸಾವಿರ ಕೈಗಾರಿಕೆಗಳು ಸ್ಥಾಪನೆಯಾಗಿದೆ ಎಂದು ಹೇಳಿದರೆ ಯಾರೂ ನಂಬುವುದಕ್ಕಾಗುವುದಿಲ್ಲ. ಇನ್ನು ಇದರಲ್ಲಿ ಮಳೆಯನ್ನೇ ಅವಲಂಬಿಸಿದ ಕಾರಣದಿಂದಾಗಿ ವಿದ್ಯುಚ್ಛಕ್ತಿ ವಲಯದಲ್ಲಿ ಅಸಮತೋಲನ, ನೀರಾವರಿ ಸಾಮರ್ಥ್ಯ ಮತ್ತು ಬಳಕೆ ಇವೆರಡರ ನಡುವಿನ ಅಂತರ ಕೈಗಾರಿಕೆಗಳಲ್ಲಿ ಕಡಿಮೆ ಉತ್ಪಾದಕತೆ ಮತ್ತು ರೋಗ ಗ್ರಸ್ತ ಸ್ಥಿತಿ ಪ್ರಾದೇಶಿಕ ಮತ್ತು ರಚನಾತ್ಮಕ ಅಸಮತೆ ಉಂಟಾಗಿದೆ ಎಂದು ಹೇಳಿದ್ದಾರೆ. ನಿಜವಾಗಲೂ ಹೇಳಬೇಕಾದರೆ ವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆಯಾಗಿರುವುದರಿಂದ, ವಿದ್ಯುಚ್ಛಕ್ತಿ ಕೊರತೆ ಇರುವುದರಿಂದ ಕೈಗಾರಿಕೆಗಳಲ್ಲಿ ಉತ್ಪಾದನೆ ಕಡಿಮೆಯಾಗಿದೆ. ಅವರು ಹೇಳಿದ ಪ್ರಕಾರ ಕೈಗಾರಿಕಾ ಉತ್ಪಾದನೆ ೧೬೦೫ ಕೋಟಿ ರೂಪಾಯಿಗಳು ಆಗಿದೆ. ಕೈಗಾರಿಕೆಯಲ್ಲಿ ಉತ್ಪಾದನೆ ಕಡಿಮೆಯಾಗುತ್ತಾ ಇರುವುದರಿಂದ ನಿರುದ್ಯೋಗ ಸಮಸ್ಯೆಯೂ ಹೆಚ್ಚಾಗಿ ಬೆಲೆಗಳೂ ಜಾಸ್ತಿಯಾಗುತ್ತ ಇವೆ ಆದುದರಿಂದ ಸರ್ಕಾರದವರು ಇದನ್ನು ತಡೆಗಟ್ಟುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಇದರಲ್ಲಿ ಹೇಳಿಲ್ಲ. ಇದನ್ನೆಲ್ಲಾ ಸರ್ಕಾರದವರು ಗಮನಿಸಬೇಕು. ಬೆಲೆ ಹೆಚ್ಚಳ ಆಗುತ್ತಾ ಇದೆ. ಸಾಮಾನ್ಯ ಜನ ಜೀವನ ನಡೆಸುವುದು ಕಷ್ಟವಾಗಿದೆ ಅದಕ್ಕೆ ಕಾರಣ ವಿದ್ಯುಚ್ಛಕ್ತಿ ಕೊರತೆ ಮತ್ತು ಕೈಗಾರಿಕೆಗಳು ನಿಂತು ಹೋಗಿ ಉತ್ಪಾದನೆ ಕಡಿಮೆ ಯಾಗಿರುವುದು. ಈ ಎಲ್ಲಾ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ವಿದ್ಯುಚ್ಛಕ್ತಿಯನ್ನು ಹೆಚ್ಚು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ? ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು. ನಮಗೆ ಶಕ್ತಿ ಇದ್ದಾಗ ಕೆಲಸ ಮಾಡುವುದಕ್ಕೆ ಸಾಧ್ಯ, ಶಕ್ತಿ ಕಡಿಮೆ ಯಾದರೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ವಿದ್ಯುಚ್ಛಕ್ತಿ ಸಾಕಷ್ಟು ಇಲ್ಲದೇ ಇರುವುದರಿಂದ ಉತ್ಪಾದನೆ ಕಡಿಮೆಯಾಗಿದೆ. ಇದರಿಂದ ಬೆಲೆ ಹೆಚ್ಚಾಗುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಹೆಚ್ಚು ಗಮನ ಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರೇ, ೧೯೮೭–೮೮ನೇ ವರ್ಷನ್ನು ವಿಶ್ವಸಂಸ್ಥೆಯು "ವಸತಿಹೀನರಿಗೆ ವಸತಿ ಒದಗಿಸುವ ಅಂತರ್‌ರಾಷ್ಟ್ರೀಯ ವರ್ಷ" ಎಂದು ಘೋಷಿಸಿದೆ. ಆ ಪ್ರಕಾರ ಈ ಅಂತರಾಷ್ಟ್ರೀಯ ವರ್ಷದಲ್ಲಿ ವಸತಿ ಹೀನರಿಗೆ ವಸತಿ ಒದಗಿಸುವುದು ವಿಶ್ವಸಂಸ್ಥೆಯ ಕೆಲಸ. ಆ ಪ್ರಕಾರ ಎಷ್ಟು ಜನರಿಗೆ ವಸತಿ ಒದಗಿಸಿದ್ದಾರೋ ಎನ್ನುವುದು ನನಗೆ ಗೊತ್ತಿಲ್ಲ.

ಇನ್ನು ನಾನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಒಂದು ಮಾತು ಹೇಳುತ್ತೇನೆ. ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರವು ೧೯೮೫–೮೬ರ ಅವಧಿಯಲ್ಲಿ ೨,೮೮೯ ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ ಎನ್ನುವ ಮಾತನ್ನು ಹೇಳಿದ್ದಾರೆ ಬಹಳ ಸಂತೋಷ. ಸಂತೋಷದ ವಿಚಾರ ಇದು. ಆದರೆ ಈ ಕೆಲಸ ಕೇವಲ ಬೆಂಗಳೂರು

ನಗರದಲ್ಲಿ ಮಾತ್ರ ನಡೆಯಬೇಕೇ? ನಮ್ಮ ರಾಜ್ಯದ ಇತರ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಈ ಕೆಲಸ ನಡೆಯಬಾರದೇ ? ದಾವಣಗೆರೆ ಒಂದು ಸಣ್ಣ ನಗರ. ಅಲ್ಲಿನ ಜನರಿಗೆ ಇವರು ಎಷ್ಟು ನಿವೇಶನಗಳನ್ನು ಒದಗಿಸಿದ್ದಾರೆ ? ಬೆಂಗಳೂರು ನಗರದಲ್ಲಿ ೨೮೮೯ ಎಕರೆಗಳಷ್ಟು ಭೂಮಿಯನ್ನು ಇದಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲು ಸಾಧ್ಯವಾಗಿದ್ದರೆ ಬೇರೆ ಕಡೆ ಏತಕ್ಕೆ ಸಾಧ್ಯವಾಗಿಲ್ಲ ? ದಾವಣಗೆರೆ ಒಂದು ಬೆಳೆಯುತ್ತಿರುವ ನಗರವಾಗಿದೆ. ಅದೇ ರೀತಿ ತುಮಕೂರು, ಬೆಳಗಾಂ, ಹುಬ್ಬಳ್ಳಿ–ಧಾರವಾಡ ಹಾಗೂ ಇನ್ನಿತರ ನಗರ ಪ್ರದೇಶಗಳಲ್ಲಿನ ಜನರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡುವುದು ಬಹಳ ಅವಶ್ಯಕವಾಗಿದೆ. ದಾವಣಗೆರೆ ಸರ್ಕಾರದ ನೌಕರರನ್ನು ವರ್ಗ ಮಾಡಿದರೆ ಯಾರೂ ಸಹ ಹೋಗುವುದಿಲ್ಲ. ಏಕೆಂದರೆ, ಅಲ್ಲಿ ಸಣ್ಣ ಮನೆಗಳಿಗೆ ೪೦೦ ರಿಂದ ೫೦೦ ರೂಪಾಯಿಗಳವರೆಗೆ ಬಾಡಿಗೆ ಮತ್ತು ೫--೧೦ ಸಾವಿರ ರೂಪಾಯಿಗಳವರೆಗೆ ಅಡ್ವಾನ್ಸ್ ಕೊಡಬೇಕಾಗಿದೆ. ಆದ್ದರಿಂದ ಅಲ್ಲಿಯೂ ನಿವೇಶನಗಳನ್ನು ಹಂಚಿದರೆ ಮತ್ತು ಮನೆಗಳನ್ನು ಕಟ್ಟಿಸಿಕೊಟ್ಟರೆ ಖಂಡಿತವಾಗಿಯೂ ಸರ್ಕಾರದ ನೌಕರರು ಅಲ್ಲಿಗೆ ಹೋಗುತ್ತಾರೆ. ಎಲ್ಲಾ ಕಡೆಯೂ ನಗರಾಭಿವೃದ್ಧಿ ಮಂಡಳಿಗಳು ಇವೆ. ಆದರೆ ಅವು ನಿವೇಶನ ಒದಗಿಸಲು ಎಷ್ಟು ಪ್ರಯತ್ನ ಮಾಡಬೇಕಾಗಿತ್ತೋ ಅಷ್ಟು ಪ್ರಯತ್ನ ಮಾಡಿಲ್ಲವೆಂಬುದು ನನ್ನ ಅಭಿಪ್ರಾಯ. ಆದ್ದರಿಂದ ಸಂಬಂಧಪಟ್ಟ ಸಚಿವರು ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನೀರಾವರಿ ತೆರಿಗೆ ಬಗ್ಗೆ ಹಿರಿಯ ಸದಸ್ಯರೆಲ್ಲರೂ ಹೇಳಿದ್ದಾರೆ. ಈ ತೆರಿಗೆ ಹೆಚ್ಚು ಮಾಡುವುದರಿಂದ ರೈತರ ಮೇಲೆ ಹೆಚ್ಚಿನ ಭಾರ ಬೀಳುತ್ತದೆ. ಆದ್ದರಿಂದ ಇದನ್ನು ಕೈಬಿಡುವುದು ಒಳ್ಳೆಯದು ನಾವು ರೈತರಿಂದ ಹೆಚ್ಚು ಅನುಕೂಲ ಪಡೆಯುತ್ತೇವೆ. ಆದರೆ ರೈತರು ಬೆಳೆಯುವ ಬೆಳೆಗೆ ಸರಿಯಾದ ಬೆಲೆಯನ್ನು ಗೊತ್ತು ಮಾಡುತ್ತೇವೆಯೇ ಎಂಬುದು ಇಲ್ಲಿರುವ ಪ್ರಶ್ನೆ. ರೈತರು ಭತ್ತ, ಶೇಂಗಾ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಸರ್ಕಾರದವರು ಈ ಬೆಳೆಗಳಿಗೆ ಸರಿಯಾದ ಬೆಲೆಯನ್ನು ನಿಗದಿ ಮಾಡುವುದಿಲ್ಲ. ಅದೇ ರಸಗೊಬ್ಬರವನ್ನು ತಯಾರು ಮಾಡುವಂತಹ ಕೈಗಾರಿಕೆಯವರು, ಅದರ ಬೆಲೆಯನ್ನು ಅವರೇ ನಿಗದಿ ಮಾಡುತ್ತಾರೆ. ಅದನ್ನು ತಯಾರು ಮಾಡಲು ಎಷ್ಟು ಖರ್ಚು ಬೀಳುತ್ತದೆ, ಕೂಲಿ ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನೆಲ್ಲಾ ಲೆಕ್ಕ ಹಾಕಿ ಅದರ ಬೆಲೆಯನ್ನು ಅವರೇ ನಿಗದಿ ಮಾಡುತ್ತಾರೆ. ಆದರೆ ರೈತರು ಬೆಳೆದ ಬೆಳೆಗೆ ಬೆಲೆ ಗೊತ್ತು ಮಾಡುವವರು ಯಾರು ? ಸರ್ಕಾರ ಸರಿಯಾದ ಬೆಲೆ ಗೊತ್ತು ಮಾಡುವುದಿಲ್ಲ, ವ್ಯಾಪಾರಸ್ಥರು ಈ ರೈತರ ಮಾಲನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳುವ ಪದ್ಧತಿ ನಮ್ಮ ರಾಜ್ಯದಲ್ಲಿ ಅಥವಾ ನಮ್ಮ ದೇಶದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈಗಲೂ ಇದೇ ಪದ್ಧತಿ ಮುಂದುವರೆದುಕೊಂಡು ಹೋಗುತ್ತಿದೆ. ಇದರ ಬದಲು ರೈತರ ಮಾಲಿಗೆ ವೈಜ್ಞಾನಿಕವಾದ ಬೆಲೆ ಗೊತ್ತು ಮಾಡಿದರೆ ಅವರಿಗೆ ಲಾಭ ಬರುತ್ತದೆ. ಆಗ ನೀರಿನ ತೆರಿಗೆ ಅಥವಾ ಬೇರೆ ಯಾವ ತೆರಿಗೆಯನ್ನಾದರೂ ಕೊಡುತ್ತಾರೆ. ಲಾಭದಲ್ಲಿ ಒಂದು ಭಾಗ ಕೊಡಬೇಕೆಂದರೆ ಅವರು ಕೊಡುತ್ತಾರೆ. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ, ಈ ಕಾರಣದಿಂದ ಈ ನೀರಿನ ಮೇಲಿನ ತೆರಿಗೆಯನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ವನ ನಿರ್ಮಾಣ ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ ವಿವಿಧ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಸರ್ಕಾರ 'ಸಿ' ಮತ್ತು 'ಡಿ' ದರ್ಜೆಯ ಭೂಮಿಗಳನ್ನು ಗುತ್ತಿಗೆಗೆ ನೀಡುವುದಕ್ಕೆ ಸಹ ನಾವು ಆದೇಶಗಳನ್ನು ನೀಡಿದ್ದೇವೆ. ಆದಾಗ್ಯೂ ಈ ಕಾರ್ಯಕ್ರಮದ ಲಾಭ ಪಡೆಯಲು ಸಾಕಷ್ಟು ಜನರು, ಸಂಸ್ಥೆಗಳು ಮುಂದೆ ಬಂದಿಲ್ಲ. ನಮ್ಮ ಯುವಕರು, ಸ್ವಯಂ ಸೇವಕ ಮತ್ತು ದಲಿತ ಸಂಸ್ಥೆಗಳು ಮತ್ತು ಇತರರು ಈ ಹೊಸ ಯೋಜನೆಯ ಪೂರ್ಣ ಪ್ರಯೋಜನವನ್ನು ಪಡೆಯಬೇಕೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಈಗ ಜನರಿಗೆ ಕೆಲಸವಿಲ್ಲ, ಊಟ ಇಲ್ಲ, ಇಂತಹವರು ಜೀವನ ಯಾವ ರೀತಿ ನಡೆಸಬೇಕೆಂದು ಯೋಚನೆ ಮಾಡುತ್ತಿರುವಾಗ ನೀವು ಇಂತಹವರಿಗೆ ಸಿ ಮತ್ತು ಡಿ ದರ್ಜೆಯ ಭೂಮಿಯನ್ನು ಕೊಟ್ಟರೆ, ಅವರು ಅದರಲ್ಲಿ ಗಿಡ ನೆಟ್ಟು ಬೆಳೆಸಿ, ಅದರ ಫಲ ಪಡೆದು ಊಟ ಮಾಡುವುದು ಯಾವಾಗ ?

ಅದಕ್ಕೆ ಇವರು ಏನೋ ಸಹಾಯ ಕೊಡುತ್ತಾರಂತೆ. ಆ ಸಹಾಯವನ್ನು ಏನಾದರೂ ನಿರೂಪಿಸಿದ್ದೀರಾ. ಅದು ಏನೂ ಇಲ್ಲ. ಸುಮ್ಮನೆ ಬನ್ನಿ ನಾವು ಒಣ ಭೂಮಿ ಕೊಡುತ್ತೇವೆ ಎಂದು ಹೇಳುತ್ತಾರೆ. ಕಲ್ಲು ಇರತಕ್ಕಂಥ ಭೂಮಿಯನ್ನು ತೆಗೆದುಕೊಂಡು ಏನುಮಾಡುವುದಕ್ಕಾಗುತ್ತದೆ ಈ ಬಗ್ಗೆ ಕೂಡ ಮಾನ್ಯ ಮುಖ್ಯ ಮಂತ್ರಿಗಳು ವಿಚಾರ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಆಮೇಲೆ

''ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕದ ಕಾರ್ಮಿಕರ ಉತ್ತಮ ನಡತೆಗಾಗಿ ನಾನು ಅವರನ್ನು ಅಭಿನಂದಿಸುತ್ತೇನೆ'', ಎಂದು ಹೇಳಿದ್ದಾರೆ. ಮತ್ತೆ ಇನ್ನೇನು ಮಾಡುತ್ತಾರೆ. ಇಷ್ಟೊಂದು ಕೈಗಾರಿಕೆಗಳು ಮುಚ್ಚಿದ್ದರೂ ಕೂಡ, ಏನು ಪ್ರಯತ್ನ ಮಾಡಿದರೂ ಕೂಡ ನೀವು ಏನು ಬೇಕಾದರೂ ಮಾಡಿಕೊಳ್ಳಿ. ನಾವು ಮಾತ್ರ ಸುಮ್ಮನೆ ಇರುತ್ತೇವೆ ಎಂದು ಹೇಳತಕ್ಕಂಥಸರ್ಕಾರಕ್ಕೆ ಇನ್ನೇನು ಹೇಳ ಬೇಕಾಗುತ್ತದೆ ತಾವೇ ವಿಚಾರಮಾಡಿ. ೩ ವರ್ಷವಾಗಿದೆ ಮೈಸೂರು ಕೆ.ಆರ್.ಮಿಲ್ ಮುಚ್ಚಿ, ಎಷ್ಟು ಹೋರಾಟ ಆಯಿತು ಚಳುವಳಿ ಆಯಿತು, ಎಷ್ಟು ಜನ ತೊಂದರೆಯನ್ನು ಅನುಭವಿಸುತ್ತಾ ಇದ್ದಾರೆ. ಅನೇಕ ಕೈಗಾರಿಕೆಗಳ ಕಾರ್ಮಿಕರು ತೊಂದರೆಗಳನ್ನು ಅನುಭವಿಸುತ್ತಾ ಇದ್ದಾರೆ. ಆದರೆ ಅಲ್ಲಿಯ ವಾತಾವರಣ ಶಾಂತವಾಗಿದೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ. ಇದರ ಬಗ್ಗೆ ನಾವು ಏನು ಹೇಳಬೇಕೋ ಗೊತ್ತಿಲ್ಲ. ಏನೇ ಕೈಗಾರಿಕೆಗಳು ಮುಚ್ಚಿಹೋಗಲಿ, ಏನೇ ತೊಂದರೆಯಾದರೂ ಕೂಡ ಎಲ್ಲಾ ಶಾಂತವಾಗಿದೆ ಎನ್ನುವ ಭಾವನೆ ಅವರಿಗೆ ಬಂದರೆ ಕಾರ್ಮಿಕ ವರ್ಗ ತಲೆತಗ್ಗಿಸಬೇಕಾಗುತ್ತದೆ ಇವೊತ್ತು ರಾಜ್ಯ ಸರ್ಕಾರ ನಮ್ಮ ರಾಜ್ಯದಲ್ಲಿ ಇದೆಯೇ ಎಂದು ಬಹಳ ವಿಷಾದದಿಂದ ಕೇಳಬೇಕಾಗಿದೆ. ಇವತ್ತು ಕರ್ನಾಟಕ ಕಾರ್ಮಿಕವರ್ಗ ಅನೇಕ ತೊಂದರೆಗಳನ್ನು ಅನುಭವಿಸುತ್ತಾ ಇದೆ, ಅವರು ಹೋರಾಟಗಳನ್ನು ನಡೆಸುತ್ತಾ ಇದ್ದಾರೆ. ಹಿಂದಿದ್ದ ಸರ್ಕಾರಗಳು ಹೊಡೆದು ಬಡಿದು. ನಂತರ ಕರೆದು ಮಾತನಾಡಿ ಈ ಒಂದು ಸಮಸ್ಯೆಯನ್ನು ಇತ್ಯರ್ಥ ಪಡಿಸುತ್ತಿದ್ದುವು. ಇವರು ಹೊಡೆಯುವುದೂ ಇಲ್ಲ ಬಡಿಯುವುದೂ ಇಲ್ಲ, ಸಮಸ್ಯೆಯನ್ನು ಇತ್ಯರ್ಥ ಪಡಿಸುವುದೂ ಇಲ್ಲ. ಈರೀತಿಯಾದಂಥ ಪರಿಸ್ಥಿತಿ ಇದೆ. ಆಮೇಲೆ ಬರೂಕಾ ಟೆಕ್ಸ್‌ಟೈಲ್ ಮಿಲ್ ಏನಾಗಿದೆ, ಏತಕ್ಕೋಸ್ಕರ ಆ ಕೈಗಾರಿಕೆ ಲಾಕೌಟಾಗಿದೆ. ತಕ್ಷಣ ಆ ಕಾರ್ಖಾನೆಯ ಕಾರ್ಮಿಕರನ್ನು ಮತ್ತು ಮಾಲೀಕರನ್ನು ಕರೆದು ಸಮಸ್ಯೆಯನ್ನು ಏಕೆ ಇತ್ಯರ್ಥಪಡಿಸಬಾರದು. ಸುಮಾರು ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರತಕ್ಕ ಕೈಗಾರಿಕೆ ಸಾವಿರಾರು ಜನ ಕೆಲಸಮಾಡತಕ್ಕ ಕೈಗಾರಿಕೆ ಅದು. ಕಾರ್ಮಿಕರಲ್ಲಿ ಮತ್ತು ಮಾಲೀಕರಲ್ಲಿ ಬಂದಿಸಿರತಕ್ಕ ಒಂದು ಜಗಳದಿಂದ ಅಲ್ಲಿ ಘರ್ಷಣೆಯಾಗಿದೆ, ಮತ್ತು ಅದಕ್ಕೆ ಬೀಗಮುದ್ರೆ ಹಾಕಿದ್ದಾರೆ. ಆ ಕೈಗಾರಿಕೆಯನ್ನು ಪ್ರಾರಂಭಿಸತಕ್ಕ ಜವಾಬ್ದಾರಿ ಈ ಸರ್ಕಾರಕ್ಕೆ ಇಲ್ಲವೇ ಎಂದು ನಾನು ಕೇಳುತ್ತಾ ಇದ್ದೇನೆ. ಆದ್ದರಿಂದ ಅವರು ಹೇಳಿರತಕ್ಕಂಥದ್ದು ಅಷ್ಟೊಂದು ಸಮಂಜಸವಾದ ಉತ್ತರ ಅಲ್ಲ. ಇದಕ್ಕೆ ಕಾರ್ಮಿಕರಲ್ಲಿ ಹೆಚ್ಚು ಅತೃಪ್ತಿ ಇದೆ ಅಶಾಂತಿ ಇದೆ. ಇವರು ಅದನ್ನು ತಿಳಿದುಕೊಳ್ಳ ತಕ್ಕಂಥ ಪ್ರಯತ್ನ ಮಾಡಿಲ್ಲ. ಏತಕ್ಕೆಂದರೆ, ಕಾರ್ಮಿಕ ಇಲಾಖೆಯ ಮಂತ್ರಿಗಳು ಏನಿದ್ದಾರೆ ಅವರು ಕಂದಾಯ ಇಲಾಖೆಯಮಂತ್ರಿಗಳು.ಅವರಿಗೆ ಎರಡು ದೊಡ್ಡ ಇಲಾಖೆಗಳಿವೆ, ಕಂದಾಯ ಇಲಾಖೆ ಬಹಳ ದೊಡ್ಡದು ಮತ್ತು ಯೋಜನಾ ಇಲಾಖೆ ಇದೆ. ಈ ಮೂರು ಇಲಾಖೆಗಳಲ್ಲಿ ಕಾರ್ಮಿಕರನ್ನು ಮರೆತಿದ್ದಾರೆ. ನಮ್ಮ ರಾಜ್ಯದಲ್ಲಿ ಕಾರ್ಮಿಕರ ಸಮಸ್ಯೆ ಇದೆ, ಆ ಸಮಸ್ಯೆಯನ್ನು ಪರಿಹಾರ ಮಾಡ ಬೇಕು ಎಂಬ ಗೊಡವೆಗೆ ಹೋಗುತ್ತಿಲ್ಲ, ಆದ್ದರಿಂದ ಕಾರ್ಮಿಕರಲ್ಲಿ ಅಶಾಂತಿ ಇದೆ ಎನ್ನುವುದು ಅವರಿಗೆ ಇದು ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಮಾಡಿ ಕೊಳ್ಳುತ್ತೇನೆ, ಏನೆಂದರೆ ಆದಷ್ಟು ಜಾಗ್ರತೆಯಾಗಿ ಕಾರ್ಮಿಕ ಇಲಾಖೆಗೆ ಒಬ್ಬ ಸರಿಯಾದಂಥ ವ್ಯಕ್ತಿಯನ್ನು ಮಂತ್ರಿಗಳನ್ನಾಗಿ ನೇಮಕ ಮಾಡಬೇಕು ಕಾರ್ಮಿಕರ ಸಮಸ್ಯೆಗಳನ್ನು ಪರಿಹಾರಮಾಡಿ ಕಾರ್ಮಿಕರಿಗೆ ಆಗತಕ್ಕಂಥ ತೊಂದರೆಯನ್ನು ನಿವಾರಣೆ ಮಾಡಿ ಉತ್ಪಾದನೆ ಹೆಚ್ಚಾಗುವಂತೆ ಮಾಡಬೇಕು ಎಂದು ಕೇಳಿಕೊಳ್ಳು ತ್ತೇನೆ. ಆಮೇಲೆ

> ರಾಜ್ಯ ವಿಶ್ರಾಂತಿ ವೇತನ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರಿಗೆ ಅವರ ಜೀವಿತಾವಧಿಯಲ್ಲಿ ಒಮ್ಮೆ ಎರಡನೇ ದರ್ಜೆ ರೈಲಿನಲ್ಲಿ ಯಾವುದೇ ಎರಡು ಸ್ಥಳಗಳ ನಡುವೆ ಉಚಿತವಾಗಿ ಪ್ರಯಾಣ ಮಾಡಲು ಸೌಲಭ್ಯ''.

ಎಂದು ಹೇಳಿದ್ದಾರೆ. ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿರತಕ್ಕವರಿಗೆ ಅವರ ಜೀವಿತ ಅವಧಿ ಯಲ್ಲಿ ಎರಡು ಸ್ಥಳಗಳ ನಡುವೆ ಒಂದು ಸಲ ಹೋಗಿ ಬರುವುದಕ್ಕೆ ಅವಕಾಶ ಇದೆ. ಅವರುಗಳು ಎಲ್ಲಿಗೆ ಹೋಗುವುದಕ್ಕೆ ಸಾಧ್ಯವೋ ಅಲ್ಲಿಗೆ ಹೋಗಲಿ, ಈ ದೇಶಕ್ಕಾಗಿ ಹೋರಾಟ ಮಾಡಿದವರು. ನಮಗೆ ಸ್ವಾತಂತ್ರ್ಯ ತಂದುಕೊಟ್ಟವರು, ಇವತ್ತಿನ ಎಲ್ಲ ಅನುಕೂಲಗಳನ್ನು ನಾವು ಪಡೆದಿರತಕ್ಕಂಥದ್ದು ಅವರಿಂದ ಅವರಿಗೆ ಯಾವುದೇ ಸಂದರ್ಭದಲ್ಲಿ ಎಲ್ಲಿಗೆ ಬೇಕಾದರೂ ಹೋಗಿ ಬರುವುದಕ್ಕೆ ಅನುಕೂಲಗಳನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಮತ್ತೆ ವಿಶ್ರಾಂತಿ ವೇತನ, ವೃದ್ಧಾಪ್ಯ ವೇತನ, ಅಂಗವಿಕಲ ವೇತನವೆಂದು ತಿಂಗಳಿಗೆ ೫೦ ರೂಪಾಯಿಗಳನ್ನು ಕೊಡುತ್ತಿದ್ದೀರಿ.

ಈಗಾಗಲೇ ಬೆಲೆ ಹೆಚ್ಚಿದೆ. ೬೫ ವರ್ಷ ವಯಸ್ಸಾದವರಿಗೆ, ಯಾರು ಇಲ್ಲದವರಿಗೆ, ಯಾವುದೇರೀತಿಯಲ್ಲೂ ಸಂಪಾದನೆ ಮಾಡುವುದಕ್ಕೆ ಆಗದೇ ಇರುವಂಥವರಿಗೆ ಜೀವನ ಮಾಡುವುದಕ್ಕಾಗಿ ಕೊಟ್ಟಿದ್ದೀರಿ. ೫೦ ರೂಪಾಯಿಗಳಲ್ಲಿ ಜೀವನ ಹೇಗೆ ಮಾಡುವುದಕ್ಕೆ ಸಾಧ್ಯ ? ಅವರು ಭಿಕ್ಷೆ ಎತ್ತುವುದಕ್ಕೂ ಆಗುವುದಿಲ್ಲ. ಮನೆ ಬಾಡಿಗೆ ಏನು ? ಜೀವನ ಹೇಗೆ ಮಾಡುವುದಕ್ಕಾಗುತ್ತದೆ. ಕನಿಷ್ಟ ೧೦೦ ರೂಪಾಯಿಗಳನ್ನಾದರೂ ಅವರಿಗೆ ಕೊಡಿ. ಇಲ್ಲದೇ ಹೋದರೆ ಮಾನ್ಯ ಸದಸ್ಯರಾದ ದೊಡ್ಡಮೇಟಿಯವರು ಹೇಳಿದಹಾಗೆ ವಯಸ್ಸಾದವರಿಗೆ ಎಲ್ಲಾರೀತಿಯ ಚಿಕಿತ್ಸೆ, ಆಹಾರ, ಮಂತ್ರಿತರ ಸೌಲಭ್ಯಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರೇ ರೂಪಿಸುವುದು ಒಳ್ಳೆಯದು. ಅನೇಕ ಜನ ಬರುವುದಿಲ್ಲ. ಬರತಕ್ಕಂಥವರಿಗೆ ವ್ಯವಸ್ಥೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ಒಂದು ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮುಂಬರುವ ವರ್ಷದಿಂದ ಹಂಪೆ ಮತ್ತು ಕುವೆಂಪು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡಕ್ಕೆ ಸಂಬಂಧಪಟ್ಟಂತೆ ಉನ್ನತ ವ್ಯಾಸಂಗದ ಕೇಂದ್ರವನ್ನು ಪ್ರಾರಂಭ ಮಾಡಲಾಗುವುದೆಂದು ತಿಳಿಸಲಾಗಿದೆ. ಇದು ಸಂತೋಷದ ವಿಚಾರ. ಹಂಪೆ, ನಾನು ಹುಟ್ಟಿದ ಸ್ಥಳ. ಅಲ್ಲಿ ಇದನ್ನು ಮಾಡುವುದು ಸೂಕ್ತವೆಂದು ನಾನು ಹೇಳುತ್ತೇನೆ. ಕ್ರೀಡೆಗಳಲ್ಲಿ ಭಾಗವಹಿಸುವಂಥ ವಿದ್ಯಾರ್ಥಿಗಳಿಗೆ ಯೋಜನೆ ತಯಾರು ಮಾಡಲಾಗಿದೆಯೆಂದು ಹೇಳಿದ್ದೀರಿ. ದಾವಣಗೆರೆ ನಗರದಲ್ಲಿ ಒಂದು ಕ್ರೀಡಾಂಗಣವನ್ನು ಕಟ್ಟಿಸುವುದು ಒಳ್ಳೆಯದು. ನಮ್ಮ ನಗರಸಭೆಯವರು ಕೂಡ ಈ ದಿಸೆಯಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ಸರ್ಕಾರದವರು ಕೂಡ ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಸಾಕಾಗುವುದಿಲ್ಲ. ಅಲ್ಲಿ ಒಂದು ಕ್ರೀಡಾಂಗಣ ಕೊಟ್ಟರೆ ಕ್ರೀಡಾಭಿಮಾನಿಗಳು ಆಟಪಾಠಗಳಲ್ಲಿ ಭಾಗವಹಿಸುವುದಕ್ಕೆ ಅನುಕೂಲ ಒದಗಿಸಿಕೊಟ್ಟಂತಾಗುತ್ತದೆಂದು ಹೇಳುತ್ತೇನೆ. ಸರ್ಕಾರೀ ನೌಕರರಿಗೆ ಸುಮಾರು ೧೦೦ ಕೋಟಿ ರೂಪಾಯಿಗಳಷ್ಟು ಸಂಬಳ ಜಾಸ್ತಿ ಮಾಡಿದ್ದೇವೆಂದು ಹೇಳಿದ್ದೀರಿ. ಕೃಷಿ ಕಾರ್ಮಿಕರಿಗೆ ಏನು ಕೊಟ್ಟಿದ್ದೀರಿ ? ಕೃಷಿ ಕಾರ್ಮಿಕರು, ಸಣ್ಣ ಕೈಗಾರಿಕಾ ಕಾರ್ಮಿಕರುಗಳಸ್ಥಿತಿ ಇವೊತ್ತು ಏನಾಗಿದೆ ಎಂಬುದನ್ನು ಸರ್ಕಾರದವರು ನೋಡಬೇಕು. ಸರ್ಕಾರೀನೌಕರರಿಗೆ ವೇತನ ಹೆಚ್ಚು ಮಾಡಿದ ಕೂಡಲೇ ಮಾರುಕಟ್ಟೆಯಲ್ಲಿ ಬೆಲೆಹೆಚ್ಚಾಗುತ್ತದೆ. ಕಾರ್ಮಿಕರು ಹೋಗುವುದು, ಸರ್ಕಾರೀ ನೌಕರರು ಹೋಗುವುದು ಒಂದೇ ಮಾರ್ಕೆಟ್ಟಿಗೆ. ಇವರಿಗೆ ೯ ರೂಪಾಯಿ ಕೂಲಿ, ಸರ್ಕಾರೀ ನೌಕರರಿಗೆ ೫೦೦ ರೂಪಾಯಿಗಳ ಸಂಬಳ. ಇವರು ಯಾವರೀತಿ ಜೀವನ ಮಾಡುವುದಕ್ಕಾಗುತ್ತದೆ ? ಕೂಲಿಯವರಿಗೆ ಕನಿಷ್ಟ ಕೂಲಿಯನ್ನು ಹೆಚ್ಚು ಮಾಡುವಂಥ ಪ್ರಯತ್ನವನ್ನು ಸರ್ಕಾರ ಏತಕ್ಕೆ ಮಾಡಿಲ್ಲ ? ಸರ್ಕಾರೀ ನೌಕರರಿಗೆ ಕೊಟ್ಟಿರುವುದರಲ್ಲಿ ನಮ್ಮ ವಿರೋಧ ಇಲ್ಲ. ಕನಿಷ್ಟ ಕೂಲಿಯನ್ನು ಹೆಚ್ಚು ಮಾಡುವ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ ಸರ್ಕಾರದವರು ೧೪೫ ಕೋಟಿ ರೂಪಾಯಿಗಳನ್ನು ಶೇಖರಣೆ ಮಾಡುವುದರ ಜೊತೆಯಲ್ಲಿ ೧೪೭ ಕೋಟಿ ರೂಪಾಯಿಗಳ ಕೊರತೆ ಬಜೆಟ್ ನಮ್ಮ ಮುಂದೆ ಇಟ್ಟಿದ್ದಾರೆ. ಆದ್ದರಿಂದ, ಇದು ಸಮರ್ಪಕವಾದ ಆಯವ್ಯಯ ಪತ್ರ ಅಲ್ಲ. ಆದ್ದರಿಂದ, ಇದರ ಬಗ್ಗೆ ನನ್ನ ಒಂದು ವಿರೋಧವನ್ನು ವ್ಯಕ್ತಪಡಿಸಿ ಈ ದಿವಸ ತಾವು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು).— ಸನ್ಮಾನ್ಯ ಅಧ್ಯಕ್ಷರೆ, ಈ ಬಜೆಟ್‌ನ್ನು ವಿರೋಧ ಮಾಡುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ಲಾನ್ ಮತ್ತು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಇವೆರಡು ಒಂದು ಬಜೆಟ್‌ನಲ್ಲಿ ಕುದುರೆ ಮತ್ತು ಗಾಡಿ ಇದ್ದ ಹಾಗೆ. ಪ್ಲಾನ್ ಮುಂದೆ ಇಟ್ಟು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಒಂದು ಹೆಜ್ಜೆ ಹಿಂದೆ ಇದ್ದರೆ ಬ್ಯಾಲೆನ್ಸ್ ಷೀಟ್ ಬ್ಯಾಲೆನ್ಸ್ ಆಗುವುದಿಲ್ಲ. ಅದು ಈ ಬಜೆಟ್‌ನಲ್ಲಿ ಅವಕಾಶ ಆಗುತ್ತಿದೆ. ಇದನ್ನು ಹೆಚ್ಚು ಕಡಿಮೆ ಮಾಡಿದರೆ ಗಾಡಿಯನ್ನು ಮುಂದೆ ಕಟ್ಟಿ ಕುದುರೆಯನ್ನು ಹಿಂದೆ ಕಟ್ಟಿದಂತೆ ಆಗುತ್ತದೆ. ಇದು ಬಹಳ ಮುಖ್ಯವಾದಂಥ ವಿಚಾರ. ಇನ್ನು ಟೈಮ್ ಬೌಂಡ್ ಪ್ರೋಗ್ರಾಮ್ ಇದರಲ್ಲಿ ಯಾವುದೇ ಕನ್‌ಸ್ಟ್ರಕ್ಷನ್ ಆಗಲಿ ಸರ್ಕಾರದ ಕೆಲಸ ಆಗಲಿ ಯಾವುದಾದರೂ ಕೂಡ ಇದಕ್ಕೆ ಟೈಮ್‌ಬೌಂಡ್ ಪ್ರೋಗ್ರಾಮ್ ಫಿಕ್ಸ್ ಮಾಡದೇ ಇದ್ದರೆ. ಅದರ ಜೊತೆಗೆ ಕ್ವಾಲಿಟಿ ಕಂಟ್ರೋಲ್ ಮಾಡದೇ ಇದ್ದರೆ ಯಾವ ಕೆಲಸ ಕೂಡ ನಾವು ಅಂದುಕೊಂಡಂತೆ ಎಸ್ಟಿಮೇಟ್ ರೀತಿ ಕೆಲಸ ಮುಗಿಯುವುದಿಲ್ಲ. ಹೆಚ್ಚಿನ ಖರ್ಚು

ಬರುವುದರ ಜೊತೆಗೆ ಅದು ಪ್ರಯೋಜನ ಕೂಡ ಆಗುವುದಿಲ್ಲ. ಕಳೆದ ವರ್ಷದಲ್ಲಿ ತೆಗೆದುಕೊಂಡಂಥ ಬ್ರಿಡ್ಜ್ ಆಗಲಿ, ಕನ್ಸ್‌ಟ್ರಕ್ಷನ್ ಆಫ್ ಬಿಲ್ಡಿಂಗ್ಸ್ ಆಗಲಿ ಯಾವುದೇ ಇರಲಿ ಸಮಯಕ್ಕೆ ಸರಿಯಾಗಿ ಕಂಪ್ಲೀಟ್ ಮಾಡದೇ ಇದ್ದರೆ ಓವರ್ ಹೆಡ್ ಜಾಸ್ತಿಯಾಗಿ ನಮಗೆ ಗೊತ್ತಿಲ್ಲದಂತೆ ಲಾಸ್ ಆಗುತ್ತದೆ. ಕ್ವಾಲಿಟಿ ಕಂಟ್ರೋಲ್ ಮಾಡದೇ ಇದ್ದರೆ. ನಾವು ಅಂದುಕೊಂಡಂತೆ ಬಿಲ್ಡಿಂಗ್ ಆಗಲಿ, ಯಾವುದೇ ಕಟ್ಟಡ ಆಗಲಿ, ಆ ಲೈಫ್ ಬರಲಿಕ್ಕೆ ಸಾಧ್ಯವಿಲ್ಲ. ಒಂದು ವರ್ಷ ಬಾಳಿಕೆ ಬರುವಂಥಾದು ಆರು ತಿಂಗಳಿಗೆ ರಿಪೇರಿಗೆ ಬರುತ್ತದೆ ರಿಪೇರಿ ಕಾಸ್ಟ್ ಎಷ್ಟು ಆಗುತ್ತದೆ ಅದನ್ನು ಲೆಕ್ಕ ಹಾಕಬೇಕಾಗುತ್ತದೆ. ಡ್ಯಾಮೇಜ್ ಆಗತಕ್ಕದ್ದು ಲೆಕ್ಕ ಹಾಕಬೇಕಾಗುತ್ತದೆ. ಎಸ್ಟಿಮೇಟು ಪ್ರಕಾರ ಖರ್ಚು ಮಾಡಿ ಸಮಯಕ್ಕೆ ಸರಿಯಾಗಿ ಕೆಲಸ ಮುಗಿಸದೇ ಹೋದರೆ ಎರಡು ಮೂರು ತರಹ ಲುಕ್ಸಾನು ಬರುತ್ತದೆ. ಬಡ್ಜೆಟ್‌ನಲ್ಲಿ ಟೈಮ್‌ಬೌಂಡ್ ಪ್ರೋಗ್ರಾಮ್ ಏನು ಇದೆ ಅವನ್ನು ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ. ಅದರ ಜೊತೆಗೆ ಕ್ವಾಲಿಟಿ ಕೂಡ ಸರಿಯಾಗಿ ಮೇಂಟೇನ್ ಮಾಡ ಬೇಕಾಗುತ್ತದೆ. ಈ ಸಂಧರ್ಭದಲ್ಲಿ ತಮಗೆ ಒಂದು ಉದಾಹರಣೆ ಹೇಳಬೇಕೆಂದರೆ, ಇರಿಗೇಷನ್‌ಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ನೂರು ಬಾವಿ ಯೋಜನೆಯಲ್ಲಿ ಗಂಗಾ ಕಲ್ಯಾಣ ಸ್ಕೀಮ್‌ನಲ್ಲಿ ಕೇಳುತ್ತಾರೆ ಆ ರೀತಿ ಕೇಳಿದಾಗ ತಕ್ಷಣ ಅದನ್ನು ಸ್ಯಾಂಕ್ಷನ್ ಮಾಡುತ್ತಾರೆ. ಐಡೆಂಟಿಫೈ ಮಾಡಲಿಕ್ಕೆ ಜಿಲ್ಲೆಗೆ ಒಬ್ಬರು ಅಥವಾ ಇಬ್ಬರು ಇರುತ್ತಾರೆ. ಸಾವಿರಾರು ಜನ ಅಪ್ಲಿಕೇಷನ್ ಕೊಟ್ಟಿರು ವುದರಲ್ಲಿ ಐಡೆಂಟಿಫೈ ಮಾಡಲಿಕ್ಕೆ ಸುಮಾರು ತಿಂಗಳುಗಳು ಆಗುತ್ತದೆ. ಐಡೆಂಟಿಫೈ ಮಾಡಿ ಬೋರ್ ಹಾಕಿದ ಮೇಲೆ, ಬ್ಯಾಂಕ್‌ನಲ್ಲಿ ಸಾಲ ಮಾಡಿ, ಪಂಪ್‌ಸೆಟ್ಟು ಹಾಕಿ ಪವರ್ ಕೊಡಿ ಎಂದು ಕೆ.ಇ.ಬಿ. ಆಫೀಸಿಗೆ ಹೋದರೆ ಅಲ್ಲಿ ಪೋಲ್‌ಗಳು ಇಲ್ಲ, ವೈರ್ಸ್ ಇಲ್ಲ ಎಂದು ಹೇಳುತ್ತಾರೆ. ವೈರ್ ತರಿಸಿ ಹಾಕಿದ ಮೇಲೆ ಟ್ರಾನ್ಸ್‌ಫಾರಮರ್ ಇಲ್ಲ ಎಂದು ಹೇಳುತ್ತಾರೆ. ಅನಂತರ ವೋಲ್ಟೇಜ್ ಇಲ್ಲ ಎಂದು ಹೇಳುತ್ತಾರೆ. ಇದು ಒಂದು ತರಹ ಚೈನ್ ರಿ ಆಕ್ಷನ್ ಇದ್ದ ಹಾಗೆ. ವಿಲೇಜಸ್‌ನಲ್ಲಿ ಈ ಪ್ರಾಕ್ಟಿಕಲ್ ಡಿಫಿ ಕಲ್ಟೀಸ್‌ನ್ನು ಅನುಭವಿಸುತ್ತಿದ್ದಾರೆ. ಈ ರೀತಿ ಆದಾಗ ಸುಮಾರು ಒಂದು ವರ್ಷದವರೆಗೆ ಕೆಲವಾರು ತಾಲ್ಲೂಕಿನಲ್ಲಿ ಇರಿಗೇಷನ್ ಪಂಪ್‌ಸೆಟ್ಟುಗಳಿಗೆ ಕರೆಂಟ್ ಒದಗಿಸತಕ್ಕದ್ದು ಡಿಲೇ ಆಗಿದೆ ಒಂದೆರಡು ಎಕರೆ ಭೂಮಿ ಇಟ್ಟುಕೊಂಡಿದ್ದ ರೈತರು ಡ್ರೈ ಲ್ಯಾಂಡ್ ಕಲ್ಟಿವೇಷನ್ ಮಾಡತಕ್ಕ ವರೂ ಆ ಕಡೆ ನಿಗವಿಟ್ಟು ಬರತಕ್ಕದ್ದನ್ನು ಕಳೆದುಕೊಳ್ಳುವಂತೆ ಆಗಿದೆ. ರೈತರು ಬ್ಯಾಂಕ್ ನಿಂದ ಸಾಲ ತಂದು ಪಂಪ್‌ಸೆಟ್ ಹಾಕಿಕೊಂಡಿದ್ದಾರೆ. ೧ ವರ್ಷದವರೆಗೆ ಇಂಟರಸ್ಟ್ ಕೊಡ ದಿದ್ದರೆ ಬ್ಯಾಂಕ್‌ನವರು ಬಂದು ನಮಗೆ ಇಂಟರೆಸ್ಟ್ ಕೊಡಿ., ಇಲ್ಲದಿದ್ದರೆ ಪಂಪ್‌ಸೆಟ್ ಕೊಡಿ ಎಂದು ಗಲಾಟೆ ಮಾಡುತ್ತಿದ್ದಾರೆ, ಸ್ವಾಮಿ ಇಂಟರೆಸ್ಟ್‌ನ್ನು ಯಾರು ಕಟ್ಟಬೇಕು? ಇದಕ್ಕೆ ಯಾರು ಜವಾಬ್ದಾರರು? ಸರ್ಕಾರದವರು ಬಡ್ಡಿಯನ್ನು ಕೊಡಬೇಕೋ? ಅಥವಾ ರೈತರು ಕೊಡಬೇಕೋ? ರೈತರು ಕೊಟ್ಟರೆ ರೈತರಿಗೆನಷ್ಟ. ಸರ್ಕಾರದವರು ಕೊಟ್ಟರೆ that will be an unseen expenditure or loss in the budget. ಇದು ನೆಕ್ಸ್ಟ್ ಇಯರ್ ಬಜೆಟ್‌ಗೆ ಇದು ಅಕ್ಯುಮಲೇಟ್ ಆಗುತ್ತಾ ಹೋಗುತ್ತಿರುತ್ತದೆ ಇನ್ನು ಇಂಡಸ್ಟ್ರೀಸ್‌ನ್ನು ತೆಗೆದುಕೊಂಡರೆ ಅದು ಸರ್ಕಾರದ್ದು ಇರಬಹುದು ಅಥವಾ ಇಂಡಿವಿಜುಯಲ್ಸ್ ಇರಬಹುದು. ಯಾವುದೇ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕಾದರೂ ಮೊದಲು ಫಿಸಿಬಿಲಿಟಿ ರಿಪೋರ್ಟ್ ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರು ಮಾಡು ತ್ತಾರೆ. ಇದೆಲ್ಲಾ ಆದಮೇಲೆ ಫಿಸಿಬಿಲಿಟಿ ರಿಪೋರ್ಟ್, ಪ್ರಾಜೆಕ್ಟ್ ರಿಪೋರ್ಟ್ ಎಲ್ಲಾ ತಯಾರು ಮಾಡಿ, ಕಾರ್ಖಾನೆಯನ್ನೂ ಪ್ರಾರಂಭಿಸಿ ಅದು ಲಾಸ್‌ನಲ್ಲಿ ನಡೆಯುತ್ತಿದೆ ಎಂದರೆ ಅದರ ಅರ್ಥ ಏನು? ಅದರಲ್ಲಿ ಇರತಕ್ಕ ಅರ್ಥ ಇಷ್ಟೇ. ಮ್ಯಾನೇಜ್‌ಮೆಂಟ್‌ನಲ್ಲಿ ಡಿಫೆಕ್ಟ್ ಇರುತ್ತದೆ ಇಲ್ಲದಿದ್ದರೆ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ಡಿಫೆಕ್ಟ್ ಇರುತ್ತದೆ. ಮ್ಯಾನೇಜ್‌ಮೆಂಟ್‌ನಲ್ಲಿ ಡಿಫೆಕ್ಟ್ ಇದ್ದರೆ ಅದನ್ನು ಸರಿಪಡಿಸಿ ಕೊಳ್ಳಬಹುದು. ಇಂಥಾದ್ದು ಬಹಳಷ್ಟು ಇದೆ. ಉದಾಹರಣೆಗೆ ಹೇಳುವುದಾದರೆ ಇಲ್ಲಿ ಇವತ್ತು ಒಂದು ಬ್ಯಾಲೆನ್ಸ್ ಷೀಟ್ ಕೊಟ್ಟಿದ್ದಾರೆ, ಅದು ಎಂದರೆ Karnataka Compost Development Corporation Limited. The reasons for shortfall in the Capacity in the beginning was due to short supply of garbage from Bangalore City Corporation. Now the prob em has been solved and the shortfall or short-supply has also been solved. Further the plant was c mmissioned for commercial production with "nil" working capital. Shortase of infrastructural facilities was also there. Repairs to machineries

ಯಾವುದನ್ನೂ ಅಟೆಂಡ್ ಮಾಡಿಲ್ಲ. ಇದು ಯಾವುದಕ್ಕೂ ಹಣವನ್ನೇ ಕೊಟ್ಟಿಲ್ಲ. ಎಂದರೆ profit before tax-nil. Income tax provision doesn't arise. Profit after tax is also nil. General reserves-nil. ಆ ಪ್ರಾಜೆಕ್ಟ್ ಯಾವ ರೀತಿ ನಡೆಯುತ್ತದೆ. ಇನ್‌ಕಂಟ್ಯಾಕ್ಸ್ ಇಲ್ಲ ರಿಸರ್ವೇಷನ್ ಅಂತೂ ಇಲ್ಲವೇ ಇಲ್ಲ. Loss Rs 9.8 lakhs. Accumulated loss Rs- 57.78 lakhs. ಇದು ಏತಕ್ಕೆ ಇದನ್ನು ಮ್ಯಾನೇಜ್‌ಮೆಂಟ್ ಡಿಫೆಕ್ಟ್ ಎಂದು ಹೇಳಬಹುದು. ವರ್ಕಿಂಗ್ ಕ್ಯಾಪಿಟಲ್‌ನ್ನು ಕೊಟ್ಟಿಲ್ಲ. There is shortage of infrastructural facilities. Repairs to the plant is not attended. Cost of production doesn't include the cost of raw material which is supplied free. When the project goes under loss that means it is management defect. ಎಲ್ಲಾ ಪ್ರಾಜೆಕ್ಟ್‌ಗಳೂ ಲಾಸ್‌ನಲ್ಲಿವೆ ಎಂದು ನಾನು ಹೇಳುವುದಿಲ್ಲ. ಕೆಲವು ಲಾಭದಲ್ಲಿ ನಡೆಯುತ್ತಿವೆ. ಇನ್ನು ಕೆಲವು ಲಾಸ್‌ನಲ್ಲಿ ನಡೆಯುತ್ತಿವೆ. ಇದನ್ನು ನಾವು ಸರಿಪಡಿಸಿದರೆ ಈ ನಷ್ಟವನ್ನು ತಪ್ಪಿಸಿಕೊಳ್ಳಬಹುದು, ಇದುವರೆಗೆ ಇಂಡಸ್ಟ್ರೀಸ್ ವಿಚಾರ ಆಯಿತು. ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ವಿಚಾರದಲ್ಲಿ ಹೇಳುವುದಾದರೆ ಕಳೆದ ವರ್ಷ ೧೧ ಸಾವಿರ ಯೂನಿಟ್ಸ್ ಸ್ಮಾಲ್ ಸ್ಕೇಲ್ ಯೂನಿಟ್ಸ್ ಬಂದಿದೆಯೆಂದು ಮಾನ್ಯ ಸದಸ್ಯರಾದ ಪ್ರಜಾಪತಿಯವರು ಹೇಳಿದರು. ಪಿ.ಆರ್.ಸಿ. ರಿಜಿಸ್ಟ್ರೇಷನ್ ಏನು ಕೆ.ಎಸ್.ಎಸ್.ಐ.ಡಿ.ಸಿ ಆಫೀಸಿನಲ್ಲಿ ಆಗಿರುತ್ತದೆ. ಅಷ್ಟೆ. ರಿಜಿಸ್ಟ್ರೇಷನ್ ಆದಮಾತ್ರಕ್ಕೆ ಅವು ಅಸ್ತಿತ್ವಕ್ಕೆ ಬಂದಿವೆ ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಪಿಆರ್‌ಸಿಯಲ್ಲಿ ರಿಜಿಸ್ಟ್ರೇಷನ್ ಆದಮೇಲೆ ಆ ಪ್ರಾಜೆಕ್ಟ್‌ಗಳಿಗೆ ಲೈಫ್ ಬರಬೇಕಾದರೆ ೧ ವರ್ಷ ಬೇಕಾಗುತ್ತದೆ. ಇದರಲ್ಲಿ ನಮಗೆ ಸಾಕಷ್ಟು ಅನುಭವ ಆಗಿದೆ. ಸಿಂಗಲ್ ವಿಂಡೋ ಪ್ರೋಗ್ರಾಂ ಆಗಲಿ, ಬೇರೆ ಯಾವುದೇ ಆಗಲಿ, ೧೧ ಸಾವಿರ ಯೂನಿಟ್ಸ್ ಕಳೆದ ವರ್ಷ ಏನು ಬಂದಿದೆ ಅವು ಪ್ರೊಡಕ್ಷನ್‌ಗೆ ಬರಬೇಕಾದರೆ ೧ ವರ್ಷ ಆಗಬೇಕು. ಅವು ಇದುವರೆಗೂ ಪ್ರೊಡಕ್ಷನ್ ಬಹುಶಃ ಬಂದಿರಲಿಕ್ಕಿಲ್ಲ. ಆದರೆ ಪಿ.ಆರ್.ಸಿ. ಯಲ್ಲಿ ರಿಜಿಸ್ಟ್ರೇಷನ್ ಆಗಿದೆ, ನಮಗೆ ಲೆಕ್ಕ ಬಂದಿದೆ. ಇವುಗಳ ಪೈಕಿ ಎಷ್ಟು ಯೂನಿಟ್ಸ್ ಕೆಲಸ ಮಾಡುತ್ತಿವೆ? ಎಷ್ಟು ಸಿಕ್ ಯೂನಿಟ್ಸ್ ಎಂಬುದನ್ನು ಹೇಳಬಹುದಿತ್ತು. ಆದರೆ ಅದನ್ನು ಹೇಳಿಲ್ಲ. ಸಿಕ್ ಯೂನಿಟ್ಸ್ ಸಾಕಷ್ಟು ಇವೆ. ಈ ರೀತಿ ಸಿಕ್ ಯೂನಿಟ್ಸ್ ಆಗುವುದಕ್ಕೆ ಕಾರಣವಾದರೂ ಏನು? ಸ್ಮಾಲ್ ಸ್ಕೇಲ್ ಯೂನಿಟ್ಸ್‌ಗೆ ಸರ್ಕಾರದವರು ಫೆಸಿಲಿಟಿಗಳನ್ನು ಯಾರಿಗೂ ಕೊಟ್ಟಿಲ್ಲ.

೫-೩೦ ಪಿ.ಎಂ.

ರೇಡಿಯೋ ಯೂನಿಟ್ಸ್ ಮ್ಯಾನುಫ್ಯಾಕ್ಚರ್ ಮಾಡಿದಂಥ ರೇಡಿಯೋ ಮಾರ್ಕೆಟ್‌ನಲ್ಲಿ ಸೇಲ್ ಆಗುವುದಕ್ಕಿಂತ ಸ್ಮಗಲ್ ರೇಡಿಯೋಗಳು ಅತ್ಯಂತ ಚೀಪ್‌ನಲ್ಲಿ ವರ್ಕ್‌ಔಟ್ ಆಗುತ್ತದೆ. ಸ್ಮಗಲಿಂಗ್ ರೇಡಿಯೋಗಳು ಮಾರ್ಕೆಟ್ ಆಗುತ್ತದೆಯೇ ಹೊರತು, ನಮ್ಮ ರೇಡಿಯೋಗಳು ಸೇಲ್ ಆಗುವುದಿಲ್ಲ. ಹೀಗಾದರೆ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ತೆಗೆದವರ ಗತಿ ಏನಾಗಬೇಕು ? ಆದ್ದರಿಂದ ಸ್ಮಗಲಿಂಗ್‌ನ್ನು ಸ್ಟಾಪ್ ಮಾಡಬೇಕು. ಇದಕ್ಕೆ ತಾವು ಪ್ರೋತ್ಸಾಹ ಕೊಡಬಾರದು. ಆಗ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ನಮ್ಮಲ್ಲಿ ಈ ರೀತಿಯಾಗಿ ಯಾವುದೇ ವಿಷಯದಲ್ಲಿ ಡಿಫಿಸಿಟ್ ಬಂದಾಗ ಕೆಲವಾರು ಡಿಪಾರ್ಟ್‌ಮೆಂಟ್‌ಗಳು ಎಲ್ಲೆಲ್ಲಿಂದ ಹಣ ಬರುತ್ತದೆ ಅಲ್ಲಿಂದ ಹೆಚ್ಚು ಪಡೆಯಲಿಕ್ಕೆ ಪ್ರಯತ್ನ ಮಾಡಬೇಕು. ಉದಾಹರಣೆಗೆ ಸೇಲ್ಸ್ ಟ್ಯಾಕ್ಸ್ ತೆಗೆದುಕೊಂಡರೆ ಇದರ ಬಗ್ಗೆ ನಮ್ಮ ಸ್ನೇಹಿತರು ಸಾಕಷ್ಟು ಹೇಳಿದ್ದಾರೆ. ಇದರಲ್ಲಿ ಯಾವರೀತಿ ಮಿಸ್ ಅಪ್ರೋಪ್ರಿಯೇಷನ್ ಆಗುತ್ತದೆ, ಅದನ್ನು ಹೇಗೆ ಕಂಟ್ರೋಲ್ ಮಾಡಬೇಕು ಎನ್ನುವುದನ್ನೆಲ್ಲಾ ಹೇಳಿದ್ದಾರೆ.

ಇನ್ನೊಂದು ವಿಷಯ ಯಾವುದೆಂದರೆ ಎಕ್ಸೈಸ್. ಮಾನ್ಯ ಅಧ್ಯಕ್ಷರೇ ಒಂದು ಉದಾಹರಣೆಯನ್ನು ಕೊಡುವುದಾದರೆ ಈ ವರ್ಷ ೧೯೮೭-೮೮ರ ಬಡ್ಜೆಟ್ ಸೀಲಿಂಗ್ ಲಿಮಿಟ್ ಸೆಲಿಂಗ್ ಪ್ರೈಸ್ ೩೦ ರೂಪಾಯಿ. ಅದಕ್ಕಿಂತ ಜಾಸ್ತಿ ಮಾರಾಟ ಮಾಡಬಾರದೆಂದು ಕಳೆದ ವರ್ಷ ತೆಗೆದುಹಾಕಿದ್ದೀರಿ. ಇದರಿಂದ ಅಪಾಯವೇ ಹೆಚ್ಚಾಗುತ್ತಿದೆ ಎಂದು ಹೇಳುತ್ತೇನೆ. ಏತಕ್ಕೆಂದರೆ ಕಳ್ಳಬಟ್ಟಿ ಸಾರಾಯಿ ತೆಗೆಯುವುದು ಜಾಸ್ತಿಯಾಗುತ್ತದೆ. Excise auction is open, Sky is the limit ಆಗುತ್ತದೆ. ಆದ್ದ

ರಿಂದ ಎಕ್ಸೈಸ್ ಆಕ್ಷನ್ ಮಾಡಬೇಕಾದರೆ ಕಂಟ್ರಾಕ್ಟರ್ಸ್ ಅನ್‌ಹೆಲ್ತಿ ಕಾಂಪಿಟೇಷನ್ ಮಾಡುತ್ತಾರೆ'' ಅನ್‌ಹೆಲ್ತಿ ಕಾಂಪಿಟೇಷನ್ ಮಾಡಿದಾಗ ಎಷ್ಟು ಬೇಕಾದರೂ ಕೊಡಬಹುದು. ಆದಕ್ಕೆ ಬಿಡ್ ಅಮೌಂಟ್ ಪ್ಲಸ್ ಎಕ್ಸಪೆಂಡೀಚರ್ ಪ್ಲಸ್ ಇಂಟೆರೆಸ್ಟ್ ಪ್ಲಸ್ ಇನ್‌ವೆಸ್ಟ್‌ಮೆಂಟ್ ಆಮೇಲೆ ಬೇರೆ ಇನ್ನು ಏನಾದರೂ ಖರ್ಚು ಇದ್ದರೂ ಕೂಡ ಕಾಸ್ಟ್. ಬೆಲೆಯನ್ನಾಗಿ ಕನ್‌ವರ್ಟ್ ಮಾಡುತ್ತಾರೆ. ಈಗ ೬ ರೂಪಾಯಿ ಇದ್ದದ್ದು ಬಾಟ್ಲಿ ಬಂದಮೇಲೆ ೧೨ ರೂಪಾಯಿ ಆಯಿತು Cost of the liquo per Ltr. All these taken together it will be calculated on one litre. It may go even up to Rs. 50 or 60 a litre ದೇಸಾಯಿ ಕಮಿಷನ್ ಪ್ರಕಾರ ಬಡವರಿಗೆ ಕುಡಿಯತಕ್ಕಂಥ ಸರಾಯಿಯನ್ನು ಕಡಿಮೆ ಮಾರಾಟ ಮಾಡಬೇಕೆಂದು ಹೇಳಿದ್ದು ಅದು ಆಗಲಿಕ್ಕೆ ಇಲ್ಲ. ೫೫–೬೦–೬೫ ಲೀಟರ್ ಬೆಲೆಗೆ ಹೋಗುತ್ತದೆ. ಇದರಿಂದ ಏನಾಗುತ್ತದೆಂದರೆ ಇಲಿಸಿಟ್ ಡಿಸ್ಟಿಲೇಷನ್ ಜಾಸ್ತಿಯಾಗುತ್ತದೆ. Illicit distillation which works out cheap to poor people to drink. ಆವಾಗ ಕುಡಿಯಲಿಕ್ಕೆ ಹೆಚ್ಚು ಬೇಡುತ್ತಾರೆ. ಹೆಚ್ಚಿಗೆ ಬೇಡಿಕೆ ಬಂದಾಗ ಇಲಿಸಿಟ್ ಡಿಸ್ಟಿಲೇಶನ್ ಮಾಡತಕ್ಕಂಥವರು ಡಿಮ್ಯಾಂಡ್ ಮೀಟ್ ಮಾಡಲಿಕ್ಕೆ ಹೆಚ್ಚು ಡಿಸ್ಟಿಲೇಷನ್ ಮಾಡಲಿಕ್ಕೆ ಹೋಗುತ್ತಾರೆ. ಜಾಸ್ತಿ ಮಾಡಿದಂತೆಲ್ಲಾ ಕುಡಿಯುವವರು ಜಾಸ್ತಿಯಾಗುತ್ತಾರೆ. ಆದ್ದರಿಂದ ಏನಾಗುತ್ತದೆಂದರೆ that becomes poisonous drink to the people ಇದರಿಂದ hootch tragedy ಜಾಸ್ತಿಯಾಗುತ್ತದೆ ಮತ್ತು loss to the Government revenue ಆಗುತ್ತದೆ. ಆಮೇಲೆ ನಾವು ಬರತಕ್ಕಂಥ ಇನ್‌ಕಮ್‌ನ್ನು ಬಂದೋಬಸ್ತ್ ಮಾಡಿಕೊಳ್ಳಬೇಕಾಗಿದ್ದರೆ ಅಲ್ಲಿ. ಸಧ್ಯಕ್ಕೆ ಬರುತ್ತಿರುವ ಕಡೆ ಸ್ಕ್ವರುಲ್ ಮಾಡಲಿಕ್ಕೆ ಹೋದರೆ ಈ ಅಸ್ಥವ್ಯಸ್ತ ನಮಗೆ ಕಂಡ ಬರುತ್ತದೆ. ಇದು ಒಂದು ಉದಾಹರಣೆ.

ಸ್ವಾಮಿ ಎಜುಕೇಷನ್ ಬಗ್ಗೆ ಹೇಳುವುದಾದರೆ ಮೆಡಿಕಲ್ ಕಾಲೇಜುಗಳನ್ನು ಹೊಸದಾಗಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಮಾನ್ಯ ಬಂಗಾರಪ್ಪನವರು ಹೇಳಿದ ಪ್ರಕಾರ ಇರತಕ್ಕಂಥ ಮೆಡಿಕಲ್ ಕಾಲೇಜುಗಳಿಗೆ ಹಾಸ್ಟೆಲ್‌ಗಳಲ್ಲಿ ಬಹಳ ಕಷ್ಟವಾಗಿದೆ. ಅಕಾಮಿಡೇಶನ್ ಸರಿಯಿಲ್ಲ. ಬಳ್ಳಾರಿ ಮೆಡಿಕಲ್ ಕಾಲೇಜ್‌ನಲ್ಲಿ ಅಕಾಮಿಡೇಷನ್ ಇಲ್ಲ. ಸ್ಕೂಲ್ ರೂಮ್ಸ್, ಆಪರೇಷನ್ ಥಿಯೇಟರ್ ಎಲ್ಲಾ ಕಂಜೆಸ್ಟೆಡ್. ಅದೇರೀತಿಯಲ್ಲಿ ಮೆಡಿಕಲ್ ಕಾಲೇಜ್ ಹಾಸ್ಟೆಲ್ ಕೂಡ ಒಂದೊಂದು ರೂಮ್ ೧೧x೧೨ ಅಡಿ ಮತ್ತು ೧೦x೫ ಅಡಿ ರೂಮ್ಸ್‌ನಲ್ಲಿ ೫–೬ ಮಂದಿ ಸ್ಟೂಡೆಂಟ್ಸ್ ಓದಿಕೊಳ್ಳುತ್ತಿದ್ದಾರೆ. ಇದರಿಂದಕ್ಕೆ ಬಹಳ ಕಷ್ಟವಾಗಿದೆ. ಬಳ್ಳಾರಿಗೆ ಕನ್ನಡ ಪ್ರಭಾದವರು ದಿನಾಂಕ ೧–೨–೧೯೮೭ ರಲ್ಲಿ ಬಂದು ನೋಡಿಕೊಂಡು ಡಿಟೇಲ್ ಫೋಟೋಗ್ರಾಫ್ ತೆಗೆದುಕೊಂಡು ಡಿಟೇಲ್ ಫೋಟೋಗ್ರಾಫ್ ತೆಗೆದುಕೊಂಡು ಕೊಟ್ಟಿದ್ದಾರೆ. ಇಷ್ಟು ತೊಂದರೆ ಇದೆ. ಮೆಡಿಕಲ್ ಕಾಲೇಜುಗಳ ಬಗ್ಗೆ ತಾವು ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಟೆಂಪರರಿ ಅಕಾಮಡೇಷನ್ ಮತ್ತೊಂದು ಏನು ಇಲ್ಲ. ಹಾಗೆಯೇ ಮುಂದುವರಿಸುತ್ತಿದ್ದಾರೆ. ಅದೇರೀತಿಯಲ್ಲಿ ಲ್ಯಾವೆಟ್ರಿ, ಯೂರಿನಲ್ಸ್ ಎಲ್ಲಾ ಸ್ವಚ್ಛತೆಗೊಳಿಸಲು ರಿಕ್ವೆಸ್ಟ್ ಮಾಡಿ ಕೊಂಡರೂ ಕೂಡ ಗಮನ ಹರಿಸಿಲ್ಲ ಈರೀತಿಯಾದ ತೊಂದರೆ ಇರುತ್ತದೆ. ಈ ರೀತಿ ತೊಂದರೆ ನಡೆಯುತ್ತಿದೆ. ಎಜುಕೇಷನ್ ಪಾಲಿಸಿಯಲ್ಲಿ ಏನೇನು ಮಾಡುತ್ತಾರೆಂದರೆ ಇರುವುದನ್ನು ಕ್ಲಿಯರ್ ಆಗಿ ಇಟ್ಟುಕೊಳ್ಳುವುದಿಲ್ಲ. ಆಗಲೇ ಮುಂದಕ್ಕೆ ಹಾರುವುದಕ್ಕೆ ಹೋಗುತ್ತಾರೆ ಇದನ್ನು ಕಂಟ್ರೋಲ್ ಮಾಡಿ, ಜಾಗ್ರತೆ ಮಾಡಿ ಕೊಡುತ್ತಿಲ್ಲ. ಎಕ್ಸ್‌ಪ್ಯಾನಷನ್ ಮಾಡಿದರೂ ಪರವಾಗಿಲ್ಲವೆಂದು ಮಾಡಿಕೊಂಡು ಹೋಗುತ್ತಾರೆ. ಇದು ಸರಿಯಲ್ಲ.

ಇನ್ನು ಸ್ಪೋರ್ಟ್ಸ್ ಬಗ್ಗೆ ಹೇಳುವುದಾದರೆ. ಬಡ್ಜೆಟ್‌ನಲ್ಲಿ ಕೆಲವು ಬೆನಿಫಿಟ್‌ನಲ್ಲಿ ಕೊಟ್ಟಿದ್ದಾರೆ. ರೂರಲ್ ಯೂತ್ಸ್ ಸಾಕಷ್ಟು ಟ್ಯಾಲೆಂಟೆಡ್ ಸ್ಟೂಡೆಂಟ್ಸ್ ಇದ್ದಾರೆ ಅವರನ್ನು ಯಾವ ರೀತಿ ಎಳೆದುಕೊಂಡು ಬರಬೇಕು, ಯಾವ ರೀತಿ ಅವರನ್ನು ಸ್ಟೇಟ್ ಲೆವೆಲ್ ಅಥವಾ ನ್ಯಾಷನಲ್ ಲೆವಲ್‌ಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂಬ ಬಗ್ಗೆ ಯಾರೂ ವಿಚಾರ ಮಾಡಿಲ್ಲ. ನಮ್ಮ ಕೂಡ್ಲಿಗಿ ತಾಲ್ಲೂಕಿನಲ್ಲಿ ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ಏರ್ಪಡಿಸುತ್ತಿದ್ದೇವೆ. ನಮಗೆ ಸರ್ಕಾರ ಕೊಡತಕ್ಕ ಹಣ ಒಂದು ಒಂದೂವರೆ ಸಾವಿರ ರೂಪಾಯಿಗಳು ಮಾತ್ರ. ದಿನಕ್ಕೆ ೪–೫ ನೂರು ವಿದ್ಯಾರ್ಥಿಗಳನ್ನು ಫೀಡ್ ಮಾಡಬೇಕು ಹತ್ತು ದಿನದ ಸ್ಪೋರ್ಟ್ಸ್ ಇರುತ್ತದೆ. ಇದಕ್ಕೆ ಒಂದೂವರೆ ಸಾವಿರ ರೂಪಾಯಿಗಳ ಸಾಕಾಗುತ್ತದೆಯೆ ? ಕನಿಷ್ಟ ೨೫–೩೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಒಟ್ಟಿನಲ್ಲಿ ಸ್ಪೋರ್ಟ್ಸ್ ಬಗ್ಗೆ ಬಡ್ಜೆಟ್ಟಿನಲ್ಲಿ ಕಡಿಮೆ ಗಮನ ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ.

ಇಲ್ಲಿಸಿಟ್ ಡಿಸ್ಟಿಲೇಷನ್‌ದಲ್ಲಿ, ಮಾಲ್‌ಪ್ರಾಕ್ಟೀಸ್ ಟ್ಯಾಕ್ಸ್ ಅವಾಯಿಡ್ ಮಾಡುವುದು, ಸ್ಮಗ್ಲಿಂಗ್ ಸ್ಮಗ್ಲಿಂಗ್ ಆಫ್ ಗೂಡ್ಸ್, ಫಾರೆಸ್ಟ್‌ನಲ್ಲಿ ಕೂಡ ಇವೆಲ್ಲ ನಡೆಯುತ್ತಿವೆ. ಸ್ಮಗ್ಲಿಂಗ್ ಆಫ್ ಗೂಡ್ಸ್ ಒಳಗಿನಿಂದ ಹೊರಗಡೆ ಹೋಗತಕ್ಕದ್ದು, ಹೊರಗಿನಿಂದ ಒಳಗಡೆ ಇರತಕ್ಕದ್ದು ಇವೆಲ್ಲವನ್ನು ಕಂಟ್ರೋಲ್ ಮಾಡುವುದಕ್ಕೆ ಹೆಚ್ಚು. ಸ್ಟಾಫ್ ಕೊಟ್ಟಿಲ್ಲ. ಎಕ್ಸೈಸ್ ಇಲಾಖೆಯಲ್ಲಿರತಕ್ಕ ಸಿಬ್ಬಂದಿ ವರ್ಗಕ್ಕೆ ಇವತ್ತಿಗೂ ಅಲ್ಲಿಂದ ಟ್ರಾನ್ಸ್‌ಫರ್ ಆಗುವುದಕ್ಕೆ ಮನಸ್ಸು ಇಲ್ಲ. ಕೆಲವು ಕಚೇರಿಗಳಲ್ಲಿ ಲೈಟ್ ಹಾಕುವುದಕ್ಕೆ ದುಡ್ಡಿಲ್ಲ. ಅಂಥ ಕಡೆ ಲೋಕಲ್ ಪೀಪಲ್ ಮತ್ತು ಕಂಟ್ರಾಕ್ಟರ್ಸ್ ಅನ್ನು ಅವಲಂಬಿಸಲೇಬೇಕಾಗುತ್ತದೆ. ಅವರು ಹೇಳಿದ ಹಾಗೆ ಕೇಳಬೇಕಾಗಿದೆಯೇ ಹೊರತು ಸ್ವಂತಕ್ಕೆ ಮಾಡುವುದಕ್ಕೆ ಏನೂ ಇಲ್ಲ. ಹಾಗೆ ಇರಬೇಕಾದರೆ, ಅವರು ಹೇಳಿದಂತೆ ಕೇಳಬೇಕಾದರೆ, ಸುಮ್ಮನಿರಿ ಎಂದರೆ ಸುಮ್ಮನಿರಬೇಕಾಗುತ್ತದೆ. ಈ ರೀತಿ ಸಮಸ್ಯೆಗಳಿವೆ. ಅದೇ ರೀತಿ ಪೋಲೀಸ್ ಇಲಾಖೆಯಲ್ಲಿ ಕೂಡ ನಡೆಯುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿರತಕ್ಕ ಪೋಲೀಸ್ ಸ್ಟೇಷನ್‌ನಲ್ಲಿ ಸಾಕಷ್ಟು ಸ್ಟಾಫ್ ಇಲ್ಲ ಮೊದಲು ಪತ್ರಿಕೆಯಲ್ಲಿ ಓದಿದ ಅಲ್ಲಿರತಕ್ಕವರ ಹತ್ತಿರ ಅಬ್ಬರ ಇಲ್ಲ, ಗುಂಡೂ ಇಲ್ಲ, ರೈಫಲ್‌ಗಳು ಮೊದಲೇ ಇಲ್ಲ. ಸಾಕಷ್ಟು ಪೋಲೀಸ್ ಸ್ಟೇಷನ್‌ಗಳು ರೆಂಟೆಡ್ ಹೌಸಸ್‌ನಲ್ಲಿವೆ. ಕ್ವಾರ್ಟರ್ ಪರಿಸ್ಥಿತಿಯೂ ಇದೇ ರೀತಿ ಆಗಿದೆ. ಹೀಗಾಗಿ ಅವರಿಗೆ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ದಾರಿ ಇಲ್ಲವಾಗಿದೆ. ಆದ್ದರಿಂದ ಮೊದಲು ಸ್ಟಾಫ್, ಕ್ವಾರ್ಟರ್ಸ್, ಮೆಷಿನರೀಸ್, ಮೆಟೀರಿಯಲ್ಸ್ ಕೊಟ್ಟು ಬಂದೋಬಸ್ತು ಮಾಡಿದರೆ ಮಾಲ್‌ಪ್ರಾಕ್ಟೀಸ್ ಸ್ಮಗ್ಲಿಂಗ್ ಇವನ್ನೆಲ್ಲ ಬಂದೋಬಸ್ತು ಮಾಡು ವುದಕ್ಕಾಗುತ್ತದೆ. ಇಂಡಸ್ಟ್ರೀಸ್‌ನಲ್ಲಿ ಸಾಕಷ್ಟು ಉತ್ಪತ್ತಿ ಮಾಡಿದರೆ, ಅವುಗಳನ್ನು ಬಿಸಿನೆಸ್ ಟೈಪ್‌ನಲ್ಲಿ ಮಾಡಿದರೆ ಅನುಕೂಲವಾಗುತ್ತದೆ. ಎಲ್ಲೆಲ್ಲಿ ಲೀಕೇಜ್ ಇದೆ ಅದನ್ನು ಬಂದೋಬಸ್ತು ಮಾಡಿದರೆ ನಮ್ಮ ಬ್ಯಾಲೆನ್ಸ್ ಷೀಟನ್ನು ಬಡ್ಜೆಟ್ಟನ್ನು ಈಕ್ವಲೈಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಓಲ್ಡ್ ಗೂಡ್ಸ್ ಅನ್ನು ಆಗಾಗ್ಗೆ ಬದಲಾವಣೆ ಮಾಡುತ್ತಿರಬೇಕಾಗುತ್ತದೆ ಆಟೋಮೊಬೈಲ್, ಆಗಲಿ, ಮೆಷಿನರಿ ಆಗಲಿ ಅವು ಗವರ್ನಮೆಂಟ್ ಇಂಡಸ್ಟ್ರಿಯಲ್ಲಿರಲಿ, ಅಥವಾ ಯಾವುದೇ ಇಲಾಖೆಯಲ್ಲಿರಲಿ ಅವುಗಳನ್ನು ಬದಲಾವಣೆ ಮಾಡುತ್ತಿರಬೇಕು. ಪಿ. ಹೆಚ್. ಇ.ಯಲ್ಲಿ, ಬಳ್ಳಾರಿ ಡಿ.ಹೆಚ್.ಓ. ಕಚೇರಿ ಯಲ್ಲಿ ನೋಡುತ್ತಿದ್ದೇವೆ ಅಲ್ಲಿ ಸುಮಾರು ೧೫ ವರ್ಷಗಳಿಂದ ವೆಹಿಕಲ್ಸ್ ಹಾಗೆಯೇ ಬಿದ್ದಿವೆ. ಓಲ್ಡ್ ವೆಹಿಕಲ್ಸ್ ವೇಸ್ಟ್ ಆಗಿ ಕಾಂಪೌಂಡ್‌ನಲ್ಲಿ ಬಿದ್ದಿವೆ. ಅಂಥವನ್ನು ಡಿಸ್‌ಪೋಸ್ ಮಾಡಿದರೆ ಬುಕ್ ವ್ಯಾಲ್ಯು ಆದರೂ ಬರುತ್ತದೆ. ೧೫ ವರ್ಷದಿಂದ ಕಂಡೆಂ ಆಗಿ ಬಿದ್ದಿರುವ ವಾಹನಗಳ ಬುಕ್ ವ್ಯಾಲ್ಯು ತೆಗೆದುಕೊಂಡರೆ ಜೀರೋ ಆಗುತ್ತದೆ. ಅವನ್ನು ಹೇಗೆ ಅಕೌಂಟ್ ಮಾಡುತ್ತೀರಿ, ಹೇಗೆ ವ್ಯಾಲ್ಯೂ ಮಾಡುತ್ತೀರಿ ?

ನಮ್ಮ ಊರಿನಲ್ಲಿ ಆಸ್ಪತ್ರೆಯಲ್ಲಿ ಒಂದು ಆಂಬುಲೆನ್ಸ್ ವ್ಯಾನ್ ಇತ್ತು. ಅದರ ಬ್ಯಾಟರಿ ಮೇಲೆ ನಾಲ್ಕು ರೂಪಾಯಿಯ ಟರ್ಮಿನಲ್ ಹಾಕಬೇಕಾಗಿತ್ತು. ಅದನ್ನು ತಂದು ಹಾಕುವುದಕ್ಕೆ ೬ ತಿಂಗಳಾಯಿತು. ಟರ್ಮಿನಲ್ ಬರುವ ಹೊತ್ತಿಗೆ ಬ್ಯಾಟರಿ ಡೌನ್ ಆಯಿತು. ಬ್ಯಾಟರಿ ರೆಡಿ ಮಾಡಿ ಕೊಂಡು ಬರುವ ಹೊತ್ತಿಗೆ ಟೈರ್ ಫ್ಲಾಟ್ ಆಯಿತು. Today that vehicle has been condemned just because for want of Rs 4 and this is how we are losing our money. ನಾಲ್ಕು ರೂಪಾಯಿಗೋಸ್ಕರ ೧ ಲಕ್ಷ ರೂಪಾಯಿಯ ವೆಹಿಕಲ್ ಕಂಡಮ್ ಆಯಿತು. ಈ ರೀತಿಯ ಲಾಸನ್ನು ಯಾವ ರೀತಿ ತಡೆಗಟ್ಟಬೇಕು ಎಂಬುದನ್ನು ಯೋಚನೆ ಮಾಡಿ. ಕ್ವಿಕ್ಕಾಗಿ ನಾವು ಕೆಲಸ ಮಾಡಿದರೆ we would have saved that one lakh rupees worth vehicle. Just because for want of Rs. 4 . Rs.1 lakh of worth vehicle was lost ಈ ರೀತಿ ಎಷ್ಟಾಗಿರಬಹುದು. ಇದೇ ರೀತಿ ಡಿಸ್ಟ್ರಿಕ್ಟ್ ಆಫೀಸ್‌ನಲ್ಲಿ ಎಷ್ಟು ವೆಹಿಕಲ್ಸ್ ನಿಂತಿದೆ ಎಂಬುದನ್ನು ನೋಡಿ ಎಲ್ಲಾ ಡಿಸ್ಟ್ರಿಕ್ಟ್‌ನಲ್ಲೂ ಈ ರೀತಿಯಾಗುತ್ತಿದೆ. ಅದನ್ನೆಲ್ಲಾ ಏತಕ್ಕೆ ಸೇಲ್ ಮಾಡಬಾರದಾಗಿತ್ತು ! ಬುಕ್‌ವ್ಯಾಲ್ಯೂ ಜಾಸ್ತಿ ಇದ್ದಾಗ ಸೇಲ್ ಮಾಡದೆ ೧೫–೨೦ ವರ್ಷ ಆದಮೇಲೆ ಸೇಲ್ ಮಾಡಬೇಕೆಂದರೆ ಬುಕ್ ವ್ಯಾಲ್ಯೂ ಜೀರೋಗೆ ಬಂದಿರುತ್ತದೆ. ಆಗ ಯಾವ ರೀತಿ ಸೇಲ್ ಮಾಡು ತ್ತೀರಿ ? it will fetch only scrap value, which is again a loss to the budget. ಇನ್ನು ಕೆಲವು ಅಂಶ ಹೇಳಬೇಕಾಗಿದೆ. ಅಗ್ರಿ ಕಲ್ಚರಿಸ್ಟ್‌ಗೆ ಡ್ರಿಪ್ ಇರಿಗೇಷನ್ ಬಹಳ ಒಳ್ಳೆಯದು. ಅದನ್ನು ಮಾಡಿಲ್ಲ. ಸ್ಪ್ರಿಂಕ್ಲರ್ ಮೂಲಕ ನೀರನ್ನು ಉಪಯೋಗ ಮಾಡುವುದ

ರಿಂದ ಡ್ರೈ ಕ್ರಾಪ್ಸ್‌ಗೆ ಡಿಸೀಸಸ್ ಕಡಿಮೆಯಾಗುತ್ತದೆ. ಏಕೆಂದರೆ ಅದರಪ್ರೆಷರ್‌ಗೆ ಇನ್‌ಸೆಕ್ಟ್ ವಾಷ್ ಆಗುತ್ತದೆ. ಅದರಿಂದ ಬೆಳೆ ಚೆನ್ನಾಗಿ ಬರುತ್ತದೆ. ಆದರೂ ಇದರ ಬಗ್ಗೆ ತಾವು ನಿಗಾ ಕೊಟ್ಟಿಲ್ಲ. ಸೋಲಾರ್ ಎನರ್ಜಿ ಬಗ್ಗೆ ಹೇಳುವುದಾದರೆ ಇದು ಫ್ಯೂಚರ್ ಜನರೇಷನ್‌ನಲ್ಲಿ It is going to acquire a most important and Vital role for future generation ಈಗಿನಿಂದ ಅದನ್ನು ಮಾಡಬೇಕಾಗುತ್ತದೆ. ಕೊನೇ ಪಕ್ಷ ಡೊಮೆಸ್ಟಿಕ್ ಯೂಸ್‌ಗೆ ಮತ್ತು ಅಗ್ರಿಕಲ್ಚರ್‌ನಲ್ಲಿ ಸೋಲಾರ್ ಎನರ್ಜಿಯಿಂದ ಉಪಯೋಗ ಮಾಡಿಕೊಂಡರೆ ಥರ್ಮಲ್ ಹೈಡ್ರೋ ಎಲೆಕ್ಟ್ರಿಸಿಟಿಯಿಂದ ಏನು ಪವರ್ ಕೊಡುತ್ತಿದ್ದೇವೋ ಅದು ಉಳಿತಾಯವಾಗುತ್ತದೆ. ಆ ಪವರನ್ನು ಹೆವಿ ಇಂಡಸ್ಟ್ರೀಸ್‌ಗೆ ಉಪಯೋಗಿಸಿಕೊಳ್ಳಬಹುದು. ಆ ರೀತಿ ಮಾಡಿ ಆದಾಯ ಹೆಚ್ಚು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ಅಗ್ರಿಕಲ್ಚರ್‌ಗೆ ಮತ್ತು ಡೊಮೆಸ್ಟಿಕ್ ಪವರ್‌ಗೆ ಸೋಲಾರ್ ಎನರ್ಜಿಯಿಂದ ಮೀಟ್ ಮಾಡಿದರೆ ಅದರಿಂದ ಉಳಿಯುವ ಪವರನ್ನು ಹೆವಿ ಇಂಡಸ್ಟ್ರೀಸ್‌ಗೆ ಮತ್ತು ರಾಜ್ಯದ ಇತರ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಬಹುದು. ಹಳ್ಳಿಗಳಲ್ಲಿ ರೈತರಿಗೆ ಸಾಕಷ್ಟು ಲುಕ್ಸಾನಾಗುತ್ತಿದೆ. ಅದರಲ್ಲೂ ಹಾಟ್ ಕ್ಲೈಮೇಟ್ಸ್‌ನಲ್ಲಿ ಫೈರ್ ಆಕ್ಸಿಡೆಂಟ್ ಆದರೆ ಹ್ಯೂಮನ್ ಲೈಫ್ ಅಲ್ಲದೆ ಕ್ಯಾಟಲ್, ಫುಡ್‌ಗ್ರೈನ್ಸ್, ಫಾಡರ್ ಇಂಥದ್ದೆಲ್ಲ ಹೋಗುತ್ತದೆ. ಇದನ್ನು ತಡೆಗಟ್ಟಬೇಕಾದರೆ ಪ್ರತಿ ತಾಲ್ಲೂಕು ಕೇಂದ್ರದಲ್ಲೂ ಫೈರ್ ಸ್ಟೇಷನ್ ಆಗಬೇಕು. ಡಿಸ್ಟ್ರಿಕ್ಟ್‌ನಿಂದ ೬೦ ಮೈಲಿ ದೂರದಿಂದ ಫೈರ್ ಇಂಜಿನ್ ಬರುವ ಹೊತ್ತಿಗೆ ಎಲ್ಲಾ ಸುಟ್ಟು ಬೂದಿ ಆಗಿರುತ್ತದೆ. ಫೈರ್ ಆಕ್ಸಿಡೆಂಟಿನಿಂದ ಲುಕ್ಸಾನು ಹೆಚ್ಚು ಅನುಭವಿಸುತ್ತಿರುವುದು ರೂರಲ್ ಏರಿಯಾದಲ್ಲಿ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಒಂದೊಂದು ಫೈರ್ ಸ್ಟೇಷನ್ ಏತಕ್ಕೆ ಕೊಡಬಾರದು? ಅದು ಬಹಳ ಮುಖ್ಯ ಇದೆ. ಅದನ್ನು ಮಾಡಿಲ್ಲ. ಫಾರೆಸ್ಟ್‌ನಲ್ಲಿ ಪ್ಲಾಂಟೇಷನ್ ಮಾಡುವುದಾಗಲೀ ಅಫೋರೆಸ್ಟೇಷನ್ ಪ್ರೋಗ್ರಾಂ ಆಗಲಿ ಒಳ್ಳೆಯ ಕಾರ್ಯಕ್ರಮಗಳು. ಅದನ್ನು ಒಪ್ಪಿಕೊಳ್ಳೋಣ. ಆದರೆ ರೂರಲ್ ಏರಿಯಾದಲ್ಲಿ ಜನರಿಗೆ ಅದರ ಬಗ್ಗೆ ತಿಳುವಳಿಕೆ ಕೊಡುವವರೆಗೆ ನಿಮ್ಮ ಪ್ರೋಗ್ರಾಂಸ್ ಇಂಪ್ಲಿಮೆಂಟ್ ಆಗುವುದಕ್ಕೆ ಸಾಧ್ಯವಿಲ್ಲ. ಗಿಡ ಹಾಕಿ ಬಂದರೆ ಅದಕ್ಕೆ ಎಮ್ಮೆ ಕರು ಕಟ್ಟಿ ಬರುತ್ತಾರೆ. ಅದು ಆಮೇಲೆ ಮೇಯ್ದು ಬಿಡುತ್ತದೆ. ಕೆಳಗೆ ಗೂಟ ಕಿತ್ತುಕೊಂಡು ಹೋಗುತ್ತದೆ. ಕೆಲವು ಕಡೆ ಪ್ಲಾಂಟೇಷನ್ ಮಾಡಿದ ಕಡೆ ಮಳೆ ಇಲ್ಲದೆ ನೀರಿಲ್ಲದೆ ಅದು ಡ್ರೈ ಆಗಿದೆ. ಸುತ್ತ ಮುತ್ತ ಇರತಕ್ಕ ಹಳ್ಳಿ ಜನರಿಗೆ ಆಸಕ್ತಿ ಬಂದರೆ ಅದನ್ನು ಕಾಪಾಡುವುದಕ್ಕೆ ಸಾಧ್ಯವಿದೆ. ಡಿಪಾರ್ಟ್‌ಮೆಂಟೊಂದನ್ನೇ ನಂಬಿದರೆ ಕಾಪಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದಕ್ಕೆ ಬಜೆಟ್‌ನಲ್ಲಿ ಹೆಚ್ಚು ಪ್ರಾವಿಷನ್ ಮಾಡಬೇಕು. ಮತ್ತು ಅದರ ಬಗ್ಗೆ ತಿಳುವಳಿಕೆ ಕೊಡುವುದಕ್ಕೆ ಮಾಡಿಯು ತಯಾರು ಮಾಡಿ ರೂರಲ್ ಏರಿಯಾದಲ್ಲಿ ಇಂಟೀರಿಯರ್ ವಿಲೇಜಸ್‌ಗೆ ತಿಳಿಸುವುದಕ್ಕೆ ಪ್ರಯತ್ನ ಮಾಡಬೇಕು.

ಆಮೇಲೆ ಇನ್ನೊಂದು ವಿಷಯ ಅಂದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಬರುತ್ತಾರೆ, ಯಾವಾಗ ಬರುವುದಿಲ್ಲ ಎಂಬುದು ಗೊತ್ತೇ ಆಗುವುದಿಲ್ಲ. ಅವರ ಗೂಟದ ಕಾರು ಇಲ್ಲದಿದ್ದರು ಅಷ್ಟೇ ಹೋಯಿತು. ಸ್ವಂತ ಕಾರನ್ನೇ ಉಪಯೋಗಿಸಿಕೊಂಡು ಬರುತ್ತಾರೆ. ರಾತ್ರೋ ರಾತ್ರಿ ಬರುತ್ತಾರೆ. ಆದರೂ ಈ ಬಜೆಟ್ಟಿನಲ್ಲಿ ಮಾತ್ರ ಈ ರೀತಿ ಖೋತಾ ಬಂದಿರುವುದು ಅವರು ಬೇರೊಂದು ಆಲೋಚನೆಯಲ್ಲಿರುವುದು ಒಂದು ಕಾರಣ ಎಂದು ನನಗನ್ನಿಸುತ್ತಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಬಜೆಟ್ ಮಾಡುವುದು ಗೊತ್ತಿಲ್ಲ ಎಂದು ಅಲ್ಲ. ಆದರೆ ನಾನು ಹೇಳಿದ ಮೊದಲನೆಯ ಪಾಯಿಂಟ್‌ನ್ನು ಅವರು ಮಾಡಬಹುದಾಗಿತ್ತು. ಅದೇನೆಂದರೆ, when the above points are not considered ie., 'when budget is blended with politics then the budget runs into deficit.' ಎಂದು ಹೇಳಿ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.